# ಮುನ್ನುಡಿ

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಒಂದು ವಿಶಿಷ್ಠ ಅಂಶವಾಗಿದೆ. ಏಷ್ಯಾ ಖಂಡದ ಇತರೆ ರಾಷ್ಟ್ರಗಳಲ್ಲಿ ಜಾತಿಯ ಕೆಲ ಅಂಶಗಳು ಕಂಡು ಬಂದರೂ, ಭಾರತದಲ್ಲಿ ಮಾತ್ರ ಸಾಮಾಜಿಕ ವ್ಯವಸ್ಥೆಯ ಭಾಗವಾಗಿ ಅದಕ್ಕೊಂದು ಸಾಂಸ್ಥಿಕ ರೂಪವನ್ನು ನೀಡ ಲಾಗಿದೆ. ಕೆಲವು ಸಾವಿರ ವರ್ಷಗಳ ಹಿಂದೆಯೇ ಜಾತಿ ಪದ್ದತಿ ಹುಟ್ಟಿ ನಂತರ ಅನೇಕ ಸಾಮಾಜಿಕ ಬದಲಾವಣೆಗಳು ಉಂಟಾಗಿದ್ದರೂ ಜಾತಿ ವ್ಯವಸ್ಥೆ ಮಾತ್ರ ನಮ್ಮ ಸಮಾಜ ದಲ್ಲಿ ಆಳವಾಗಿ ಬೇರೂರಿ ಮುಂದುವರಿದುಕೊಂಡೇ ಬಂದಿದೆ. ಹೀಗಾಗಿ ಸಾಮಾಜಿಕ ಬದಲಾವಣೆಯ ಬಗ್ಗೆ ಕಾಳಜಿ ಹೊಂದಿರುವ ಯಾವುದೇ ವ್ಯಕ್ತಿ/ಸಂಘಟನೆ ಈ ಜಾತಿ ವ್ಯವಸ್ಥೆಯ ಬಗ್ಗೆ ಸರಿಯಾದ ನಿಲುವನ್ನು ಹಾಗೂ ಅದರ ಆಚರಣೆಗಳ ಸತ್ಯಾಸತ್ಯತೆಯನ್ನು ವಿವೇಚಿಸಬೇಕಾದ ಅನಿವಾರ್ಯ ಪರಿಸ್ಥಿತಿ ಇಂದಿದೆ.

ಇಂದು ಜಾತಿಗೆ ಸಂಬಂಧಿಸಿದಂತೆ ಎರಡು ವಿಭಿನ್ನ ದೃಷ್ಟಿಕೋನಗಳು, ಪ್ರಕ್ರಿಯೆಗಳು ಅಸ್ತಿತ್ವದಲ್ಲಿವೆ.

1. ಜಾತಿ ಪದ್ಧತಿಯನ್ನು ಬಲಹೀನಗೊಳಿಸುವ ದಿಕ್ಕಿನಲ್ಲಿ ಹಿಂದುಳಿದ ಹಾಗೂ ದಲಿತ ಜನಾಂಗದ ಹೋರಾಟಗಳು ತೀವ್ರಗೊಳ್ಳುತ್ತಿವೆ. ಮುಖ್ಯವಾಗಿ ದಲಿತರು ಅಸ್ಪೃಶ್ಯತೆಯ ವಿರುದ್ಧ, ಮತ್ತವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಅತ್ಯಾಚಾರಗಳ ವಿರುದ್ಧ ಹಾಗೂ ಸಾಮಾಜಿಕ ಸಮಾನತೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಒಗ್ಗೂಡುತ್ತಿದ್ದಾರೆ.

2. ಎರಡನೆಯದಾಗಿ ಜಾತಿ ಪದ್ಧತಿಯನ್ನು ಮತ್ತಷ್ಟು ಬಲಪಡಿಸುವ ವಿದ್ಯಮಾನ ಗಳು, ಒಂದೇ ಜಾತಿಗೆ ಸೇರಿದ ಜನರು ತಮ್ಮ ತಮ್ಮ ಜಾತಿಗಳನ್ನು ಕ್ರೂಢೀಕರಿಸಿಕೊಳ್ಳಲು ಯತ್ನಿಸುವ ಬೆಳವಣಿಗೆಗಳು ನಡೆಯುತ್ತಿವೆ. ದಲಿತರೊಳಗೇ ಹೊಲೆಯರು ಮತ್ತು ಮಾದಿಗರು ತಂತಮ್ಮ ಜಾತಿಯೊಳಗೇ ಬಿಗಿಯಾಗುತ್ತಿದ್ದಾರೆ. ಅದೇ ರೀತಿಯಲ್ಲಿ ಹಿಂದುಳಿದ ಜನರಲ್ಲಿ ಗೊಲ್ಲ, ಕುರುಬ, ಕುಂಬಾರ, ಬಡಿಗ ಎಂದು ತಮ್ಮ ತಮ್ಮ ಜಾತಿಯೊಳಗೇ ಮತ್ತಷ್ಟು ಕ್ರೂಢೀಕೃತಗೊಳ್ಳತೊಡಗಿದ್ದಾರೆ. ಲಿಂಗಾಯತ, ಬ್ರಾಹ್ಮಣ, ಒಕ್ಕಲಿಗ, ಬಣಜಿಗ ಮುಂತಾದ ಜಾತಿಗಳಲ್ಲಿ ಕೂಡ ಇದೇ ರೀತಿಯ ವಿದ್ಯಮಾನಗಳು ಕಂಡುಬರುತ್ತಿವೆ. ಅದರೊಂದಿಗೆ ಹಿಂದುಳಿದ ಹಾಗೂ ದಲಿತ ಜಾತಿಗಳು ತಮ್ಮ ಬೇಡಿಕೆ ಗಳಿಗಾಗಿ ಒಗ್ಗೂಡಿ ಹೋರಾಡುತ್ತಿರುವಾಗ ಮೇಲ್ಜಾತಿ ಸವರ್ಣೀಯರೆಲ್ಲಾ ಒಗ್ಗೂಡಿ ಅದನ್ನು ವಿರೋಧಿಸುವ ಪ್ರಕ್ರಿಯೆಯೂ ನಡೆದಿದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ದಲಿತರು ತಮ್ಮ ಹಕ್ಕುಗಳಿಗಾಗಿ, ಜಾತಿ ದಮನದ ವಿರುದ್ಧವಾಗಿ ಹೋರಾಡುವಾಗ ಎಲ್ಲಾ ಮೇಲ್ಜಾತಿ ಹಾಗೂ ಹಿಂದುಳಿದ ಜಾತಿಗಳು ಒಗ್ಗೂಡಿ ಅದನ್ನು ವಿರೋಧಿಸುವ ಬೆಳವಣಿಗೆ ಕಂಡುಬರುತ್ತಿದೆ. ಇದೂ ಕೂಡ ಜಾತಿ ಪದ್ಧತಿಯನ್ನು ಗಟ್ಟಿಗೊಳಿಸುವ ಅಂಶವೇ ಆಗಿದೆ. ಭಾರತದಾದ್ಯಂತ ಈ ಪರಿಸ್ಥಿತಿ ಕಂಡುಬರುತ್ತಿದೆ.

ಈ ಎರಡನೆಯ ಪ್ರಚಲಿತ ವಿದ್ಯಮಾನದಿಂದ ಎರಡು ಕೆಟ್ಟ ಪರಿಣಾಮಗಳು ಉಂಟಾಗಿವೆ.

1. ಒಂದೇ ಜಾತಿಯೊಳಗಿರುವ ವರ್ಗಬೇಧಗಳನ್ನು ಅದು ಮಸುಕುಗೊಳಿಸುತ್ತದೆ.

2. ವಿಭಿನ್ನ ಜಾತಿಗಳ ಶ್ರಮಿಕ ವರ್ಗದ ಐಕ್ಯತೆಗೆ ಭಂಗ ತರುತ್ತವೆ.

ಈ ಎರಡು ಅಂಶಗಳು ಪ್ರಸ್ತುತ ಸಾಮಾಜಿಕ ವ್ಯವಸ್ಥೆಯ, ಜಾತಿ ವ್ಯವಸ್ಥೆಯ ಉಳಿವಿಗೆ ಸಹಕಾರಿಯಾಗಿವೆ. ಆದ್ದರಿಂದ ಜಾತಿ ವ್ಯವಸ್ಥೆಯ ವಿರುದ್ಧ, ಜಾತಿ ದೌರ್ಜನ್ಯದ ವಿರುದ್ಧ ಹೋರಾಡುವ ಅದೇ ವೇಳೆಯಲ್ಲಿ ಜಾತಿ ಮತ್ತಷ್ಟು ಸದೃಢಗೊಳ್ಳದಂತೆ ಅದನ್ನು ಬಲಹೀನಗೊಳಿಸಿ ನಿರ್ಮೂಲಿಸುವ ನಿಟ್ಟಿನಲ್ಲಿ ಹೋರಾಟವನ್ನು ಕೊಂಡೊಯ್ಯಬೇಕಿದೆ. ಜಾತಿಯ ಹುಟ್ಟಿನಿಂದ ಇಂದಿನವರೆಗೆ ಶ್ರಮಿಕ ವರ್ಗವು ಜಾತಿ ಪದ್ಧತಿಯ ಚೌಕಟ್ಟಿನೊಳಗೆ ಬಂಧಿಸಲ್ಪಟ್ಟು ವಿಭಜಿತಗೊಂಡಿದೆ. ಈ ಗಡಿಗಳನ್ನು ಸ್ಫೋಟಿಸದೆ ಜಾತಿ ವ್ಯವಸ್ಥೆಯನ್ನು ನಿರ್ಮೂಲಿಸುವುದಾಗಲೀ, ಜಾತಿ ದೌರ್ಜನ್ಯವನ್ನು ತಡೆಯುವುದಾಗಲೀ ಸಾಧ್ಯವಿಲ್ಲ. ಹೀಗಾಗಿ ಶ್ರಮಿಕ ವರ್ಗ ಹಾಗೂ ಪ್ರಜಾತಾಂತ್ರಿಕ ಶಕ್ತಿಗಳು ಒಗ್ಗೂಡಿ ತಮ್ಮ ಜಾತಿಯ ಗಡಿಗಳನ್ನು ದಾಟಿ ನಿಲ್ಲಬೇಕಿದೆ. ಅಸ್ಪೃಶ್ಯತೆ ನಾಶವಾಗಬೇಕಿದ್ದಲ್ಲಿ, ದೌರ್ಜನ್ಯ ನಿಲ್ಲಬೇಕಿದ್ದಲ್ಲಿ ಈ ವ್ಯವಸ್ಥೆಯಲ್ಲಿರುವ ಸಾಮಾಜಿಕ ರಚನೆ ಹಾಗೂ ಜಾತಿ ವ್ಯವಸ್ಥೆಯನ್ನು ಕಾಪಾಡುತ್ತಿರುವ ಪ್ರಭುತ್ವವನ್ನು ನಿರ್ಮೂಲಿಸಬೇಕಿರುವ ಅಗತ್ಯವಿದೆ. ಇದಕ್ಕಾಗಿ ಆಯಾ ಜಾತಿಗಳಲ್ಲಿರುವ ಆಳುವ ವರ್ಗದ ಶಕ್ತಿಗಳನ್ನು ಪ್ರತ್ಯೇಕಿಸಿ ಎಲ್ಲಾ ಜಾತಿಗಳ ಶ್ರಮಿಕ ವರ್ಗದ ಜನರನ್ನು, ದಮನಿಸಲ್ಪಟ್ಟ ಜನರನ್ನು ಒಗ್ಗೂಡಿಸಬೇಕಿದೆ. ಅದೇ ವೇಳೆಯಲ್ಲಿ ಸಾವಿರಾರು ವರ್ಷಗಳಿಂದ ಜಾತಿ ದೌರ್ಜನ್ಯಕ್ಕೆ, ದಮನಕ್ಕೆ ಒಳಗಾಗಿರುವ ದಲಿತರು ಜಾತಿ ಆಧಾರದಲ್ಲಿ ಸಂಘಟಿತರಾಗಿ ಜಾತಿ ದೌರ್ಜನ್ಯದ ವಿರುದ್ಧ, ಜಾತಿಯ ತಾರತಮ್ಯದ ವಿರುದ್ಧ ಹೋರಾಡುತ್ತಿರುವುದರಲ್ಲಿನ ಸಕಾರಾತ್ಮಕ ಅಂಶಗಳನ್ನು ನಾವು ಗಣನೆಗೆ ತೆಗೆದು ಕೊಳ್ಳಬೇಕಿರುವುದು ತೀರಾ ಅಗತ್ಯ. ಆ ರೀತಿಯ ಹೋರಾಟಗಳಿಗೆ ಬೆಂಬಲ ನೀಡುವುದ ರೊಂದಿಗೆ ನಮ್ಮ ನಾಯಕತ್ವದಲ್ಲಿಯೂ ಅಂತಹ ಹೋರಾಟಗಳನ್ನು ಮುನ್ನಡೆಸಬೇಕಿದೆ.

ಜಾತಿ ದೌರ್ಜನ್ಯ ಹಾಗೂ ಅತ್ಯಾಚಾರಗಳ ವಿರುದ್ಧ ನಿರ್ದಿಷ್ಟ ಹೋರಾಟಗಳನ್ನು ನಡೆಸದೇ ಹೋದಲ್ಲಿ ಜಾತಿ ಪದ್ಧತಿಯನ್ನು ನಿರ್ಮೂಲಿಸುವುದು ಸಾಧ್ಯವಿಲ್ಲ. ಶ್ರಮಿಕರ ಐಕ್ಯತೆ ಎಂಬ ಹೆಸರಿನಲ್ಲಿ ಜಾತಿ ದೌರ್ಜನ್ಯದ ವಿರುದ್ಧ ಹೋರಾಡದೇ ಇರುವುದು ಕೂಡ ಜಾತಿ ಪದ್ಧತಿಯನ್ನು ಮತ್ತಷ್ಟು ಬಲಿಷ್ಠಗೊಳಿಸುವುದಲ್ಲದೆ ದುಡಿಯುವ ಜನರ ಐಕ್ಯತೆಯನ್ನು ಹಾಳು ಮಾಡುತ್ತದೆ. ಈ ಸಾಮಾಜಿಕ ವ್ಯವಸ್ಥೆಯನ್ನು ಹಾಗೂ ಜಾತಿ ದಬ್ಬಾಳಿಕೆಯನ್ನು ಪ್ರೋತ್ಸಾಹಿಸುವ ಕೆಲಸ ಇದಾಗುತ್ತದೆ.

ಆದ್ದರಿಂದ ಜಾತಿಯನ್ನು ಕೇವಲ ವರ್ಗ ಹೋರಾಟದ ಮೂಲಕ ನಾಶಗೊಳಿಸುತ್ತೇವೆನ್ನುವ ಅಥವಾ ಕೇವಲ ಜಾತಿ ಸಂಘರ್ಷದ ಮೂಲಕ ನಿರ್ಮೂಲಿಸು ತ್ತೇವೆನ್ನುವ ವಾದಗಳು ನಮ್ಮನ್ನು ಅಂತಿಮವಾಗಿ ವಿಜಯದೆಡೆಗೆ ಕೊಂಡೊಯ್ಯುವುದಿಲ್ಲ. ಹೀಗಾಗಿ ಜಾತಿ ಮತ್ತು ವರ್ಗಗಳೆರಡರ ನಡುವಿರುವ ಸಂಬಂಧಗಳನ್ನು ಹಾಗೂ ಸಮಾಜ ವ್ಯವಸ್ಥೆಯಲ್ಲಿ ಇವುಗಳ ಪಾತ್ರಗಳನ್ನು ಚಾರಿತ್ರಿಕವಾಗಿ ನೋಡುವ ಮೂಲಕ ನಾವು ದ್ವಂದ್ವ ರಹಿತವಾದ ಒಂದು ನಿರ್ದಿಷ್ಟ ಸೂತ್ರವನ್ನು ರೂಪಿಸಲು ಸಾಧ್ಯ. ಈ ಮೂಲಕ ಜಾತಿ ಪದ್ಧತಿಯನ್ನು ನಿರ್ಮೂಲಿಸುವ ಹೋರಾಟವನ್ನು ಸಮರ್ಥವಾಗಿ ಮುಂದಕ್ಕೆ ಕೊಂಡೊಯ್ಯಲು ಸಾಧ್ಯ.

# I. ಜಾತಿ ವ್ಯವಸ್ಥೆಯ ಉಗಮ

ಜಾತಿಯ ಹುಟ್ಟು, ಬೆಳವಣಿಗೆ ಮತ್ತದರ ಪಾತ್ರ ಹಾಗೂ ಅದು ಸದೃಢೀಕರಣ ಗೊಂಡಿರುವ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ಆಳುವ ವರ್ಗದ ಪರವಾಗಿರುವ ಸಮಾಜ ಚಿಂತಕರು ಮತ್ತು ಇತಿಹಾಸಕಾರರು ಜಾತಿ ಪದ್ಧತಿಯ ಹುಟ್ಟಿಗೆ ಕಾರಣಗಳನ್ನು ವಿಶ್ಲೇಷಿಸುವ ಬದಲು, ಅದರ ಪಾತ್ರದ ಬಗ್ಗೆ ಸರಿಯಾದ ಚಿತ್ರಣವನ್ನು ಮುಂದಿಡುವ ಬದಲು ಜಾತಿ ಪದ್ಧತಿಯನ್ನು ಸಮರ್ಥಿಸುವ ಸಿದ್ಧಾಂತಗಳನ್ನು ಮುಂದಿಡುತ್ತಾರೆ. ಜಾತಿ, ಎಲ್ಲ ಜನರ ಅಗತ್ಯಕ್ಕಾಗಿ, ಸಮಾಜದ ಸೌಹಾರ್ದತೆಯನ್ನು ಕಾಪಾಡಿ ಅದರ ಸ್ಥಿರತೆಗಾಗಿ ಕೆಲಸ ಮಾಡುತ್ತಿದೆಯೆಂದು ಅವರು ವಾದಿಸುತ್ತಾರೆ.

ಜಾತಿ ಪದ್ಧತಿಯನ್ನು ವಿರೋಧಿಸುವವರನ್ನು ಸೈದ್ಧಾಂತಿಕವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು.

1. ಫುಲೆ-ಪೆರಿಯಾರರ ಆಲೋಚನಾ ವಿಧಾನ ಹೊಂದಿರುವವರು
2. ಅಂಬೇಡ್ಕರರ ಆಲೋಚನಾ ವಿಧಾನ ಹೊಂದಿರುವವರು.
3. ಮಾರ್ಕ್ಸ್‌ವಾದದ ಆಲೋಚನಾ ವಿಧಾನ ಹೊಂದಿರುವವರು

ಫುಲೆ-ಪೆರಿಯಾರರ ಆಲೋಚನಾ ವಿಧಾನ, ಮೂಲಭೂತವಾಗಿ ವರ್ಣಗಳನ್ನು ಆಧರಿಸಿದೆ. ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಜಾತಿ ರಹಿತವಾಗಿತ್ತು, ಸಮಾನತೆ ಯಿಂದಿದ್ದ ಆದಿವಾಸಿಗಳಾದ ದ್ರಾವಿಡರ ಮೇಲೆ ಹೊರಗಿನಿಂದ ಬಂದ ಆರ್ಯರು ಜಾತಿ ಪದ್ಧತಿಯನ್ನು ಬಲವಂತವಾಗಿ ಹೇರಿದರೆಂದು ಅವರು ವಾದಿಸುತ್ತಾರೆ. ದ್ರಾವಿಡರನ್ನು ತುಳಿಯಲು, ಶೋಷಿಸಲು ಆರ್ಯರು ಹಿಂದೂ ಧರ್ಮವನ್ನು ಹಾಗೂ ಜಾತಿ ಪದ್ಧತಿಯನ್ನು ಸೃಷ್ಟಿಸಿದರು ಎಂದವರು ಹೇಳುತ್ತಾರೆ. ಆದರೆ ಈ ವರ್ಣಾಧಾರಿತ ವಾದವನ್ನು ಮೊದಲಿಗೆ ಬ್ರಿಟಿಷ್ ವಸಾಹತುಶಾಹಿಗಳೇ ಮುಂದಿಟ್ಟರು. ವೇದಕಾಲದ ಆರ್ಯರು ಹಾಗೂ ಯುರೋಪಿಯನ್ನರೂ ರಕ್ತಸಂಬಂಧಿಗಳೆಂದು ವಸಾಹತು ಬುದ್ಧಿಜೀವಿಗಳು ಸಾಬೀತುಪಡಿಸಲು ಯತ್ನಿಸಿದರು. ಫುಲೆ ಮತ್ತು ಪೆರಿಯಾರರು ಪರೋಕ್ಷವಾಗಿ ಇದೇ ವಾದವನ್ನು ಮುಂದಿಟ್ಟು ಜಾತಿ ಪದ್ಧತಿ ಆರ್ಯರ ಸಂಚೆಂದು ಹಾಗೂ ದ್ರಾವಿಡರು ಮತ್ತು ಮೂಲನಿವಾಸಿಗಳಿಗೆ ಇದು ಅನ್ಯವಾದದ್ದೆಂದು ವಾದಿಸಿದರು.

ಅಂಬೇಡ್ಕರರು ಈ ವರ್ಣಾಧಾರಿತ ಜಾತಿ ಸಿದ್ಧಾಂತವನ್ನು ನಿರಾಕರಿಸಿದರು. ಬುಡಕಟ್ಟು ಸಮಾಜ ವ್ಯವಸ್ಥೆಯ ಸಂದರ್ಭದಲ್ಲಿ ವಿವಿಧ ಕಡೆಗಳಿಂದ ವಿವಿಧ ಸಂಸ್ಕೃತಿಯನ್ನು ಹೊಂದಿದ್ದ ಹಲವಾರು ಆದಿವಾಸಿ ಗುಂಪುಗಳು ಭಾರತಕ್ಕೆ ಬಂದವು. ಭಾರತದ ಮೂಲನಿವಾಸಿಗಳೊಂದಿಗೆ ಬೆರೆತು ಸಾಮಾನ್ಯ ಸಂಸ್ಕೃತಿಯೊಂದನ್ನು ಸೃಷ್ಟಿಸಿದರೆಂಬುದು ಅವರ ನಿಲುವಾಗಿತ್ತು. ಭಾರತೀಯರು ಆರ್ಯರು, ದ್ರಾವಿಡರು, ಮಂಗೋಲಿಯನ್ನರು, ಸ್ಕೈಟಿಯನ್ಸ್ ಜನಾಂಗಗಳ ಮಿಶ್ರಣವೆಂದು ಅವರು ಹೇಳಿದರು. ಇವು ಜನಾಂಗೀಯವಾಗಿ ವೈವಿಧ್ಯತೆಯನ್ನು ಹೊಂದಿದ್ದರೂ ಸಾಂಸ್ಕೃತಿಕ ಆಚಾರ ವಿಚಾರಗಳಲ್ಲಿ ಏಕರೂಪತೆಯನ್ನು ಹೊಂದಿರುವ ಜನ ಸಮುದಾಯಗಳು ಎಂದವರು ಹೇಳುತ್ತಾರೆ. ಒಳ ವಿವಾಹ ಪದ್ಧತಿಯೇ ಇದರೊಳಗಿದ್ದ ಹೊಸ ಅಂಶವೆಂದು ಹಾಗೂ ಒಳ ವಿವಾಹ ಪದ್ಧತಿಯು ಜಾತಿಯ ವಿಶಿಷ್ಟ ಗುಣಲಕ್ಷಣವಾಗಿದೆಯೆಂದು ಅವರು ಹೇಳುತ್ತಾರೆ. ಆದ್ದರಿಂದ ಜಾತಿಯ ಹುಟ್ಟು ಮಾತ್ರವಲ್ಲ, ಅದರ ಮೂಲಸೂತ್ರವೇ ಒಳ ವಿವಾಹ ಪದ್ಧತಿಯಾಗಿದೆ ಎಂಬುದು ಅಂಬೇಡ್ಕರ್‌ರವರ ವಾದವಾಗಿದೆ.

ಮಾರ್ಕ್ಸಿಸ್ಟ್ ಚರಿತ್ರಕಾರರು ಹಲವು ದಶಕಗಳಿಂದ ಸಂಶೋಧನೆ ನಡೆಸಿ ಅದರ ಆಧಾರದ ಮೇಲೆ ಜಾತಿಯ ಉಗಮದ ಬಗ್ಗೆ ಒಂದು ನಿರ್ದಿಷ್ಟ ನಿಲುವಿಗೆ ತಲುಪಿದ್ದಾರೆ. ಆದರೂ ಜಾತಿ ಪದ್ಧತಿಯು ಭಾರತದ ವಿಶಿಷ್ಟ ಅಂಶವಾಗಿ ಇದರುವುದಕ್ಕೆ ಕಾರಣಗಳೇನು ಎಂಬ ವಿಚಾರದಲ್ಲಿ ಅಂತಿಮ ತೀರ್ಮಾನಕ್ಕೆ ಬರಲಾಗಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿನ್ನೂ ಅಧ್ಯಯನ ನಡೆಯಬೇಕಿದೆ. ಆದರೆ ಜಾತಿ ಪದ್ಧತಿ ಉಗಮದ ಸಾಮಾಜಿಕ ಹಿನ್ನಲೆ, ಅದರ ಪಾತ್ರ, ಚಲನೆ, ಹಲವಾರು ಸಾಮಾಜಿಕ ಹಂತಗಳಲ್ಲಿ ಜಾತಿ ನಿರ್ವಹಿಸಿದ ಪಾತ್ರ ಹಾಗೂ ಜಾತಿಪದ್ಧತಿ ಇನ್ನೂ ಮುಂದುವರೆಯುತ್ತಿರುವುದರ ಕಾರಣ ಇವುಗಳ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಹಾಗೂ ಚಾರಿತ್ರಿಕ ಭೌತಿಕವಾದಿ ದೃಷ್ಟಿಕೋನವನ್ನು ಇದು ನೀಡುತ್ತದೆ

ಇಂತಹ ದೃಷ್ಟಿಕೋನದ ಮೂಲಕವೇ ನಾವು ಜಾತಿಯ ಬಗ್ಗೆ ಸರಿಯಾದ ನಿಲುವನ್ನು ಪಡೆದು ಜಾತಿ ವ್ಯವಸ್ಥೆಯನ್ನು ನಿರ್ಮೂಲಿಸಲು ಅಗತ್ಯವಾದ ಹೋರಾಟದ ರೂಪಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ.

## ವರ್ಗ ಸಮಾಜದ ಉಗಮ ಹಾಗೂ

## ಜಾತಿ ಪದ್ಧತಿಯ ಹುಟ್ಟು

ಭಾರತದಲ್ಲಿ ಬುಡಕಟ್ಟು ಸಮಾಜ ಛಿದ್ರಗೊಂಡು ವರ್ಗ ಸಮಾಜ ರೂಪುಗೊಂಡ ಪ್ರಕ್ರಿಯೆಯಲ್ಲಿ ಜಾತಿ ಪದ್ಧತಿ ಹುಟ್ಟಿಕೊಂಡಿತು. ಹೀಗಾಗಿ ಜಾತಿ ಪದ್ಧತಿಯನ್ನು ವರ್ಗ ಸಮಾಜದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಜಾತಿಯನ್ನು ವರ್ಗ ಸಮಾಜದ ಉಗಮ ದೊಂದಿಗೆ ಬೆಸೆಯಬೇಕಿದ್ದಲ್ಲಿ ಸುಮಾರು ಕ್ರಿ. ಪೂ. 2500 ರಿಂದ ಕ್ರಿ.ಪೂ. 1000 ರವರೆಗೂ ಭಾರತದಲ್ಲಿನ ಮೊಟ್ಟಮೊದಲ ವರ್ಗ ಸಮಾಜವಾಗಿದ್ದ ಸಿಂಧೂ ನದಿ ನಾಗರೀಕತೆಯಲ್ಲೇ ಜಾತಿಗಳ ಅಸ್ತಿತ್ವವಿತ್ತೇ ಎಂಬ ಪ್ರಶ್ನೆ ಏಳಬಹುದು. ಸಿಂಧೂ ನಾಗರೀಕ ಸಮಾಜವು ವರ್ಗಾಧಾರಿತ ಸಮಾಜವಾಗಿತ್ತೆಂಬ ವಿಷಯ ಸಾಬೀತಾಗಿದೆ. ಆದರೆ ಅಲ್ಲಿ ಜಾತಿಗಳು ಇದ್ದವೇ ಎನ್ನುವುದನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಅದರ ಬಗ್ಗೆ ಸಾಕಷ್ಟು ಆಧಾರಗಳಿನ್ನೂ ಸಿಕ್ಕಿಲ್ಲದಿರುವುದು ಹಾಗೂ ಆಗ ಬಳಕೆಯಲ್ಲಿದ್ದ ಹರಪ್ಪಾ ಭಾಷೆಯನ್ನು ಇನ್ನೂ ಓದಲಾಗದಿರುವುದು ಇದಕ್ಕೆ ಪ್ರಮುಖ ಕಾರಣಗಳಾಗಿವೆ. ಆದರೆ ಕ್ರಿ.ಪೂ. 600 ರಿಂದ ಪ್ರಾರಂಭಗೊಂಡ ಮಗಧ ಸಾಮ್ರಾಜ್ಯದಲ್ಲಿ ಜಾತಿಪದ್ಧತಿ ಇತ್ತೆಂಬುದನ್ನು ನಾವು ಖಚಿತವಾಗಿ ಹೇಳಬಹುದು.

ಕ್ರಿ.ಪೂ. 1500 ಕ್ಕಿಂತ ಮೊದಲು ಮಧ್ಯ ಏಷಿಯಾದಿಂದ ದನಗಾಹಿ ಜೀವನ ಪದ್ಧತಿಯನ್ನು ಹೊಂದಿದ್ದ ಅಲೆಮಾರಿ ಆರ್ಯರು ಹುಲ್ಲುಗಾವಲುಗಳನ್ನು, ನೀರಿನ ಮೂಲಗಳನ್ನು ಅರಸುತ್ತಾ ಸಿಂಧೂ ನದಿಯೆಡೆಗೆ ಬಂದರು. ಆರ್ಯರೆಂದು ಕರೆಯಲ್ಪಡುವ ಈ ಬುಡಕಟ್ಟು ಜನಾಂಗವು ಒಂದೇ ಗುಂಪಿಗೆ ಸೇರಿರಲಿಲ್ಲ. ಬೇರೆ ಬೇರೆ ಜನಾಂಗೀಯ ಗುಂಪಿಗೆ ಸೇರಿದವರಾಗಿದ್ದರೂ ಇವರು ಸಾಮಾನ್ಯ ನುಡಿಯನ್ನು, ಸಾಮಾನ್ಯ ಜೀವನ ಪದ್ಧತಿಯನ್ನು ಹೊಂದಿದ್ದರು. ಆದ್ದರಿಂದ ಆರ್ಯರೆಂಬುದು ಒಂದು ಜನಾಂಗವಾಗಿರದೆ ಸಾಮಾನ್ಯ ಭಾಷೆ, ಸಾಮಾನ್ಯ ಜೀವನ ಪದ್ಧತಿಯನ್ನು ಹೊಂದಿದ ಒಂದು ಸಮುದಾಯಕ್ಕೆ ಸೇರಿದವರೆನ್ನುವ ಅರ್ಥದಲ್ಲಿ ಕರೆಯಲ್ಪಡುತ್ತಾರೆ. ಈ ಕಾಲದಲ್ಲಿ ಸಿಂಧೂ ನಾಗರೀಕತೆಗೆ ಸೇರಿದ ಜನರೊಂದಿಗೆ ಹಲವಾರು ಯುದ್ಧಗಳು ನಡೆದವು. ನಂತರ ಕ್ರಿ.ಪೂ. 1800 ರಲ್ಲಿ ಸಿಂಧೂ ನಾಗರೀಕ ಸಮಾಜ ಸಂಪೂರ್ಣವಾಗಿ ಅವನತಿ ಹೊಂದಿತು. ನಂತರದಲ್ಲಿ ಆರ್ಯರ ವೇದಕಾಲೀನ ಜನ ಜೀವನ ಪ್ರಾರಂಭವಾಯಿತು.

## ಋಗ್ವೇದದ ಕಾಲ

ವೇದ ಕಾಲದ ಮೊದಲ ಹಂತವನ್ನು ಋಗ್ವೇದದ ಕಾಲವೆಂದು ಹೇಳಲಾಗುತ್ತದೆ. ಇದು ಕ್ರಿ.ಪೂ. 1800 ರಿಂದ ಕ್ರಿ.ಪೂ. 1000 ದವರೆಗೆ ಇತ್ತು ಎಂದೂ ಹೇಳಲಾಗುತ್ತದೆ. ಈ ಹಂತದಲ್ಲಿ ಸಾಮಾಜಿಕ ಜೀವನವೆಂಬುದು ಪ್ರಧಾನವಾಗಿ ರಕ್ತ ಸಂಬಂಧ, ಬುಡಕಟ್ಟು ಹಾಗೂ ವಂಶವಾಹಿನಿಯನ್ನು ಆಧರಿಸಿತ್ತು. ಈ ಸಮಾಜದಲ್ಲಿ ಸಾಮಾಜಿಕ ವೃತ್ತಿ ವಿಭಜನೆ ಮತ್ತು ಆರ್ಥಿಕ ತಾರತಮ್ಯದ ಮೇಲೆ ಜನರನ್ನು ವಿಂಗಡಿಸಲಾಗಿರಲಿಲ್ಲ. ಆದರೆ ಪುರೋಹಿತ, ಬುಡಕಟ್ಟು ನಾಯಕ ಮತ್ತು ಬುಡಕಟ್ಟಿನ ಸದಸ್ಯ ಎ ವಿಶ್ಎ ಎಂಬ ಮೂರು ವಿಭಜನೆಗಳಿದ್ದವು. ಇದು ಯಾವ ರೀತಿಯಲ್ಲಿಯೂ ಸಾಮಾಜಿಕ ವಿಂಗಡಣೆ ಯನ್ನಾಗಲೀ, ಅಂತಸ್ತಿನ ತಾರತಮ್ಯವನ್ನಾಗಲೀ ಅಥವಾ ನಿರ್ದಿಷ್ಟವಾದ ಕರ್ತವ್ಯಗಳ ನ್ನಾಗಲೀ ಹೊಂದಿರಲಿಲ್ಲ. ಈ ಬುಡಕಟ್ಟು ಸಮಾಜದಲ್ಲಿ ಪುರೋಹಿತ, ನಾಯಕ, ಸಾಮಾನ್ಯ ಜನ ಎಂಬ ಸಾಮಾನ್ಯ ವಿಂಗಡಣೆ ಮಾತ್ರ ಎತ್ತಿ ಹೇಳುವಂತಿತ್ತು. ಈ ಪುರೋಹಿತ, ನಾಯಕರುಗಳಿಗೆ ಇಲ್ಲಿ ಕಟ್ಟುನಿಟ್ಟಾಗಿ, ನಿರಂತರವಾಗಿ ಯಾವುದೇ ರೀತಿಯ ಹೆಚ್ಚುವರಿ ಧಾನ್ಯವಾಗಲೀ ಅಥವಾ ಪಶು ಸಂಪತ್ತಾಗಲೀ ಇರಲಿಲ್ಲ. ಆದರೆ ಇತರೆ ಬುಡಕಟ್ಟುಗಳೊಂದಿಗೆ ನಡೆಯುವ ಯುದ್ಧದಲ್ಲಿ ವಶಪಡಿಸಿಕೊಂಡು ಬಂದ ವಸ್ತು ಒಡವೆಗಳಲ್ಲಿ, ಪಶು ಸಂಪತ್ತುಗಳಲ್ಲಿ ಅವರಿಗೂ ಒಂದು ಪಾಲು ಸಿಗುತ್ತಿತ್ತು. ಅದರೊಂದಿಗೆ ಪುರೋಹಿತರಿಗೆ, ನಾಯಕರಿಗೆ ಬಲಿ ಎಂದು ಕರೆಯಲ್ಪಡುವ ಕಾಣಿಕೆಯನ್ನು ಆ ಬುಡಕಟ್ಟು ಜನಾಂಗದವರು ಸ್ವಇಚ್ಛೆಯಿಂದ ನೀಡುತ್ತಿದ್ದರು. ಆದರೆ ಸೋಲನ್ನೊಪ್ಪಿದ ಬುಡಕಟ್ಟಿನಿಂದ ಬಲಿಯನ್ನು ತೆರಿಗೆ ರೂಪದಲ್ಲಿ ಬಲವಂತವಾಗಿ ವಸೂಲಿ ಮಾಡಲಾಗುತ್ತಿತ್ತು.

ಆರ್ಯರು ಇಲ್ಲಿನ ಮೂಲನಿವಾಸಿಗಳೊಂದಿಗೆ ನಿರಂತರ ಯುದ್ಧದಲ್ಲಿ ತೊಡಗಿದರು. ಕಪ್ಪು ಚರ್ಮ, ಚಪ್ಪಟೆ ಮೂಗಿನ ಇಲ್ಲಿಯ ಮೂಲನಿವಾಸಿಗಳು ಆರ್ಯರಂತೆ ಅಲೆಮಾರಿ ಗಳಾಗಿರದೆ ಒಂದು ಸ್ಥಳದಲ್ಲಿ ನೆಲೆ ನಿಂತು ವಾಸಿಸುತ್ತಿದ್ದರು. ಮೂಲ ನಿವಾಸಿಗಳ ಭಾಷೆ, ಸಂಸ್ಕೃತಿ ಜನ ಜೀವನ ಆರ್ಯರಿಗಿಂತ ತೀರಾ ಭಿನ್ನವಾಗಿತ್ತು. ಇವರೊಂದಿಗೆ ಯುದ್ಧ ಮಾಡುತ್ತಿದ್ದ ಆರ್ಯರು ಅವರನ್ನು ಸೋಲಿಸಿ ಅವರೊಳಗಿನ ಪುರೋಹಿತರು ಹಾಗೂ ನಾಯಕರನ್ನು ತಮ್ಮೊಳಗೆ ಸೇರಿಸಿಕೊಳ್ಳುತ್ತಿದ್ದರು ಅಥವಾ ಆರ್ಯರನ್ನಾಗಿ ಪರಿವರ್ತಿಸಿಕೊಳ್ಳುತ್ತಿದ್ದರು. ಇನ್ನುಳಿದ ಬಹುಪಾಲು ಜನರನ್ನು ದಸ್ಯುಗಳನ್ನಾಗಿ ಪರಿವರ್ತಿಸಿದರು. ಅದೇ ರೀತಿಯಲ್ಲಿ ಆರ್ಯರಿಗೆ ಹೋಲುವ ಭಾಷೆ, ಸಂಸ್ಕೃತಿಯುಳ್ಳ ಆದರೆ ವಿಭಿನ್ನ ದೇಹ ದಾರ್ಢ್ಯವುಳ್ಳ ಬುಡಕಟ್ಟು ಜನರೊಂದಿಗೆ ಯುದ್ಧ ಮಾಡಿದರು. ಗುಲಾಮರಾಗಿಸಲ್ಪಟ್ಟ ದಸ್ಯು ಅಥವಾ ದಾಸರಿಗೆ ಮನೆಗೆಲಸ ಹಾಗೂ ದನಕರುಗಳನ್ನು ಕಾಯುವ ಕೆಲಸ ನೀಡಲಾಯಿತು. ಆರ್ಯರು ತಮ್ಮ ತಮ್ಮ ಭೂಮಿಗಳಲ್ಲಿ ತಾವೇ ವ್ಯವಸಾಯ ಮಾಡುತ್ತಿದ್ದರು. ಒಟ್ಟಾರೆ ಋಗ್ವೇದ ಕಾಲದಾದ್ಯಂತ ಸಾಮಾಜಿಕ ಜೀವನವು ವರ್ಗ ಸಮಾಜವಾಗಿರದೆ (ಗುಲಾಮರಿದ್ದರೂ) ಬುಡಕಟ್ಟು ಸಮಾಜವಾಗಿಯೇ ಅಸ್ತಿತ್ವ ದಲ್ಲಿತ್ತು.

## ವರ್ಗಗಳ ಉಗಮ

ಈ ಕಾಲವು ಕ್ರಿ.ಪೂ. 1000 ದಿಂದ ಕ್ರಿ.ಪೂ. 600 ರವರೆಗಿನ 400 ವರ್ಷಗಳ ಕಾಲಾವಧಿಯು ಬುಡಕಟ್ಟು ಸಮಾಜವು ಚೂರು ಚೂರಾಗಿ ವರ್ಗ ಸಮಾಜವಾಗಿ ಪರಿವರ್ತನೆಗೊಂಡ ಸಂಕ್ರಮಣದ ಕಾಲವಾಗಿತ್ತು. ಈ ಕಾಲಘಟ್ಟದಲ್ಲಿ ಸಾಮಾಜಿಕ ವೃತ್ತಿ ವಿಂಗಡಣೆ ಪ್ರಾರಂಭವಾಯಿತು. ಬಡಿಗ, ಕಮ್ಮಾರ, ಚಮ್ಮಾರ, ನೇಕಾರ ಮುಂತಾದ ಕರಕುಶಲಗಾರಿಕೆಯಲ್ಲಿ ವಿಶ್‌ಗಳು, ಶೂದ್ರರು ತೊಡಗಿದರು. ಇವೆಲ್ಲವೂ ಋಗ್ವೇದ ಕಾಲದಲ್ಲಿದ್ದರೂ ಶ್ರಮ ವಿಭಜನೆಯಾಗಿರಲಿಲ್ಲ. ಆದರೆ ಈ ಕಾಲದಲ್ಲಿ ಮಾತ್ರ ವೃತ್ತಿ ವಿಂಗಡಣೆ ನಿರ್ದಿಷ್ಟವಾದ ಶ್ರಮ ವಿಭಜನೆಯಾಗಿ ರೂಪುಗೊಂಡಿತು. ಒಂದು ಕುಟುಂಬದ ಸದಸ್ಯರು ಹೆಚ್ಚುಕಡಿಮೆ ಒಂದೇ ವೃತ್ತಿಯಲ್ಲಿ ತೊಡಗಿ ಕೊಳ್ಳುವ ಪರಿಸ್ಥಿತಿ ಉಂಟಾಯಿತು. ಮಾಡುವ ವೃತ್ತಿಗೆ ತಕ್ಕಂತೆ ಸಾಮಾಜಿಕ ಸ್ಥಾನಮಾನ ನಿರ್ಧರಿಸಲ್ಪಟ್ಟಿತು. ಇದು ನಿಧಾನವಾಗಿ ಸಮಾಜದ ತಾರತಮ್ಯಕ್ಕೆ ದಾರಿಮಾಡಿಕೊಟ್ಟಿತು.

ಬ್ರಾಹ್ಮಣ ಎಂಬ ಪುರೋಹಿತರು ಆರ್ಯರನ್ನು ಮಾತ್ರ ಒಳಗೊಂಡ ಜನ ವಿಭಾಗ ವಲ್ಲ. ಭಾರತದ ಮೂಲನಿವಾಸಿಗಳಲ್ಲಿದ್ದ ಪುರೋಹಿತರು, ದಾಸರಲ್ಲಿದ್ದ ಒಂದು ಭಾಗದ ಪುರೋಹಿತರು ಮತ್ತು ಆರ್ಯರಲ್ಲಿದ್ದ ಪುರೋಹಿತರೆಲ್ಲರೂ ಸೇರಿದ ಸಾಮಾಜಿಕ ಸ್ತರವಾಗಿತ್ತು. ಸಿಂಧೂ ನಾಗರೀಕತೆಯಲ್ಲಿ ಮತದ ಪಾತ್ರ ಪ್ರಮುಖವಾಗಿದ್ದು ಪುರೋಹಿತರ ನಿಯಂತ್ರಣ ಗಣನೀಯವಾಗಿತ್ತು. ವೇದಗಳನ್ನು ಸೃಷ್ಟಿಸಿದವರಲ್ಲಿ ಮೂಲನಿವಾಸಿಗಳಾದ ಕಪ್ಪು ಜನರು ಹಾಗೂ ದಸ್ಯುಗಳು ಇರುವುದು ಗಮನಾರ್ಹ. ಅಲ್ಲದೆ ಸಪ್ತ ಋಷಿಗಳಲ್ಲಿನ ಬಹುಸಂಖ್ಯಾತರು ಅನಾರ್ಯ ಮೂಲದವರೆಂಬುದು ಗಮನಿಸಬೇಕಾದ ಅಂಶವಾಗಿದೆ. ವರ್ಣಾಶ್ರಮದ ಸಾಮಾಜಿಕ ಶ್ರೇಣೀಕರಣದಲ್ಲಿ ಮೊದಲನೆ ಸ್ಥಾನವನ್ನು ಗಳಿಸಿದ ಬ್ರಾಹ್ಮಣರು ಆಳುವ ವರ್ಗವಾದರು. ಬ್ರಾಹ್ಮಣೀಯ ವರ್ಣಧರ್ಮ ಸಮಾಜದಲ್ಲಿ ತಮ್ಮ ಮೇಲ್‌ಸ್ಥಿತಿಯನ್ನು ರಕ್ಷಿಸಿಕೊಳ್ಳಲು ಸೈದ್ಧಾಂತಿಕ ರೀತಿಯಲ್ಲಿ ಶ್ರಮಜೀವಿಗಳನ್ನು ಆಳಲು ವರ್ಣಾಶ್ರಮ ಧರ್ಮವನ್ನು ಸೃಷ್ಟಿಸಿದವರು ಈ ವೈದಿಕ ಬ್ರಾಹ್ಮಣರು.

ಯುದ್ಧಗಳಲ್ಲಿ ತೊಡಗುವುದು, ಸಮುದಾಯವನ್ನು ರಕ್ಷಣೆ ಮಾಡುವುದು ನಿರ್ದಿಷ್ಟವಾದ ವೃತ್ತಿ ವಿಂಗಡಣೆಯಾಗಿ ಕ್ಷತ್ರಿಯರೆಂಬ ಒಂದು ವಿಭಜನೆ ಉಂಟಾಯಿತು. ಋಗ್ವೇದ ಕಾಲದಲ್ಲಿ ಯುದ್ಧದಲ್ಲಿ ತೊಡಗುವ, ಬುಡಕಟ್ಟನ್ನು ನಿರ್ವಹಣೆ ಮಾಡುವ ಕೆಲಸಗಳು ಬುಡಕಟ್ಟಿನ ಎಲ್ಲರಿಗೂ ಸೇರಿದ ಕರ್ತವ್ಯವಾಗಿತ್ತು. ಆದರೆ ಈ ಹಂತದಲ್ಲಿ ಅದು ಕ್ಷತ್ರಿಯರ ವಿಶೇಷ ವೃತ್ತಿಯಾಗಿ ಪರಿವರ್ತನೆಯಾಯಿತು. ಇದರಲ್ಲಿ ಬರುಬರುತ್ತಾ ಯುದ್ಧ ಮಾಡಲಿಕ್ಕಾಗಿಯೇ ಇರುವ ಸೇನಾಪಡೆ ಹಾಗೂ ದಂಡನಾಯಕರ ವಿಶೇಷ ವಿಭಾಗವೊಂದು ತಯಾರಾಯಿತು. ಆದರೆ ಇದೇ ಸಮಯದಲ್ಲಿ, ದಕ್ಷಿಣದಲ್ಲಿ, ಯುದ್ಧಗಳಲ್ಲಿ, ರಕ್ಷಣಾ ಕ್ರಮಗಳಲ್ಲಿ ತೊಡಗುವುದು ಒಂದು ಸಾಮಾಜಿಕ ವಿಂಗಡಣೆಯಾಗಿ ರೂಪುಗೊಂಡಿದ್ದರೂ ಅದು ಪ್ರತ್ಯೇಕ ಕ್ಷತ್ರಿಯ ವರ್ಣವಾಗಿ ರೂಪುಗೊಳ್ಳಲಿಲ್ಲ. ಶೂದ್ರರೇ ಆಳುವ ರಾಜರಾಗಿ ಬೆಳೆದು ಬ್ರಾಹ್ಮಣೀಯ ಸಮಾಜದಲ್ಲಿ ಆಳುವ ವರ್ಗವಾಗಿ ಒಳಗೊಳ್ಳಲ್ಪಟ್ಟರು. ಅ ರೀತಿ ಬೆಳೆದ ತಮ್ಮನ್ನು ಕ್ಷತ್ರಿಯರೆಂದು ಕರೆದುಕೊಂಡರು. ಅದ್ದರಿಂದ ಇಲ್ಲಿ ವರ್ಣ ಸಮಾಜದ ಅಧಾರದಲ್ಲಿ ನಾಲ್ಕು ವರ್ಣಗಳನ್ನು ಒಳಗೊಂಡಿದ್ದರೂ ವಾಸ್ತವದಲ್ಲಿ ಮೂರು ವರ್ಣಗಳು ಮಾತ್ರ ಅಸ್ತಿತ್ವದಲ್ಲಿದ್ದವು.

ಇತರೆ ಬುಡಕಟ್ಟುಗಳೊಂದಿಗೆ ಯುದ್ಧ ಮಾಡುವ ಸಂದರ್ಭದಲ್ಲಿ ವಿಶ್ ಎಂಬ ಸಾಮಾನ್ಯ ಜನರಿಗೆ ಬ್ರಾಹ್ಮಣರು ಹಾಗೂ ಕ್ಷತ್ರಿಯರಿಬ್ಬರೂ ನಾಯಕತ್ವ ನೀಡಿದರು. ಯುದ್ಧವಿರಾಮ ಕಾಲದಲ್ಲಿ ಬ್ರಾಹ್ಮಣರು, ಕ್ಷತ್ರಿಯರು ವಿಶ್‌ಗಳಿಂದ ಕಾಣಿಕೆಗಳನ್ನು ವಸೂಲು ಮಾಡುತ್ತಿದ್ದರು. ಯುದ್ಧಗಳಿಂದ ಬಂದ ಆದಾಯ ಮತ್ತು ಪಶು ಸಂಪತ್ತಿನಲ್ಲಿ ಬುಡಕಟ್ಟಿನ ಸದಸ್ಯರಿಗಿಂತ ನಾಯಕನಾದ ರಾಜನಿಗೆ ಹೆಚ್ಚಿನ ಭಾಗ ಸಿಗತೊಡಗಿತು. ಹೆಚ್ಚಿನ ಸಂಪತ್ತಿಗಾಗಿ ಮತ್ತೆ ಮತ್ತೆ ಯುದ್ಧ ಮಾಡಿ ತಮ್ಮ ಸಂಪತ್ತನ್ನು ಶೇಖರಿಸ ತೊಡಗಿದರು. ಯುದ್ಧದಲ್ಲಿ ತೊಡಗಲು ಯಜ್ಞ ಯಾಗಾದಿಗಳನ್ನು ನಡೆಸಿದ ಬ್ರಾಹ್ಮಣರಿಗೆ ಧಾರಾಳವಾಗಿ ದಾನಗಳನ್ನು ನೀಡಲಾಯಿತು. ಇದು ಕ್ರಮೇಣ ಬುಡಕಟ್ಟಿನ ಸಾಮಾನ್ಯ ಜನರಿಗಿಂತ (ವಿಶ್) ಬ್ರಾಹ್ಮಣರು ಹಾಗೂ ಕ್ಷತ್ರಿಯರು ಉನ್ನತ ಸ್ಥಿತಿಯನ್ನು ತಲುಪಲು ದಾರಿಮಾಡಿತು. ಈ ಪ್ರಕಾರ ವರ್ಣಾಶ್ರಮ ಶ್ರೇಣೀಕರಣದಲ್ಲಿ ಎರಡನೆ ಸ್ಥಾನದಲ್ಲಿದ್ದ ಕ್ಷತ್ರಿಯರು ಆಳುವ ವರ್ಗಕ್ಕೆ ಸೇರಿದವರಾಗಿದ್ದರು. ಯುದ್ಧಗಳಲ್ಲಿ ಸೋಲಿಸಲ್ಪಟ್ಟು ಗುಲಾಮರಾಗಿಸಲ್ಪಟ್ಟ ಮೂಲನಿವಾಸಿ ಬುಡಕಟ್ಟು ಜನರು ಹಾಗೂ ಇತರ ಆರ್ಯ ಬುಡಕಟ್ಟು ಜನರು ಶೂದ್ರರೆಂದು ಕರೆಯಲ್ಪಟ್ಟರು. ಶೂದ್ರ ಎಂಬುದು ಯುದ್ಧದಲ್ಲಿ ಸೋಲಿಸಲ್ಪಟ್ಟ ಬುಡಕಟ್ಟು ಜನಾಂಗದ ಹೆಸರು. ಶೂದ್ರರೆಂಬ ಬುಡಕಟ್ಟಿನ ಜನರು ಆರ್ಯರೊಂದಿಗೆ ಸಂಬಂಧ ಹೊಂದಿದ್ದು ಇವರು ಆರ್ಯ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಇವರು ಸುಮಾರು ಕ್ರಿ.ಪೂ. 1000 ದಲ್ಲಿ ಭಾರತಕ್ಕೆ ವಲಸೆ ಬಂದವರು ಎಂದು ಹೇಳಲಾಗುತ್ತದೆ. ಈ ಬುಡಕಟ್ಟಿನ ಜನರು ವೇದಕಾಲೀನ ಆರ್ಯರಿಂದ ಸೋಲಿಸಲ್ಪಟ್ಟು ನಾಲ್ಕನೆಯ ವರ್ಣವಾಗಿ ಶೂದ್ರರಾಗಿ ಆರ್ಯ ಸಮಾಜ ದೊಳಗೆ ತರಲ್ಪಟ್ಟರು. ಶೂದ್ರ ವರ್ಣವೆಂಬ ಹೆಸರು ಬರಲು ಇವರು ಕಾರಣೀಭೂತ ರಾದರೂ ಶೂದ್ರರೆಂದರೆ ಇವರು ಮಾತ್ರವೇ ಅಲ್ಲ. ಮುಂಚೆಯೇ ಗುಲಾಮ ರಾಗಿದ್ದ ದಸ್ಯು ದಾಸರು ಕೂಡ ಶೂದ್ರರೆಂದು ಕರೆಯಲ್ಪಟ್ಟರು. ಬುಡಕಟ್ಟು ಜನ ಜೀವನದಲ್ಲಿ ಒಡಕುಂಟಾಗಿ ಒಂದೇ ಬುಡಕಟ್ಟಿನಲ್ಲಿ ವರ್ಗಬೇಧಗಳುಂಟಾಗಿದ್ದರಿಂದ ಸಮಾಜದ ಕೊನೆಯ ಸ್ತರದಲ್ಲಿ ತಳ್ಳಲ್ಪಟ್ಟವರು ಅಂದರೆ ಆರ್ಯ ಬುಡಕಟ್ಟು ಸಮಾಜದ ಕೊನೊಯ ಸ್ತರದಲ್ಲಿದ್ದವರು ಕೂಡ ಶೂದ್ರರಾದರು. ಆದ್ದರಿಂದ ಶೂದ್ರ ವರ್ಣ ಎಂದರೆ ಅನಿಷ್ಟರು ಎಂಬ ಸ್ತರಕ್ಕೆ ತಳ್ಳಲ್ಪಟ್ಟು ಆರ್ಯ ಹಾಗೂ ಅನಾರ್ಯ ಮೂಲನಿವಾಸಿ ಬುಡಕಟ್ಟು ಜನರನ್ನು ಒಳಗೊಂಡಿದೆ.

ಶೂದ್ರರಾಗಿ ಮಾರ್ಪಡಿಸಲ್ಪಟ್ಟ ಹಲವಾರು ಬುಡಕಟ್ಟಿಗೆ ಸೇರಿದ ಜನರು ವರ್ಣಾಶ್ರಮ ಧರ್ಮಕ್ಕೆ ಬರುವ ಮುಂಚೆ ತಮ್ಮದೇ ಆದ ಸ್ವತಂತ್ರ ಜೀವನ ಕ್ರಮವನ್ನು ಹೊಂದಿದ್ದರು. ಇವರು ಆರ್ಯರಿಗೆ ಸೇವೆ ಮಾಡುವ ಸ್ಥಿತಿಯಲ್ಲಿರಲಿಲ್ಲ. ತಮ್ಮದೇ ಅದ ಸ್ವಂತ ಭೂಮಿ, ಪಶು ಸಂಪತ್ತನ್ನು ಹೊಂದಿ ವ್ಯವಸಾಯ ಮಾಡಿಕೊಂಡು ಜೀವಿಸುತ್ತಿದ್ದರು. ಬಡಿಗ, ಕಮ್ಮಾರ, ನೇಕಾರ, ಚಮ್ಮಾರ, ಕುಂಬಾರ ಮುಂತಾದ ಕರಕುಶಲ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಇವರು ವರ್ಣಾಶ್ರಮ ಬಂದ ನಂತರ ಮೇಲಿನ ಮೂರು ಗುಂಪುಗಳಿಗೆ ಸೇವೆ ಮಾಡುವವರಾಗಿ ಮಾರ್ಪಟ್ಟರು. ಶೂದ್ರರಲ್ಲಿಯ ಒಂದು ಸಣ್ಣ ಗುಂಪಿನವರನ್ನು ಗುಲಾಮರನ್ನಾಗಿಸಿಕೊಂಡ ರಾಜ ಕುಟುಂಬದವರು ಭೂಮಿಯಲ್ಲಿ ಕೆಲಸ ಮಾಡಿಸಲಾರಂಭಿಸಿದರು. ಭೂದಾನ ನಡೆಯುವಾಗ ಭೂಮಿಯ ಜೊತೆ ಅದರಲ್ಲಿನ ಗುಲಾಮರನ್ನೂ ದಾನ ಮಾಡುವ ಅನಿಷ್ಟ ಪದ್ಧತಿ ಇತ್ತು. ಆದರೆ ಅವರು ಸರ್ಫ್ ರೀತಿಯ ಜೀತಗಾರರಾಗಿರಲಿಲ್ಲ. ಅವರು ಜನ್ಮತಃ ಗುಲಾಮರಾಗಿ ಗುರುತಿಸಲ್ಪಟ್ಟರೇ ವಿನಃ ಭೂಮಿಯೊಂದಿಗೆ ಬಿಗಿಯಲ್ಪಟ್ಟ ಜೀತಗಾರರಾಗಿರಲಿಲ್ಲ. ಭೂಮಿ ಸಾಮಾನ್ಯವಾಗಿ ಖಾಸಗಿಯಾಗಿರದೆ ಸಮೂಹ ಒಡೆತನದಲ್ಲಿದ್ದರಿಂದ ಆ ಭೂಮಿಯಲ್ಲಿ ಕೆಲಸ ಮಾಡುವವರ ಮೇಲೂ ಅದೇ ರೀತಿಯ ಸಮೂಹ ಹಿಡಿತವಿತ್ತು. ಈ ರೀತಿಯಲ್ಲಿ ಶೂದ್ರರ ಪರಿಸ್ಥಿತಿ ಗುಲಾಮರ ಸ್ಥಿತಿಗೆ ಸರಿ ಸಮಾನವಾಗಿದ್ದರು.

ವೇದಕಾಲದ ಅಂತಿಮ ಘಟ್ಟದಲ್ಲಿ ಅಂದರೆ ಕ್ರಿ.ಪೂ. 600 ರಲ್ಲಿ ಸಮಾಜ, ವರ್ಗಗಳಾಗಿ ವಿಂಗಡಿಸಲ್ಪಟ್ಟು ವರ್ಣಾಶ್ರಮ ಪದ್ಧತಿ ಗಟ್ಟಿಯಾಗಿ ನೆಲೆಯೂರಿತು. ಬ್ರಾಹ್ಮಣರು, ಕ್ಷತ್ರಿಯರು ಆಳುವ ವರ್ಗಕ್ಕೆ ಸೇರಿದ ಮೇಲ್ವರ್ಣದವರಾದರು. ವೈಶ್ಯರು ರಾಜನಿಗೆ ದವಸ ಧಾನ್ಯಗಳ ತೆರಿಗೆ ಕೊಡುತ್ತಾ ರೈತರಾಗಿ ಮೂರನೆಯ ವರ್ಣಕ್ಕೆ ಸೇರಿದರು. ಶೂದ್ರರು ಆಳುವ ವರ್ಗಗಳಿಗೂ ಮೇಲ್ವರ್ಣಗಳಿಗೂ ಸೇವೆ ಮಾಡುವ ನಾಲ್ಕನೆಯ ವರ್ಣಕ್ಕೆ ಸೇರಿಸಲ್ಪಟ್ಟರು. ಈ ಸಾಮಾಜಿಕ ಶ್ರೇಣೀಕರಣದಲ್ಲಿ ಪ್ರತಿಯೊಂದು ವರ್ಣದ ಸ್ಥಾನವು ನಿರ್ಣಾಯಕವಾಗಿ ನಿರ್ಧರಿಸಲ್ಪಟ್ಟಿತು. ವರ್ಗಗಳ ಆಧಾರದ ಮೇಲೆ ವರ್ಣಗಳು ನಿರ್ಮಾಣಗೊಂಡವು. ಆದ್ದರಿಂದ ಭಾರತದಲ್ಲಿ ವರ್ಗಗಳ ಹುಟ್ಟು ಎಂಬುದು ವರ್ಣ ಗಳಿಂದ ಪ್ರಾರಂಭವಾಯಿತು.

ಬುಡಕಟ್ಟು ಚೂರು ಚೂರಾಗುವ ಮೂಲಕ ವರ್ಣಾಶ್ರಮ ಹುಟ್ಟಿದರೂ ಬುಡಕಟ್ಟಿನ ಎಲ್ಲ ಅಂಶಗಳಿನ್ನೂ ನಾಶವಾಗಿರಲಿಲ್ಲ. ಬುಡಕಟ್ಟು ಸಮಾಜದೊಳಗೇ ವರ್ಣ ಬೇಧಗಳು ರೂಪುಗೊಂಡು ಆಳುವ ವರ್ಗ ಆಳಿಸಿಕೊಳ್ಳುವ ವರ್ಗ ಎಂದು ವಿಂಗಡಣೆಯಾದ ನಂತರವೂ ಬುಡಕಟ್ಟು ಜನ ಜೀವನದ ಹಲವಾರು ಅಂಶಗಳು ಹಾಗೇ ಮುಂದುವರೆದುಕೊಂಡು ಬಂದವು. ನಂತರದಲ್ಲಿ ಈ ಎಲ್ಲ ಅಂಶಗಳು ವರ್ಗ ಸಮಾಜಕ್ಕೆ ಸೇವೆ ಮಾಡುವ ಅಂಶಗಳಾಗಿ ಮುಂದುವರೆದವು.

ವರ್ಣ ಸಮಾಜ ವಿಸ್ತರಣೆಗೊಂಡು ಹಲವಾರು ಬುಡಕಟ್ಟು ಸಮುದಾಯಗಳನ್ನು ಈ ಹೊಸ ವ್ಯವಸ್ಥೆಯೊಳಗೆ ತಂದು ಶೂದ್ರರ ಸ್ಥಿತಿಗೆ ತಳ್ಳಲಾಯಿತು. ಆ ವ್ಯವಸ್ಥೆಯಲ್ಲಿ ಹಳೆಯ ರಕ್ತ ಸಂಬಂಧಗಳು, ಬುಡಕಟ್ಟು ಸಮಾಜದ ಕುರುಹುಗಳು ನಾಶವಾಗದೇ ಹಾಗೇ

ಉಳಿದುಕೊಂಡಿದ್ದವು. ಗ್ರೀಕ್ ಸಮಾಜದಲ್ಲಿ ಗುಲಾಮರನ್ನು ವ್ಯಾಪಾರ ಮಾಡುವಂತೆ ಇಲ್ಲಿ ನಡೆಯಲಿಲ್ಲ. ಆದ್ದರಿಂದ ಬುಡಕಟ್ಟು ಸಮಾಜದ ಸದಸ್ಯರು ಚೆಲ್ಲಾಪಿಲ್ಲಿಯಾಗದೆ ಒಂದೆ ಕಡೆ ಗುಂಪು ಗುಂಪಾಗಿ ಉಳಿಯು ವಂತಾಯಿತು. ಹೀಗಾಗಿ ಬುಡಕಟ್ಟು ಜನಾಂಗದ ಜೀವನ ಪದ್ಧತಿ, ಸಂಸ್ಕೃತಿಗಳು ಹಳೆಯ ಸಂಪ್ರದಾಯಗಳು ಹಾಗೇ ಉಳಿದವು. ಇವೆಲ್ಲವೂ ಕೂಡ ಬುಡಕಟ್ಟು ಸಮಾಜದ ಹಲವಾರು ಹಳೆಯ ಅಂಶಗಳು ಮುಂದುವರೆಯಲು ಪೂರಕವಾದವು.

## ಅಸ್ಪೃಶ್ಯತೆಯ ಹುಟ್ಟು

ವರ್ಣ ಸಮಾಜ ಹುಟ್ಟಿದ ಸಮಯದಲ್ಲಿಯೇ ಶೂದ್ರರಲ್ಲಿನ ಒಂದು ಭಾಗದವರು ಅಸ್ಪೃಶ್ಯರೆಂದು ಕರೆಯಲ್ಪಟ್ಟರು. ಚಾಂಡಾಲರು, ನಿಷಾದರು, ಪುಳೆಯರು, ದಯ್ಯುಗಳು ಮುಂತಾದ ಬುಡಕಟ್ಟು ಜನಾಂಗದವರನ್ನು ಮತ್ತು ಆರ್ಯರಲ್ಲಿಯೇ ಸಂಪ್ರದಾಯ ಮುರಿದವರನ್ನು ಆರ್ಯಗುಂಪಿನ ಹೊರಕ್ಕೆ ತಳ್ಳಿ ಅಸ್ಪೃಶ್ಯರನ್ನಾಗಿ ಮಾಡಿ ಅವರನ್ನು ಅಂತರು, ಅಂತ್ಯರು ಅಥವಾ ಬಹಯರೆಂಬ ಹೆಸರಿನಲ್ಲಿ ಕರೆದರು. ಅಸ್ಪೃಶ್ಯತೆ ಎಲ್ಲಿಂದ ಹುಟ್ಟಿತು ಎಂಬುದು ಇಂದಿಗೂ ಚರ್ಚಿಸಲ್ಪಡುತ್ತಿದೆ. ಆರ್ಯರು ಭಾರತಕ್ಕೆ ಬರುವ ಮುಂಚೆ ಸ್ಥಿರವಾದ ಒಂದು ವ್ಯವಸಾಯ ಪದ್ಧತಿಯನ್ನು ಅವಲಂಬಿಸಿದ, ಸಾಂಸ್ಕೃತಿಕ ಚಟುವಟಿಕೆ ಹೊಂದಿದ ದ್ರಾವಿಡರಿಂದ ಅಸ್ಪೃಶ್ಯತೆ ಹುಟ್ಟಿ ನಂತರ ಬ್ರಾಹ್ಮಣರು ಸಮಾಜದಲ್ಲಿ ತಮ್ಮ ಮೇಲ್ಮಟ್ಟದ ಸ್ಥಾನವನ್ನು ಸ್ಥಿರಗೊಳಿಸಿಕೊಳ್ಳಲು ಅಸ್ಪೃಶ್ಯತೆಯನ್ನು ಉಪಯೋಗಿಸಿಕೊಂಡರೆಂದು ಕೆಲವರ ಅಭಿಪ್ರಾಯವಾಗಿದೆ. ಆದರೆ ಇದಕ್ಕೆ ಯಾವ ನಿರ್ದಿಷ್ಟ ಆಧಾರವೂ ಸಿಕ್ಕಿಲ್ಲ. ವರ್ಣಾಶ್ರಮ ವ್ಯವಸ್ಥೆಯ ಸಮಾಜದಲ್ಲಿ ಅಸ್ಪೃಶ್ಯತೆಯ ಬಗ್ಗೆ ಹಲವಾರು ಆಧಾರಗಳು ಸಿಗುವುದರಿಂದ ಇದು ವರ್ಣಾಶ್ರಮ ವ್ಯವಸ್ಥೆಯಲ್ಲಿಯೇ ಹುಟ್ಟಿದೆ ಎಂದು ತಾತ್ಕಾಲಿಕವಾಗಿ ಪರಿಗಣಿಸುವುದು ಸರಿ ಎನಿಸುತ್ತದೆ. ಬ್ರಾಹ್ಮಣೀಯ ಸಮಾಜದಲ್ಲಿ ಅಸ್ಪೃಶ್ಯರನ್ನು ಅನಿಷ್ಟರೆದು, ಅತೀ ಕೆಳಮಟ್ಟದವರೆಂದು ಕರೆಯಲ್ಪಟ್ಟರು. ಅಸ್ಪೃಶ್ಯರು ಮುಟ್ಟಿದ ಗಾಳಿ, ನೀರು, ಆಹಾರ, ವಸ್ತುಗಳು ಅಶುದ್ಧ ಎಂಬ ಅಭಿಪ್ರಾಯ ಬಂದಿತು. ಅಸ್ಪೃಶ್ಯರನ್ನು ಬೇರೆ ಜನರಿಂದ ಪ್ರತ್ಯೇಕವಾಗಿ ಗುರುತಿಸಲು ಅವರಿಗೆ ನಿರ್ದಿಷ್ಟವಾದ ಬಣ್ಣದ ಬಟ್ಟೆ, ಟೊಂಕ ಪಟ್ಟಿ, ಮೈಮೇಲೆ ಹರಿದ ವಸ್ತ್ರ, ಕೈಯಲ್ಲಿ ಮಣ್ಣಿನ ಮಡಕೆ ಕೊಡಲಾಯಿತು. ಅವರ ಜೊತೆ ಸೇರಿ ಆಹಾರ ಸೇವಿಸುವುದು, ಬದುಕುವುದು, ಸಂಬಂಧ ಇಟ್ಟುಕೊಳ್ಳುವುದನ್ನು ದೊಡ್ಡ ಪಾಪವೆಂದು ಪರಿಗಣಿಸಲ್ಪಟ್ಟಿತು. ಸಾಮಾನ್ಯವಾಗಿ ನಾಲ್ಕು ವರ್ಣದವರೂ ಇವರನ್ನು ಅಸ್ಪೃಶ್ಯರೆಂದು ನೋಡಿದರೆ ಬ್ರಾಹ್ಮಣರು ಅವರನ್ನು ಇನ್ನೂ ಅತೀ ತಿರಸ್ಕೃತರನ್ನಾಗಿ ಕಂಡರು. ಸಮಾಜದಲ್ಲಿ ಒಂದು ನಿರ್ದಿಷ್ಟ ಜನಾಂಗವನ್ನು ಅಸ್ಪೃಶ್ಯರಾಗಿ ಹೀನಾಯವಾಗಿ ಕಾಣಲು ಎರಡು ಪ್ರಮುಖ ಕಾರಣಗಳನ್ನು ನೀಡಬಹುದು. ಮೊದಲನೆಯದಾಗಿ ಸಮಾಜದ ಬೆಳವಣಿಗೆಯ ಹಂತದಲ್ಲಿ ಇವರು ಬಾರೀ ಹಿಂದುಳಿದಿದ್ದು ವರ್ಣ ಸಮಾಜದ ಉತ್ಪಾದನಾ ವಿಧಾನದಲ್ಲಿ ನೇರವಾಗಿ ಭಾಗವಹಿಸಲು ಆಗದೆ ಇದ್ದುದು. ವ್ಯವಸಾಯ ಅಥವಾ ಕರಕುಶಲ ಕೆಲಸ ಗೊತ್ತಿರದೆ ತೀರಾ ಹಿಂದುಳಿದ ಬುಡಕಟ್ಟು ಸಮಾಜವಾಗಿ ಇದ್ದುದು. ಎರಡನೆಯದಾಗಿ ಬ್ರಾಹ್ಮಣೀಯ ಸಮಾಜ ವ್ಯವಸ್ಥೆಯಲ್ಲಿ ಅವರ ಸಂಪ್ರದಾಯದ ಕಟ್ಟುಪಾಡುಗಳಿಗೆ ಒಳಪಡದೆ ಅವುಗಳನ್ನು ವಿರೋಧಿಸಿ ತೀವ್ರವಾಗಿ ಹೋರಾಡಿದುದು. ವರ್ಗ ಸಮಾಜದಲ್ಲಿ ಗುಲಾಮರಾಗಿ ತೀವ್ರವಾದ ಶೋಷಣೆಗೆ ಒಳಪಟ್ಟು, ಬಲವಂತವಾಗಿ ಅಧೀನಕ್ಕೆ ಒಳಗಾಗಿ ಶ್ರಮದಲ್ಲಿ ತೊಡಗಿಸಲ್ಪಟ್ಟು ವರ್ಣಾಶ್ರಮ ಧರ್ಮದ ಕಟ್ಟುಪಾಡುಗಳಿಗೆ ಒಳಪಟ್ಟು ಜೀವಿಸಲು ಅವರಿಗೆ ಇಷ್ಟವಿರಲಿಲ್ಲ. ಬ್ರಾಹ್ಮಣೀಯ ಸಮಾಜದೊಳಗೆ ಸೇರಿಸುವ ಪ್ರಯತ್ನಗಳನ್ನು ಇವರು ತೀವ್ರವಾಗಿ ವಿರೋಧಿಸಿದರು. ಬ್ರಾಹ್ಮಣೀಯ ಸಮಾಜದೊಳಗೆ ಎಳೆತಂದರೂ ಅವರು ತಮ್ಮ ಹಳೆಯ ಜೀವನ ಪದ್ಧತಿಯನ್ನು ಬದಲಾಯಿಸಲಿಲ್ಲ. ಇಲ್ಲಿ ಒಂದು ವಿಷಯವನ್ನು ನಾವು ಗಮನಿಸಬೇಕು. ಅಸ್ಪೃಶ್ಯರೆನಿಸಲ್ಪಟ್ಟ ಜನರೆಲ್ಲರೂ ಕೂಡ ಮೇಲೆ ಹೇಳಿದಂಥ ಎರಡೂ ಪ್ರಕ್ರಿಯೆಗಳಿಗೆ ಒಳಗಾಗಿರಬೇಕೆಂದು ನಾವು ಅರ್ಥೈಸಿಕೊಳ್ಳಬಾರದು. ಕೆಲವು ಗುಂಪುಗಳಿಗೆ ಯಾವುದಾದರೂ ಒಂದು ಅಂಶ ಪ್ರಧಾನವಾಗಿರುವ ಸಾಧ್ಯತೆ ಇತ್ತು. ಮತ್ತು ವೇದಕಾಲದಲ್ಲಿ ಮೇಲ ಅಂತಸ್ತು ಹೊಂದಿದ್ದ ಕೆಲವು ಕರ ಕುಶಲರು ಉದಾಹರಣೆಗೆ ನೇಕಾರರು, ಬಿದಿರು ಕೆಲಸಗಾರರು, ಚಮ್ಮಾರ, ನಿಶಾದರು, ವೇಣರು ಮುಂತಾದ ಬುಡಕಟ್ಟನವರನ್ನು ಕೂಡ ಅಸ್ಪೃಶ್ಯರನ್ನಾಗಿ ಮಾಡಿದರು. ಆದ್ದರಿಂದ ಉತ್ಪಾದನೆಯ ಬೆಳವಣಿಗೆಯಲ್ಲಿ ಹಿಂದುಳಿದಿರುವುದೇ ಪ್ರಧಾನ ಕಾರಣ ಎಂದು ಹೇಳುವುದು ಒಮ್ಮುಖವಾಗುತ್ತದೆ ಮತ್ತು ಅದು ಆರ್ಥಿಕ ನಿರ್ಣಾಯಕವಾದವಾಗುತ್ತದೆ. ಅದೇ ರೀತಿ ಮಡಿ ಮೈಲಿಗೆ ಮುಂತಾದ ವಿಚಾರಗಳಿಂದ ಮಾತ್ರ ಅಸ್ಪೃಶ್ಯತೆ ಹುಟ್ಟಿತು ಎಂದು ಹೇಳುವುದು ಕೂಡ ಮೇಲ್ಮಟ್ಟದ ದೃಷ್ಟಿಕೋನವಾಗುತ್ತದೆ. ಅಸ್ಪೃಶ್ಯತೆ ಎಂಬುದು ಒಂದು ವರ್ಗ ಸಮಾಜದಲ್ಲಿ (ವರ್ಣ ವ್ಯವಸ್ಥೆಯಲ್ಲಿ) ಬುಡಕಟ್ಟು ಜನರ ಹಿಂದುಳಿದ ಪರಿಸ್ಥಿತಿ, ಬ್ರಾಹ್ಮಣೀಯ ಸಮಾಜದ ವ್ಯವಸ್ಥೆಯೊಳಗೆ ಬರಲು ಬುಡಕಟ್ಟು ಜನರ ವಿರೋಧ, ದೈಹಿಕ ಶ್ರಮದ ಬಗ್ಗೆ ತಾತ್ಸಾರ ಮನೋಭಾವನೆ, ಕೆಲವು ವಸ್ತುಗಳ ಬಗ್ಗೆ ಮೈಲಿಗೆ, ನಿಷೇಧ ಮುಂತಾದ ಹಲವಾರು ಅಂಶಗಳು ಒಗ್ಗೂಡಿ ನಿರ್ದಿಷ್ಟ ಲಕ್ಷಣ ಹೊದಿರುವ ವಿಶೇಷ ಸಾಮಾಜಿಕ ಆಚರಣೆಗೆ ದಾರಿ ಮಾಡಿಕೊಟ್ಟಿತು.

## ವರ್ಣ ಸಮಾಜ ವ್ಯವಸ್ಥೆಯ ವಿಸ್ತರಣೆ

ಭಾರತ ಒಂದು ಉಪಖಂಡವಾಗಿದ್ದು ಹಲವಾರು ಭೌಗೋಳಿಕ ಸ್ಥಿತಿ, ಪರಿಸರ ಸ್ಥಿತಿಯನ್ನು ಹೊಂದಿರುವುದರಿಂದ ಇಲ್ಲಿ ಹಲವಾರು ರೀತಿಯ ಬುಡಕಟ್ಟು ಸಮಾಜಗಳು ಹುಟ್ಟಿದವು. ಈ ಭಿನ್ನತೆ, ಪ್ರಾಚೀನ ಶಿಲಾಯುಗದಿಂದಲೇ ಬೇಟೆಯಾಡುವುದು, ಆಹಾರ ಸಂಗ್ರಹಣೆ ಮಾಡುವ ಹಂತದಲ್ಲಿ, ಹಳೆಯ ಶಿಲಾಯುಗದಲ್ಲಿ ಉಗಮವಾಯಿತು. ಇವರಲ್ಲಿ ಸಾಮಾನ್ಯ ಅಂಶಗಳು ಇದ್ದರೂ ಕೂಡ ಅನೇಕ ಬುಡಕಟ್ಟು ಜನಾಂಗದವರು ತಮ್ಮದೇ ಆದ ಸಂಸ್ಕೃತಿ, ಭಾಷೆ ಆಚರಣೆಗಳನ್ನು ಹೊಂದಿದ್ದರು. ಅದೇ ರೀತಿಯಲ್ಲಿ ಇವುಗಳ ಬೆಳವಣಿಗೆ ಸಾಮಾನ್ಯವಾಗಿ ಆದಿಮ ಸಮತಾ ಸಮಾಜದಲ್ಲಿದ್ದರೂ ಹಲವಾರು ಏರುಪೇರುಗಳಿಂದ ಕೂಡಿತ್ತು. ಪ್ರತಿಯೊಂದು ಜನಾಂಗವೂ ಪ್ರಧಾನವಾಗಿ ಯಾವುದೋ ಒಂದು ಬೆಳೆಯನ್ನು ಬೆಳೆಸಿ, ಮೃಗಗಳನ್ನು ಬೇಟೆಯಾಡಿ ಪ್ರಾಣಿ ಸಾಗಾಣಿಕೆಯನ್ನು ಆಧಾರವಾಗಿ ಇಟ್ಟುಕೊಂಡು ಸಾಮೂಹಿಕ ಜೀವನ ನಡೆಸಿಕೊಂಡು ಬಂದರು. ತಮ್ಮನ್ನು ಗುರುತಿಸಿಕೊಳ್ಳುವ ಸಲುವಾಗಿ ತಮ್ಮ ಜೀವನಕ್ಕೆ ಆಧಾರವಾಗಿರುವ ಬೆಳೆ ಅಥವಾ ಪ್ರಾಣಿ ಪಕ್ಷಿ ಮುಂತಾದವುಗಳಲ್ಲಿ ಯಾವುದೊ ಒಂದನ್ನು ತಮ್ಮ ಲಾಂಛನವನ್ನಾಗಿ ಇಟ್ಟುಕೊಂಡಿದ್ದರು. ನಿಸರ್ಗದ ನಿಯಮವನ್ನು ಅರಿತು ತನ್ನ ಉತ್ಪಾದನಾ ಶಕ್ತಿಯನ್ನು ಅಭಿವೃದ್ಧಿಗೊಳಿಸಿ ಉತ್ಪಾದನೆಯನ್ನು ಹೆಚ್ಚಿಸಿದಂತೆ ಸಮಾಜದಲ್ಲಿ ಬದಲಾವಣೆ ಕೂಡ ಬಂದಿತು. ಒಂದೆಡೆ ಲೋಹಗಳ

ಕಂಡುಹಿಡಿಯುವಿಕೆ ಕೂಡ ಉತ್ಪಾದನೆಯನ್ನು ಹೆಚ್ಚಿಸಿತು. ಇದರಿಂದ ಮತ್ತೊಂದು ಕಡೆ ಬುಡಕಟ್ಟು ಸಮಾಜದ ಬೆಳವಣಿಗೆಯಲ್ಲಿ ಏರು ಪೇರು ಮತ್ತಷ್ಟು ಹೆಚ್ಚಿತು. ಅಧಿಕಗೊಂಡ ಹೆಚ್ಚುವರಿ ಉತ್ಪಾದನೆ ಬುಡಕಟ್ಟು ಸಮಾಜಗಳ ನಡುವೆ ವಸ್ತು ವಿನಿಮಯಕ್ಕೆ ದಾರಿ ಮಾಡಿಕೊಟ್ಟಿತು. ಈ ಅಭಿವೃದ್ಧಿ ನವ ಶಿಲಾಯುಗಕ್ಕೆ ಎಡೆಮಾಡಿಕೊಟ್ಟಿತು. ಕಬ್ಬಿಣವನ್ನು ಕಂಡುಹಿಡಿದು ಅದನ್ನು ಉತ್ಪಾದನೆಯಲ್ಲಿ ತೊಡಗಿಸಿದ ನಂತರ ಉತ್ಪಾದನೆ ಮತ್ತೂ ಹೆಚ್ಚಾಗಿ ವರ್ಗ ವಿಭಜನೆ ಪ್ರಾರಂಭಗೊಂಡಿತು. ಬುಡಕಟ್ಟಿನಲ್ಲಿ ಒಡಕು ಉಂಟಾಗಿ ಅದರ ನಾಯಕ, ಪುರೋಹಿತರನ್ನೊಳಗೊಂಡ ಒಂದು ಆಳುವ ವರ್ಗ ರೂಪುಗೊಂಡಿತು. ಈ ಸಾಮಾಜಿಕ ಪ್ರಕ್ರಿಯೆ, ಅಭಿವೃದ್ಧಿಗೊಂಡ ಬುಡಕಟ್ಟು ಹಾಗೂ ಹಿಂದುಳಿದ ಬುಡಕಟ್ಟುಗಳು ನಡುವಿನ ಅಂತರವನ್ನು ಹೆಚ್ಚಿಸಿ ಈ ಎರಡೂ ಬುಡಕಟ್ಟುಗಳ ನಡುವೆ ಯುದ್ಧಕ್ಕೆ ಎಡೆಮಾಡಿಕೊಟ್ಟಿತು. ಯುದ್ಧದಲ್ಲಿ ಸೋಲಿಸಲ್ಪಟ್ಟ ಬುಡಕಟ್ಟು ಜನಾಂಗದವರನ್ನು ಗುಲಾಮರನ್ನಾಗಿ ಮಾಡಿ ಶೋಷಿಸಿದರು. ನೇಗಿಲಾಧಾರಿತ ವ್ಯವಸಾಯ ಪ್ರಾರಂಭಗೊಂಡ ನಂತರ ಈ ಗುಲಾಮ ಜನರಲ್ಲಿ ಒಂದು ಭಾಗದವರನ್ನು ಗೆದ್ದವರ ಭೂಮಿಯಲ್ಲಿ ಕಡ್ಡಾಯವಾಗಿ ಕೆಲಸ ಮಾಡುವ ನಿರ್ಬಂಧ ಹೇರಿದರು. ಉಳಿದವರನ್ನು ಕರಕುಶಲ ಕೆಲಸಗಾರರನ್ನಾಗಿ ಮತ್ತು ಮನೆಗೆಲಸದ ಗುಲಾಮರನ್ನಾಗಿ ಮಾಡಿದರು. ಇದೇ ಸಂದರ್ಭದಲ್ಲಿ ಬುಡಕಟ್ಟು ಸಮಾಜದೊಳಗೆ ವರ್ಗ ವಿಭಜನೆಯುಂಟಾಗಿ ಒಂದು ಪರಿಪೂರ್ಣ ವರ್ಗ ಸಮಾಜ ಆಚರಣೆಗೆ ಬಂತು. ಪ್ರಭುತ್ವ ಯಂತ್ರಾಂಗ, ಧರ್ಮಗಳೆರಡೂ ಹುಟ್ಟಿಕೊಂಡವು. ಶ್ರಮಿಕ ಜನರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಶೋಷಿಸಲ್ಪಟ್ಟರು.

ಭಾರತದಲ್ಲಿ ವರ್ಗ ಸಮಾಜದ ಹುಟ್ಟು ವರ್ಣಾಶ್ರಮದ ಆಧಾರದ ಮೇಲೆ ಆಗಿದೆ ಎಂಬುದನ್ನು ಈ ಮೊದಲು ನೋಡಿದ್ದೇವೆ. ವಾಸ್ತವದಲ್ಲಿ ವರ್ಣಗಳು ಎಂದರೆ ವರ್ಗ ಎಂದರ್ಥ. ಈ ವರ್ಗ ಸಮಾಜ ಯಾವ ರೀತಿಯ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿತ್ತು ಎಂಬುದರ ಬಗ್ಗೆ ಇನ್ನೂ ಕೂಡ ವಿಭಿನ್ನ ಅಭಿಪ್ರಾಯಗಳಿವೆ. ಅಥವಾ ಖಚಿತ ತೀರ್ಮಾನಕ್ಕೆ ಬರಲಾಗಿಲ್ಲ. ಯಾವುದೇ ಸಮಾಜ ವ್ಯವಸ್ಥೆ, ಅದರ ಉತ್ಪಾದನೆಯನ್ನು ಆಧರಿಸಿರುತ್ತದೆ. ಕೆಲವರು ಇದನ್ನು ಗುಲಾಮ ಸಮಾಜವೆಂದೂ ಮತ್ತೆ ಕೆಲವರು ಭೂಮಾಲೀಕ ವ್ಯವಸ್ಥೆಗೆ ಬದಲಾಗುತ್ತಿದ್ದ ಮಧ್ಯಂತರ ಕಾಲವೆಂದೂ, ಮತ್ತೂ ಕೆಲವರು ಅರ್ಥಶಾಸ್ತ್ರ ಸಮಾಜವೆಂದು ಹೇಳುತ್ತಾರೆ.

ನಾವು ಇದನ್ನು ಶೂದ್ರ ಒಡೆತನದ ಸಮಾಜ ಎಂದು ಕರೆಯೋಣ. ನಾಲ್ಕು ವರ್ಣಗಳಾಗಿ (ವರ್ಗಗಳಾಗಿ) ವಿಭನೆ ಹೊಂದಿದ ಸಮಾಜದಲ್ಲಿ ಬ್ರಾಹ್ಮಣರು, ಕ್ಷತ್ರಿಯರು (ರಾಜ) ಆಳುವ ವರ್ಗಗಳಾಗಿದ್ದರು. ವೈಶ್ಯರು, ಶೂದ್ರರು ಆಳಿಸಿಕೊಳ್ಳುವ ವರ್ಗಗಳಾಗಿದ್ದರು. ಈ ಕಾಲದಲ್ಲಿ ವೈಶ್ಯರು ಸ್ವತಂತ್ರ ರೈತಾಪಿಗಳಾಗಿ, ಕರ ಕುಶಲರಾಗಿ ಇದ್ದು ರಾಜನಿಗೆ (ಪ್ರಭುತ್ವಕ್ಕೆ) ತೆರಿಗೆ ಕಟ್ಟುತ್ತಿದ್ದರು. ಇವರಿಂದ ಹೆಚ್ಚುವರಿ ಉತ್ಪನ್ನವನ್ನು ಬಲವಂತವಾಗಿ ಕಸಿದುಕೊಳ್ಳಲಾಗುತ್ತಿತ್ತು. ಆದರೂ ಅದು ಸಮಾಜದ ಹೆಚ್ಚುವರಿಯಲ್ಲಿ ಒಂದು ಸಣ್ಣ ಭಾಗವಾಗಿತ್ತು. ಶೂದ್ರರ ಶ್ರಮಶಕ್ತಿಯನ್ನು ಶೋಷಿಸುವ ಮೂಲಕ ಆ ಸಮಾಜ ವ್ಯವಸ್ಥೆ ಸ್ಥಿರಗೊಂಡಿತು. ಇದೇ ರೀತಿ ಶೂದ್ರರ ಶ್ರಮಶಕ್ತಿ ಶೋಷಿಸುವ ಆಧಾರದ ಮೇಲೆ ಆ ಸಮಾಜ ಬೆಳವಣಿಗೆ ಹೊಂದಿತು. ಹೀಗಾಗಿ ಶೂದ್ರರ ಶ್ರಮವನ್ನಾಧರಿಸಿದ ಈ ಸಮಾಜವನ್ನು ಶೂದ್ರ ಒಡೆತನದ ಸಮಾಜವೆಂದು ಕರೆಯುವುದು ಸಮಂಜಸವಾಗಿದೆ.

ವರ್ಣ ಸಮಾಜದ ಹುಟ್ಟಿನೊಂದಿಗೆ ಜಾತಿ ಹುಟ್ಟಿದೆ. ಆದರೆ ಜಾತೀಯತೆ ಒಂದು ಸಂಪೂರ್ಣ ಸಮಾಜ ವ್ಯವಸ್ಥೆಯಾಗಿ ಊಳಿಗಮಾನ್ಯ ಸಮಾಜದಲ್ಲಿ ರೂಪುಗೊಂಡಿತು. ಶೂದ್ರ ಸಮಾಜದಿಂದ ಊಳಿಗಮಾನ್ಯ ಸಮಾಜಕ್ಕೆ ಬದಲಾವಣೆಯಾಗುವ ಮಧ್ಯಂತರ ಕಾಲದಲ್ಲಿ ವರ್ಣ ವ್ಯವಸ್ಥೆ ಜಾತಿ ವ್ಯವಸ್ಥೆಯಾಗಿ ಬದಲಾವಣೆಗೊಂಡಿತು. ಆದ್ದರಿಂದ ಜಾತಿಯ ಹುಟ್ಟಿನೊಂದಿಗೆ ವರ್ಗಗಳು ಹುಟ್ಟಿಕೊಂಡಿದೆ. ಗ್ರೀಕ್,ರೋಮ್, ಈಜಿಪ್ಟ್ ಮುಂತಾದ ಪ್ರಾಚೀನ ಸಮಾಜಗಳಲ್ಲಿ ವರ್ಗ ಸಮಾಜದ ಪ್ರಾರಂಭ ಗುಲಾಮ ಸಮಾಜದಿಂದ ಬಂದ ಹಾಗೆ ಇಲ್ಲಿ ವರ್ಣ ಸಮಾಜ ಒಂದು ಜಾತಿ ಆಧಾರಿತ ಸಮಾಜ ವ್ಯವಸ್ಥೆಯಿಂದ, ಶೂದ್ರ ಸಮಾಜ ವ್ಯವಸ್ಥೆಯಿಂದ ಪ್ರಾರಂಭವಾಯಿತು. ಕ್ರಿ.ಪೂ. 6 ನೆ ಶತಮಾನದಲ್ಲಿ ಗಂಗಾನದಿಯ ಬಯಲು ಪ್ರದೇಶದಲ್ಲಿ ಪ್ರಾರಂಭವಾದ ಶೂದ್ರ ಸಮಾಜ ಮೌರ್ಯ ವಂಶದವರಿಂದ ಆಳಲ್ಪಟ್ಟು ನಂತರ ಕ್ರಿ.ಶ 6 ನೆ ಶತಮಾನದಲ್ಲಿ ಗುಪ್ತರ ಆಳ್ವಿಕೆಯಲ್ಲಿ ಊಳಿಗಮಾನ್ಯ ಸಮಾಜವಾಗಿ ಪರಿವರ್ತನೆ ಹೊಂದಿತು. ದಕ್ಷಿಣದಲ್ಲಿ (ಕೃಷ್ಣ ಹಾಗೂ ಗೋದಾವರಿ ನದಿ ತಟಗಳಲ್ಲಿ) ಕ್ರಿ.ಪೂ. 250 ರಿಂದ ಕ್ರಿ.ಶ. 250 ರ ನಡುವೆ ಶಾತವಾಹನರ ಆಳ್ವಿಕೆಯಲ್ಲಿ ಶೂದ್ರ ಒಡೆತನ ಸಮಾಜ ಅಸ್ತಿತ್ವದಲ್ಲಿತ್ತು. 1000 ವರ್ಷಗಳಲ್ಲಿ ಜಾತಿಯು ವರ್ಣ ವ್ಯವಸ್ಥೆಯಾಗಿ ಬೆಳೆದು ನಂತರ ಕ್ರಿ.ಪೂ. 6 ನೆ ಶತಮಾನದಲ್ಲಿ ಭೂಮಾಲೀಕ ವ್ಯವಸ್ಥೆಯಾಗಿ, ಜಾತಿ ಆಧಾರಿತ ಊಳಿಗಮಾನ್ಯ ವ್ಯವಸ್ಥೆಯಾಗಿ ಬದಲಾವಣೆ ಹೊಂದಿತು.

ಶೂದ್ರ ಸಮಾಜದ ಸಾಮಾಜಿಕ ಚಟುವಟಿಕೆಯ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅತ್ಯಂತ ವಿವರವಾಗಿ ಹೇಳಲ್ಪಟ್ಟಿದೆ. ವ್ಯವಸಾಯ ಅಭಿವೃದ್ಧಿ ಹೊಂದಿ ಭತ್ತ ಮುಂತಾದ ಹಲವಾರು ಆಹಾರ ಧಾನ್ಯಗಳನ್ನು ಬೆಳೆಸಲಾಯಿತು. ಭೂಮಿ ಖಾಸಗಿ ಆಸ್ತಿಯಾಯಿತು. ಗಜಪತಿಗಳೆಂದು ಕರೆಯುವ ಭೂಮಾಲೀಕ ವರ್ಗ, ಪಟ್ಟಣಶ್ರೇಷ್ಠರೆಂಬ ವ್ಯಾಪಾರಿ ವರ್ಗ ಹುಟ್ಟಿಕೊಂಡವು. ಎರಡು ರೀತಿಯ ಭೂಮಿಯಲ್ಲಿ ವ್ಯವಸಾಯ ನಡೆಯಲಾರಂಭಿಸಿತು. ಒಂದು ರಾಷ್ಟ್ರಭೂಮಿ- ಇದು ಸ್ವತಂತ್ರ ರೈತರಿಂದ ಉಳುಮೆ ಮಾಡಲ್ಪಡುತ್ತಿತ್ತು. ಎರಡನೆಯದು ಸೀತಾಭೂಮಿ- ಇದನ್ನು ಶೂದ್ರ ಗುಲಾಮರ ಮೂಲಕ ಪ್ರಭುತ್ವವೇ ಉಳುಮೆ ಮಾಡಿಸುತ್ತಿತ್ತು. ಇದಲ್ಲದೆ ಗಣಿಗಾರಿಕೆಯನ್ನು ಪ್ರಾರಂಭಿಸಿದ ಪ್ರಭುತ್ವ ಬಂಗಾರ, ಬೆಳ್ಳಿಯನ್ನು ಉತ್ಪಾದಿಸಿ ತಮ್ಮ ಖಜಾನೆಯಲ್ಲಿ ಶೇಖರಿಸಿಕೊಳ್ಳತೊಡಗಿತು. ಇಂತಹ ಸೀತಾಭೂಮಿಗಳಲ್ಲಿ, ಗಣಿಗಳಲ್ಲಿ ದುಡಿಯುವ ಶೂದ್ರ ಗುಲಾಮರಿಗಾಗಿ ಅನೇಕ ಯುದ್ಧಗಳು ನಡೆದವು. ಅನೇಕ ಬುಡಕಟ್ಟು ಜನರ ಭೂಮಿ ಮತ್ತು ಅವರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಯಿತು. ಇದರ ಪರಿಣಾಮವಾಗಿ ಶೂದ್ರರ ಸಂಖ್ಯೆ ಅತ್ಯಧಿಕವಾಯಿತು. ಕರ ಕುಶಲ ಕೆಲಸ ಅಭಿವೃದ್ಧಿಗೊಂಡು ವ್ಯಾಪಾರ ಕೂಡ ಬೆಳೆಯಿತು. ನಗರಗಳು ಬೆಳೆದವು. ವ್ಯಾಪಾರಕ್ಕಾಗಿ ರಸ್ತೆಗಳು ನಿರ್ಮಾಣಗೊಂಡವು. ದೂರ ದೂರದ ಪ್ರದೇಶಗಳ ನಡುವೆ ವ್ಯಾಪಾರ ನಡೆಯತೊಡಗಿತು. ಇದರ ಪರಿಣಾಮವಾಗಿ ವ್ಯಾಪಾರ ಬಲಗೊಂಡಿತು. ಧರ್ಮ, ಸಾಂಸ್ಥಿಕ ರೂಪ ಪಡೆಯಿತು. ವೈದಿಕ ಬ್ರಾಹ್ಮಣ ಧರ್ಮದ ಜೊತೆ ಹೊಸದಾಗಿ ಬೌದ್ಧ, ಜೈನ ಧರ್ಮಗಳು ಸೃಷ್ಟಿಯಾದವು. ವೈದಿಕ ಬ್ರಾಹ್ಮಣೀಯ ಆಚರಣೆ ಮತ್ತು ಯಜ್ಞ ಯಾಗಾದಿಗಳು ಸಮಾಜದ

ಬೆಳವಣಿಗೆಗೆ ಅಡ್ಡಿಯಾದ ಕಾರಣ ಬೌದ್ಧ, ಜೈನ ಧರ್ಮಗಳು ಆಳುವ ವರ್ಗಗಳ ಬೆಂಬಲದಿಂದ ಮೇಲುಗೈ ಪಡೆದವು. ಆದ್ದರಿಂದ ವೈದಿಕ ಬ್ರಾಹ್ಮಣರು ತಮ್ಮ ಪಾರಂಪರಿಕ ಯಜ್ಞ ನಡೆಸುವುದನ್ನು ಬಿಟ್ಟು ಅಧಿಕಾರಿ ವರ್ಗದೊಂದಿಗೆ ಸೇರಿ ನಂತರದಲ್ಲಿ ರಾಜಗುರುಗಳಾದರು. ಪ್ರಭುತ್ವ ಯಂತ್ರಾಂಗ ಒಂದು ಬಲಿಷ್ಠ ಆಯುಧವಾಗಿ, ಕೇಂದ್ರೀಕೃತ ಸಂಸ್ಥೆಯಾಗಿ ರೂಪುಗೊಂಡಿತು. ಗ್ರೀಕ್, ರೋಮ್, ಈಜಿಪ್ಟ್, ಚೀನಾ ಹೀಗೆ ಎಲ್ಲೆಡೆ ವರ್ಗದೊಂದಿಗೆ ಧರ್ಮ ಹುಟ್ಟಿದಂತೆ ಭಾರತದಲ್ಲಿಯೂ ಸಹ ವರ್ಣ ಸಮಾಜದ ಹುಟ್ಟಿನ ಜೊತೆಗೇ ವೈದಿಕ ಬ್ರಾಹ್ಮಣ್ಯ ಹುಟ್ಟಿಕೊಂಡಿತು. ವೈದಿಕ ಬ್ರಾಹ್ಮಣ್ಯವನ್ನು ವಿರೋಧಿಸಿ ಬೌದ್ಧ, ಜೈನ ಧರ್ಮಗಳು ಹುಟ್ಟಿದವು. ವರ್ಗ ಶೋಷಣೆಯನ್ನು ಮುಚ್ಚಿಡಲು ಪ್ರತಿಯೊಬ್ಬರ ಜೀವನವೂ ಅವರವರ ಹಣೇಬರಹವನ್ನಾಧರಿಸಿರುತ್ತದೆ ಎಂದು ಹೇಳಿ ವರ್ಗ ಶೋಷಣೆಯನ್ನು ಸಮರ್ಥಿಸುವುದ ಕ್ಕಾಗಿ ಹುಟ್ಟಿದ ಸಿದ್ಧಾಂತಗಳೇ ಈ ಧರ್ಮಗಳು. ದೈಹಿಕ ಶ್ರಮದಿಂದ ಬೌದ್ಧಿಕ ಶ್ರಮವನ್ನು ಬೇರ್ಪಡಿಸಿ ಬೌದ್ಧಿಕ ಶ್ರಮದಲ್ಲಿ ಭಾಗವಹಿಸುವವರೇ ಉತ್ತಮರು ಎಂದು ಹೇಳುತ್ತಾ ಶ್ರಮಜೀವಿಗಳನ್ನು ಶೋಷಣೆ ಮಾಡಿ ಕೊಬ್ಬಿದವರ ಅಗ್ರಸ್ಥಾನವನ್ನು ಇದು ಗಟ್ಟಿಗೊಳಿಸಿತು. ಸಮಾಜದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ನೈಸರ್ಗಿಕವಾಗಿ ನಡೆದ ವೃತ್ತಿ ವಿಭಜನೆಯನ್ನು ನಂತರದ ವರ್ಗಬೇಧಗಳನ್ನು ಕ್ರೂಢೀಕರಿಸಿ ವರ್ಣಾಶ್ರಮ ಧರ್ಮವನ್ನಾಗಿ, ಜನ್ಮಾಧರಿತ ವೃತ್ತಿ ವಿಭಜನೆಯನ್ನಾಗಿ ವೈದಿಕ ಬ್ರಾಹ್ಮಣ್ಯವು ಬೆಳೆಸಿತು. ವರ್ಣಾಶ್ರಮ ಧರ್ಮ ಹಾಗೂ ಬ್ರಾಹ್ಮಣ್ಯ ಇವೆರಡನ್ನೂ ಬೇರ್ಪಡಿಸಲಾಗುವುದಿಲ್ಲ. ಪ್ರತಿಯೊಂದು ವರ್ಣಕ್ಕೆ ಪ್ರತ್ಯೇಕ ಸಾಮಾಜಿಕ ಕರ್ತವ್ಯಗಳು, ಅವರವರ ಜೀವನಕ್ಕೆ ತಕ್ಕಂತೆ ಕಟ್ಟುಪಾಡು, ಮಡಿ, ಮೈಲಿಗೆ, ಬಲಿ, ಮದುವೆ, ಮುಂತಾದ ಸಂಪ್ರದಾಯಗಳನ್ನು, ಆಚರಣೆಗಳನ್ನು ಬ್ರಾಹ್ಮಣರು ವಿಧಿಸಿದರು. ಇದನ್ನು ಮೀರಿದ ಶೂದ್ರರನ್ನು, ಅಸ್ಪೃಶ್ಯರನ್ನು ಉಗ್ರವಾಗಿ ಶಿಕ್ಷಿಸಲಾಯಿತು. ಸಾಮಾನ್ಯವಾಗಿ ಬೌದ್ಧ ಹಾಗೂ ಜೈನಧರ್ಮಗಳು ವರ್ಣಾಶ್ರಮ ಪದ್ಧತಿಗೆ ವಿರುದ್ಧವಾದದ್ದು ಎಂಬ ವಾದವಿದೆ. ವಿಶೇಷವಾಗಿ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಸೇರಿದ ನಂತರ ಬಹುಪಾಲು ಅಂಬೇಡ್ಕರ್‌ವಾದಿಗಳು ಈ ವಾದಕ್ಕೆ ಹೆಚ್ಚಿನ ಪ್ರಚಾರ ನೀಡಿದ್ದಾರೆ. ಆದರೆ ನಿಜಕ್ಕೂ ಬೌದ್ಧಧರ್ಮ ಹುಟ್ಟಿದಂದಿನಿಂದಲೂ ಅಥವಾ ನಂತರವೂ ಅದು ವರ್ಣಾಶ್ರಮ ಪದ್ಧತಿಯನ್ನಾಗಲೀ ಅಥವಾ ಜಾತಿ ಪದ್ಧತಿಯನ್ನಾಗಲೀ ವಿರೋಧಿಸಲಿಲ್ಲ. ವೈದಿಕ ಬ್ರಾಹ್ಮಣ್ಯ ವರ್ಣಾಶ್ರಮ ಪದ್ಧತಿಯನ್ನು ಸೃಷ್ಟಿಸಿದ್ದಾದರೂ ಬೌದ್ಧಧರ್ಮ ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸಲಿಲ್ಲ. ವೈದಿಕ ಬ್ರಾಹ್ಮಣ್ಯದ ಬಲಿ, ಯಾಗ ಮುಂತಾದ ಆಚರಣೆಗಳನ್ನು ವಿರೋಧಿಸುವುದಕ್ಕೆ ಮಾತ್ರ ತನ್ನ ಧಾರ್ಮಿಕ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡಿತು. ಅದು ವರ್ಣಾಧಾರಿತ ಶ್ರಮ ವಿಭಜನೆಯನ್ನು ವಿರೋಧಿಸಲಿಲ್ಲ. ಶೂದ್ರರಲ್ಲಿ ಒಂದು ಭಾಗವನ್ನು, ಕುಶಲಗಾರರನ್ನು ಬೌದ್ಧಧರ್ಮದ ಸಂಘಗಳಲ್ಲಿ ಸೇರಲು ಅನುಮತಿಸಿತು. ಆದರೆ ಅಸ್ಪೃಶ್ಯರು ಸೇರುವುದನ್ನು ತಡೆಯಿತು. ಬೌದ್ಧ ಧರ್ಮವು ವರ್ಣ ಆಧಾರಿತ ಸಮಾಜದಲ್ಲಿ ಹೊಸದಾಗಿ ರೂಪುಗೊಂಡ ಪಟ್ಟಣಗಳ ಆಳುವ ವಗಶಗಳಾದ ದಂಡು ನಾಯಕರುಗಳನ್ನು, ದೊಡ್ಡ ವ್ಯಾಪಾರಿಗಳನ್ನು, ಪ್ರಭುತ್ವದ ಅಧಿಕಾರಿಗಳನ್ನು ಮುಂತಾದವರನ್ನು ಹೊಂದಿತ್ತು. ವ್ಯಾಪಾರದಿಂದ ಲಾಭ ಪಡೆದ ಕರ ಕುಶಲಗಾರರಲ್ಲಿನ ಒಂದು ಭಾಗವು ಬೌದ್ಧಧರ್ಮವನ್ನು ಬೆಂಬಲಿಸಿತು. ಆದರೆ ಬಹುಸಂಖ್ಯಾತ ಶ್ರಮಿಕ ಜನರನ್ನು, ಶೂದ್ರರನ್ನು, ಶೋಷಿಸುವ ಆಳುವ ವರ್ಗದ ಧರ್ಮವಾಗಿ ಬೌದ್ಧಧರ್ಮ ಇತ್ತು. ಬೌದ್ಧ ಧರ್ಮ ಹಾಗೂ ವೈದಿಕ ಬ್ರಾಹ್ಮಣ್ಯ ಧರ್ಮದ ನಡುವಿನ ವೈರುಧ್ಯ, ಆಳುವ ವರ್ಗಗಳಾದ ಬ್ರಾಹ್ಮಣರು ಮತ್ತು ಕ್ಷತ್ರಿಯರ ಮಧ್ಯ ಉಂಟಾದ ವೈರುಧ್ಯವೇ ಆಗಿವೆ. ಬೌದ್ಧಧರ್ಮ ವರ್ಣಾಶ್ರಮ ವ್ಯವಸ್ಥೆಯ ಮೊದಲನೆ ಸ್ಥಾನದಲ್ಲಿ ಬ್ರಾಹ್ಮಣರು ಇರುವುದನ್ನು ಪ್ರಶ್ನಿಸಿತು. ಆದರೆ ಕೆಳಮಟ್ಟದಲ್ಲಿರುವ ಶೂದ್ರರ ಬಗ್ಗೆ ಏನನ್ನೂ ಹೇಳಲಿಲ್ಲ. ಬಲಳವಣಿಗೆಯ ಹಂತದಲ್ಲಿದ್ದ ಹಲವಾರು ಬುಡಕಟ್ಟುಗಳನ್ನು ಸೋಲಿಸಿ ವರ್ಣಾಶ್ರಮ ಸಮಾಜದೊಳಗೆ ಬಲವಂತವಾಗಿ ಎಳೆದು ತಂದುದನ್ನು ಅದು ವಿರೋಧಿಸಲಿಲ್ಲ. ಪ್ರಪಂಚಕ್ಕೆ ಅಹಿಂಸೆಯ ಬಗ್ಗೆ ಬೋಧನೆ ಮಾಡಿದ ಬೌದ್ಧ ಧರ್ಮವು ಕಳಿಂಗ ಯುದ್ಧದಲ್ಲಿ ನಡೆದ ರಕ್ತದೋಕುಳಿಯನ್ನು ಕಂಡು ಅಶೋಕ ಪಶ್ಚಾತ್ತಾಪದಿಂದ ಅಹಿಂಸೆಯನ್ನು ಅಪ್ಪಿದನೆಂದು ಹೊಗಳಿತು. ಆದರೆ ತನ್ನ ಸೀತಾ ಭೂಮಿಯಲ್ಲಿ ದುಡಿಯಲು ಕಳಿಂಗದ 1 ಲಕ್ಷ 50 ಸಾವಿರ ಶೂದ್ರರನ್ನು ಗುಲಾಮರನ್ನಾಗಿ ಮಾಡಿಕೊಂಡ ಬಗ್ಗೆ ಬೌದ್ಧ ಧರ್ಮದಲ್ಲೆಲ್ಲೂ ಉಲ್ಲೇಖವಿಲ್ಲ. ಆದ್ದರಿಂದ ಬೌದ್ಧಧರ್ಮ ವರ್ಣಾಶ್ರಮವನ್ನು ವಿರೋಧಿಸಿತೆಂಬುದಾಗಲೀ, ಅಸ್ಪೃಶ್ಯತೆಯನ್ನು ವಿರೋಧಿಸಿತೆಂಬುದಾಗಲೀ ಸತ್ಯಕ್ಕೆ ದೂರವಾದ ವಿಚಾರ.

ಒಟ್ಟಿನಲ್ಲಿ ಹೇಳುವುದಾದರೆ ಆದಿಮ ಸಮತಾ ಸಮಾಜ ಒಡೆದು ವರ್ಗ ಅಥವ ವರ್ಣ ಸಮಾಜ ಹುಟ್ಟಿದ ಸಮಯದಲ್ಲಿ ಜಾತೀಯತೆ ಹುಟ್ಟಿತು.

## II. ಜಾತಿಗಳ ಸದೃಢೀಕರಣ ಮತ್ತು ಸಮಾಜದಲ್ಲಿ ಅದರ ಪಾತ್ರ

### ಅ. ವರ್ಣ ಸಮಾಜದ ಬಿಕ್ಕಟ್ಟು

ವರ್ಣ ಸಮಾಜವು ಶೂದ್ರರ ಹೆಚ್ಚುವರಿ ಶ್ರಮವನ್ನು ಶೋಷಣೆ ಮಾಡುವುದನ್ನು ಆಧಾರವಾಗಿಸಿಕೊಂಡಿದ್ದರೂ ಅದನ್ನು ತೆರಿಗೆ ರೂಪದಲ್ಲಿ ವಸೂಲು ಮಾಡತ್ತಿರಲಿಲ್ಲ. ನೇರವಾಗಿ ಅಂದರೆ ಗುಲಾಮರುಗಳನ್ನಾಗಿಸಿ ಅವರ ಶ್ರಮವನ್ನು ದೋಚುವ, ಕೂಲಿ ಕೊಟ್ಟು ಅವರನ್ನು ಅವರನ್ನು ದುಡಿಸಿಕೊಳ್ಳುವ ರೂಪದಲ್ಲಿತ್ತು. ಅವರು ಪ್ರಭುತ್ವಕ್ಕೆ ತೆರಿಗೆ ಸಲ್ಲಿಸುವ ಸ್ವತಂತ್ರ ಪ್ರಜೆಗಳಾಗಿರಲಿಲ್ಲ. ಆದ್ದರಿಂದ ತೆರಿಗೆ ಕೇವಲ ವೈಶ್ಯರಿಂದ, ಕರ ಕುಶಲಗಾರರಿಂದ ಮತ್ತು ವ್ಯಾಪಾರಿಗಳಿಂದ ಮಾತ್ರ ವಸೂಲಿ ಮಾಡಲಾಗುತ್ತಿತ್ತು. ಬ್ರಾಹ್ಮಣರು, ಕ್ಷತ್ರಿಯರು ತೆರಿಗೆಯಿಂದ ವಿನಾಯ್ತಿ ಹೊಂದಿದ್ದರು. ಪ್ರಭುತ್ವ ತನ್ನ ಆಡಳಿತಾಂಗದ ಮುಖಾಂತರ ಜನರಿಂದ ನೇರವಾಗಿ ತೆರಿಗೆ ವಸೂಲಿ ಮಾಡುತ್ತಿತ್ತು. ಸರ್ಕಾರ ನೌಕರರೆಲ್ಲರಿಗೂ ಹಣದ ರೂಪದಲ್ಲಿ ವೇತನ ಕೊಡಲು ಪ್ರಾರಂಭಿಸಿತು. ಸರ್ಕಾರದ ಆದಾಯ ಬಹುಪಾಲು ವ್ಯಾಪಾರವನ್ನು ಅವಲಂಬಿಸಿತ್ತು. ಆದ್ದರಿಂದ ವ್ಯಾಪಾರ ಅಭಿವೃದ್ಧಿಗೆ ಎಲ್ಲಾ ತರಹದ ಸಹಕಾರ ಹಾಗೂ ರಕ್ಷಣೆಯನ್ನು ನೀಡಲಾಯಿತು. ದೂರ ಪ್ರದೇಶಗಳಾದ ಗ್ರೀಕ್, ಚೈನಾ, ಈಜಿಪ್ಟ್, ಮಧ್ಯ ಏಷಿಯಾ ಮುಂತಾದ ದೇಶಗಳೊಂದಿಗೂ ವ್ಯಾಪಾರ ನಡೆಸಲಾಗುತ್ತಿತ್ತು. ಜೊತೆಗೆ ಸ್ಥಳೀಯ ವ್ಯಾಪಾರವೂ ಅಭಿವೃದ್ಧಿಯಾಯಿತು. ಭಾರತದ ನಾಲ್ಕು ದಿಕ್ಕುಗಳಲ್ಲಿಯೂ ವಿದೇಶಿ ಮತ್ತು ಸ್ವದೇಶಿ ವ್ಯಾಪಾರ ನಡೆದದ್ದಕ್ಕೆ ಹಲವಾರು ಆಧಾರಗಳು ಸಿಕ್ಕಿವೆ. ಆಳುವ ವರ್ಗಗಳು

ಬಳಸುವ ವಸ್ತುಗಳಲ್ಲದೇ ಸಾಮಾನ್ಯ ಜನರು ಬಳಸುವ ವಸ್ತುಗಳನ್ನೂ ಸಹ ವ್ಯಾಪಾರ ಮಾಡಲಾಯಿತು. ಲಕ್ಷಾಂತರ ಜನರು ವಾಸಿಸುವ ಪಟ್ಟಣಗಳು ಹುಟ್ಟಿದವು.

ಮೇಲೆ ಹೇಳಿರುವ ಘಟನೆಗಳೆಲ್ಲವೂ ಭಾರತ ಉಪಖಂಡದ ಸಣ್ಣ ಭೂ ಪ್ರದೇಶದಲ್ಲಿ ಮಾತ್ರ ನಡೆದಿದ್ದವು. ಶೂದ್ರ ಸಮಾಜಗಳಾದ ಮೌರ್ಯ ಗುಪ್ತ ಮತ್ತು ಶಾತವಾಹನ ಆಳ್ವಿಕೆಯ ಹೊರಗೆ ಬಹುಪಾಲು ಬುಡಕಟ್ಟುಗಳು ಬದುಕುತ್ತಿದ್ದವು. ಅವುಗಳನ್ನು ಇನ್ನೂ ವರ್ಣ ಸಮಾಜ ದೊಳಗೆ ತಂದಿರಲಿಲ್ಲ. ಆ ಕಾಲದಲ್ಲಿ ಭಾರತ ಉಪಖಂಡದ ಜನಸಂಖ್ಯೆಯಲ್ಲಿ ವರ್ಣ ಸಮಾಜದ ಒಳಗೆ ಬರದೆ ಇದ್ದು ಸ್ವತಂತ್ರವಾಗಿದ್ದ ಬುಡಕಟ್ಟು ಜನರ ಸಂಖ್ಯೆಯೇ ಹೆಚ್ಚಾಗಿತ್ತು.

ಉತ್ಪಾದನಾ ಶಕ್ತಿಯ ಬೆಳವಣಿಗೆ ಒಂದು ನಿರ್ದಿಷ್ಟ ಹಂತಕ್ಕೆ ಬಂದ ನಂತರ ವ್ಯಾಪಾರ ಅಭಿವೃದ್ಧಿಗೊಳ್ಳಲು ಸಾಧ್ಯವಾಗದೇ ನಿಂತು ಹೋಯಿತು. ಇದರಿಂದಾಗಿ ದೊಡ್ಡದಾಗಿ ಬೆಳೆದಿದ್ದ ಕೇಂದ್ರೀಕೃತ ಪ್ರಭುತ್ವ ಯಂತ್ರಾಂಗವನ್ನು, ಉಳಿಸಿಕೊಳ್ಳಲು ಜನರಿಂದ ಹೆಚ್ಚು ತೆರಿಗೆ ಸಂಗ್ರಹಿಸ ಲಾಯಿತು. ಹಲವಾರು ಪ್ರದೇಶಗಳಲ್ಲಿ ಸ್ವತಂತ್ರ ರೈತರಾದ ವೈಶ್ಯರು ತೆರಿಗೆ ಹೊರೆ ತಾಳದೇ ಭೂಮಿ ಬಿಟ್ಟು ಬೇರೆ ಸ್ಥಳಗಳಿಗೆ ವಲಸೆ ಹೋದರು. ಆದ್ದರಿಂದ ಈ ಭೂಮಿಯಲ್ಲಿ ಕೆಲಸ ಮಾಡಿದ ಗುಲಾಮರು ಹಾಗೂ ಶೂದ್ರರು, ಕೂಲಿಗಳಾಗಿದ್ದ ಶೂದ್ರರು ತೊಂದರೆಗೆ ಒಳಗಾದರು. ವ್ಯಾಪಾರದ ಬೆಳವಣಿಗೆ ನಿಂತು ಹೋಗಿ ತೆರಿಗೆ ಹೊರೆ ಹೆಚ್ಚಿದ್ದರಿಂದ ಕರಕುಶಲ ಗಾರರ ಮೇಲೂ ಅದು ಪರಿಣಾಮ ಬೀರಿತು. ಪ್ರಭುತ್ವದ ಆದಾಯ ಕಡಿಮೆ ಆದ ಕಾರಣ ರಾಜರು, ದಂಡ ನಾಯಕರು, ಮಂತ್ರಿಗಳು, ರಾಜಗುರು ಮುಂತಾದವರ ಆದಾಯ ಸಹ ಕಡಿಮೆ ಯಾಯಿತು. ಅದೂ ಅಲ್ಲದೆ ಖಜಾನೆಗೆ ಬರುವ ಸಂಪನ್ಮೂಲವೂ ಕಡಿಮೆಯಾದ್ದರಿಂದ ಗುಲಾಮರನ್ನು ಹಿಡಿಯುವ ಯುದ್ಧಗಳು ಹೆಚ್ಚು ಕಡಿಮೆ ನಿಂತು ಹೋದವು. ಇದರ ಜೊತೆಗೆ ಗ್ರೀಕರು ಶಾಕರು, ಕುಶಾಣರು ಮುಂತಾದವರು ದಂಡೆತ್ತಿ ಬಂದಿದ್ದರಿಂದ ಇಲ್ಲಿಯ ಸ್ಥಿತಿ ಮತ್ತಷ್ಟು ಹದಗೆಟ್ಟಿತು. ಅವರುಗಳು ಸಾಮಾನ್ಯವಾಗಿ ವರ್ಣಾಶ್ರಮ ಅಥವಾ ಬ್ರಾಹ್ಮಣ ಸಮಾಜ ವ್ಯವಸ್ಥೆಯನ್ನು ಒಪ್ಪಿಕೊಳ್ಳಲಿಲ್ಲ. ಅನೇಕ ಶತಮಾನಗಳಿಂದ ಈ ವರ್ಣಾಶ್ರಮದ ಕ್ರೂರ ದಮನಕ್ಕೆ ಒಳಗಾದ ಶೂದ್ರರು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸಶಸ್ತ್ರ ಹೋರಾಟಕ್ಕಿಳಿದರು. ರೋಮ್, ಗ್ರೀಕ್ ಗುಲಾಮರ ಬಂಡಾಯಗಳ ಹಾಗೆ ಇಲ್ಲಿ ಸಹ ಶೂದ್ರರ ಅನೇಕ ಹೋರಾಟಗಳು ನಡೆದವು. ಶೂದ್ರರು ವೈಶ್ಯರು ತಮ್ಮ ವರ್ಣದ ಕರ್ತವ್ಯವನ್ನು ಈಡೇರಿಸಲು ಧಿಕ್ಕರಿಸಿ ದಂಗೆ ಎದ್ದರು. ಬಿಕ್ಕಟ್ಟುಗಳು, ದಂಗೆಗಳು, ಹೋರಾಟಗಳು ಹೆಚ್ಚಾಗಿ ಬ್ರಾಹ್ಮಣರ ಹಿಡಿತ ತಪ್ಪಿ ವರ್ಣಾಶ್ರಮದ ವ್ಯವಸ್ಥೆ ಬುಡ ಮೇಲಾಗುವ ಸ್ಥಿತಿ ಉಂಟಾಯಿತು. ಈ ಹಂತದಲ್ಲಿ ಬ್ರಾಹ್ಮಣರು ಅವರ ಪ್ರತಿನಿಧಿಯಾದ ಮನು ಈಗ ಕಲಿಯುಗ ಬಂದಿದೆ, ಧರ್ಮಕ್ಕೆ ವಿನಾಶಕಾರಿ ಸಮಯ ಬಂದಿದೆ ಎಂದು ಕೂಗಾಡಹತ್ತಿದರು. ಈ ಸಮಾಜ ವ್ಯವಸ್ಥೆಯನ್ನು ಏನಾದರೂ ಮಾಡಿ ಉಳಿಸಿಕೊಳ್ಳುವ ಸಲುವಾಗಿ ಬ್ರಾಹ್ಮಣರು ತೀವ್ರ ಪ್ರಯತ್ನ ಮಾಡಿದರು. ಮಿಲೇಚರು ಮತ್ತು ವ್ರಾಲರುಗಳನ್ನು ವಿರೋಧಿಸಿ ಬ್ರಾಹ್ಮಣರು ಆಯುಧ ಹಿಡಿದು ಹೋರಾಟ ಮಾಡಿ ತಮ್ಮ ಸ್ಥಾನವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದರು. ಮನು ಧರ್ಮದಲ್ಲಿ ಶೂದ್ರರಿಗೆ ಕೊಡುವ ಶಿಕ್ಷೆ ಕ್ರೂರವಾಗಿ ಕಾರಣ ಬ್ರಾಹ್ಮಣ ಮತ್ತು ಶೂದ್ರರ ನಡುವೆ ವೈರುಧ್ಯ ತೀವ್ರಗೊಂಡಿದ್ದುದೇ ಆಗಿತ್ತು. ಉತ್ತರ ಭಾಗದ ಗುಪ್ತರ ಕಾಲದಲ್ಲಿ ಕ್ರಿ.ಪೂ. ಎರಡನೆಯ ಶತಮಾನದಿಂದ ಕ್ರಿ.ಶ. ಮೂರನೆ ಶತಮಾನದವರೆಗೂ ಬಿಕ್ಕಟ್ಟು ಗೊಂದಲಗಳ ಪರಿಸ್ಥಿತಿ ಮುಂದುವರಿದೇ ಇತ್ತು. ಆದರೆ ದಕ್ಷಿಣ ಭಾರತದಲ್ಲಿ ಶಾತವಾಹನ ಆಳ್ವಿಕೆಯ ನಂತರ ಒಮ್ಮೆಲೆ ಕ್ರಾಂತಿಕಾರಿ ರೀತಿಯಲ್ಲಿ ಬದಲಾವಣೆಗಳುಂಟಾದವು. ಒಟ್ಟಾರೆ ಉತ್ಪಾದನಾ ಶಕ್ತಿಗಳ ಬೆಳವಣಿಗೆಯಲ್ಲಿ ಸ್ಥಗಿತತೆ, ವ್ಯಾಪಾರದ ಕುಸಿತ ಮತ್ತು ವರ್ಣಾಶ್ರಮ ವ್ಯವಸ್ಥೆಯನ್ನು ವಿಸ್ತರಿಸಲು ಸಾಧ್ಯವಾಗದೇ ಇರುವ ಪರಿಸ್ಥಿತಿ, ಪ್ರಭುತ್ವಕ್ಕೆ ಆದಾಯ ಕಡಿಮೆ ಆದ ಕಾರಣದಿಂದ ಪ್ರಭುತ್ವ ಯಂತ್ರಾಂಗವನ್ನು ರಕ್ಷಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾಯಿತು. ಇವೆಲ್ಲದಕ್ಕಿಂತ ಮುಖ್ಯವಾಗಿ ಶೂದ್ರರ ದಂಗೆಗಳು ಇವೆಲ್ಲಾ ಒಂದಾಗಿ ವರ್ಣಾಶ್ರಮ ಸಮಾಜ ವ್ಯವಸ್ಥೆ ಒಡೆದು ಒಂದು ಹೊಸ ಸಮಾಜ ವ್ಯವಸ್ಥೆಯ ನಿರ್ಮಾಣಕ್ಕೆ ಅಗ್ಯವಾದ ಪೂರಕ ವಾತಾವರಣ ನಿರ್ಮಾಣವಾಯಿತು.

## ಆ. ಜಾತಿ ಆಧಾರಿತ ಊಳಿಗಮಾನ್ಯತೆಯ ಉಗಮ

ಊಳಿಗಮಾನ್ಯ ಸಮಾಜವೆಂಬುದು ಪ್ರಭುತ್ವ ಹಾಗೂ ಭೂಮಿಯಲ್ಲಿ ದುಡಿಯುವ ರೈತರ ನಡುವೆ ಆಳುವ ವರ್ಗವಾಗಿ ಭೂಮಾಲೀಕರು ಸೃಷ್ಟಿಯಾಗಿರುವುದನ್ನು ಸೂಚಿಸುತ್ತದೆ. ಭಾರತದಲ್ಲಿ ಮೊದಲು ಬ್ರಾಹ್ಮರಿಗೂ, ನಂತರದಲ್ಲಿ ಸೇನಾ ನಾಯಕರುಗಳಿಗೂ ಇನಾಂ ಭೂಮಿ ಕೊಡಲ್ಪಟ್ಟಿದ್ದರಿಂದ ಭೂಮಾಲೀಕ ವರ್ಗ ಸೃಷ್ಟಿಯಾಯಿತು. ಅದನ್ನಾಧರಿಸಿಯೇ ಊಳಿಮಾನ್ಯ ಸಮಾಜ ಕೂಡ ಸೃಷ್ಟಿಯಾಯಿತು. ಇದು ಉತ್ತರದಲ್ಲಿ ಗಂಗಾ ಬಯಲಿನ ಗುಪ್ತರ ಆಡಳಿತದ ಕಾಲವಾದ ಕ್ರಿ.ಶ. 5 ನೆ ಶತಮಾನದಲ್ಲೂ, ದಕ್ಷಿಣ ಭಾರತದ ಕರ್ನಾಟಕದಲ್ಲಿ ಕದಂಬರು ಗಂಗರ ಆಡಳಿತದ ಕಾಲವಾದ ಕ್ರಿ.ಶ. 4 ನೆ ಶತಮಾನದಲ್ಲೂ ಉಗಮವಾಯಿತು.

ಆದರೆ ಈ ಸಾಮಾಜಿಕ ಬದಲಾವಣೆ ಅಂದರೆ- ಊಳಿಗಮಾನ್ಯ ಸಮಾಜದ ಉಗಮ- ರೋಮ್‌ನಲ್ಲಾದಂತೆ ಗುಲಾಮರು ಒಂದುಗೂಡಿ ನಡೆಸಿದ ಕ್ರಾಂತಿಕಾರಿ ಹೋರಾಟದ ಮೂಲಕ ನಡೆಯಲಿಲ್ಲ. ಬದಲಿಗೆ ಇದು ಹಳೆಯ ವರ್ಣಾಶ್ರಮ ಸಮಾಜ ಎದುರಿಸಿದ ತೀವ್ರ ಬಿಕ್ಕಟ್ಟಿನಿಂದಾಗಿ ಹಾಗೂ ಆಳುವ ವರ್ಗಗಳು ತಮ್ಮ ಪ್ರಭುತ್ವ ರಚನೆಯನ್ನು ಬದಲಾಯಿಸಲೇಬೇಕಾದ ನಿರ್ಬಂಧಕ್ಕೆ ಒಳಗಾಗಿ ಭೂಮಿಯನ್ನು ಮಾನ್ಯವಾಗಿ ಕೊಡುವ ಮೂಲಕ ಹೊಸ ಬಗೆಯ ಸಾಮಾಜಿಕ ವ್ಯವಸ್ಥೆಯನ್ನು, ಪ್ರಭುತ್ವ ರಚನೆಯನ್ನು ರೂಪಿಸಿ ಮೇಲಿನಿಂದ ತಂದ ಸಾಮಾಜಿಕ ಬದಲಾವಣೆಯಾಗಿತ್ತು. ಶೂದ್ರರು ಹಲವಾರು ಸಶಸ್ತ್ರ ದಂಗೆಗಳನ್ನು ನಡೆಸಿದರಾದರೂ ಅವು ಒಂದು ನಾಯಕತ್ವದಡಿ ಸಂಯೋಜಿಸಲ್ಪಡದೆ ಬಿಡಿಬಿಡಿಯಾಗಿ ನಡೆದುದರಿಂದ ಸಾಮಾಜಿಕ ಕ್ರಾಂತಿಯನ್ನು ಸಾಧಿಸುವ ಮಟ್ಟಕ್ಕೆ ಬೆಳವಣಿಗೆ ಹೊಂದಲಿಲ್ಲ. ಈ ಬದಲಾವಣೆ ಗುಪ್ತರ ಆಡಳಿತದ ಕಾಲವಾದ ಕ್ರಿ.ಶ. 3 ನೆ ಶತಮಾನದಿಂದ ಕ್ರಿ.ಶ. 6 ನೆ ಶತಮಾನದವರೆಗಿನ ಸುದೀರ್ಘ ಸಮಯದವರೆಗೂ ನಡೆಯಿತು. ಗುಪ್ತರ ಕಾಲದಲ್ಲಿ ನಡೆದಂತೆ ಅಲ್ಲದೆ ದಕ್ಷಿಣದಲ್ಲಿ ಶಾತವಾಹನರ ಕಾಲದಲ್ಲಿ ಈ ಬದಲಾವಣೆ ವೇಗವಾಗಿ ನಡೆಯಿತು. ಇದಕ್ಕೆ ಇಲ್ಲಿ ನಡೆದ ಶೂದ್ರರ ದಂಗೆಗಳು ಕಾರಣವಾಗಿದ್ದವು. ಭೂಮಿಯನ್ನು ಮಾನ್ಯವಾಗಿ ಕೊಟ್ಟಿದ್ದರಿಂದ ಅದು ನೂರೆಂಟು ಹಳ್ಳಿಗಳ ಉಗಮಕ್ಕೆ ದಾರಿ ಮಾಡಿಕೊಟ್ಟಿತು. ವ್ಯಾಪಾರ ಇಳಿಮುಖ ಹೊಂದಿದ್ದರಿಂದ, ಅದನ್ನಾಧರಿಸಿದ ಕುಶಲಕರ್ಮಿಗಳು, ವ್ಯಾಪಾರಿಗಳು ಬೇರೆ ಬೇರೆ ಪ್ರದೇಶಗಳಿಗೆ ಸ್ಥಳಾಂತರಿಸ ಲ್ಪಟ್ಟರು.

ಹೀಗೆ ಸ್ಥಳಾಂತರಗೊಂಡವರನ್ನು ಹೊಸದಾಗಿ ಉಗಮವಾಗಿದ್ದ ಹಳ್ಳಿಗಳು ತಮ್ಮವರನ್ನಾಗಿಸಿಕೊಂಡವು. ಪಟ್ಟಣಗಳು ಇಳಿಮುಖ ಹೊಂದಿ ಹಳ್ಳಿಗಳು ಮೇಲುಗೈ ಸಾಧಿಸಿದವು. ಮಾರ್ಕ್ಸ್ ಮತ್ತು ಎಂಗೆಲ್ಸರು ಹೇಳಿದ ಹಾಗೆ ಪ್ರಾಚೀನ ನಾಗರೀಕತೆ ಎನ್ನುವುದು ಪಟ್ಟಣ, ಸಣ್ಣ ಭೂಪ್ರದೇಶದಿಂದ ಪ್ರಾರಂಭವಾದರೆ ಮಧ್ಯಕಾಲೀನ ಅವಧಿ ಹಳ್ಳಿಗಳಿಂದ ಪ್ರಾರಂಭವಾಯಿತು. ನಗರಗಳ ಬದಲಿಗೆ ಹಳ್ಳಿಗಳಲ್ಲಿ ಆಳುವ ವರ್ಗ ಕೇಂದ್ರೀಕೃತಗೊಂಡಿತು. ಇದರೊಂದಿಗೆ ಹಳ್ಳಿಯ ಸುತ್ತ ಕೋಟೆಗಳು ಹಾಗೂ ಮಠಗಳು ಸ್ಥಾಪನೆಯಾದವು. ಇಲ್ಲಿಯ ಬಹುಪಾಲು ಭೂಮಿಯನ್ನು ಭೂದಾನದ ಹೆಸರಿನಲ್ಲಿ ಬ್ರಹ್ಮೋದಯ ಭೂಮಿಯಾಗಿ ಬ್ರಾಹ್ಮಣರಿಗೆ ಅಥವ ದೇವಸ್ಥಾನಗಳಿಗೆ ನೀಡಲಾಯಿತು. ನಗರಗಳು ಇಳಿಮುಖ ಹೊಂದಿ ಹಳ್ಳಿಗಳ ಉಗಮವು ಇಡೀ ಉಪಖಂಡದಲ್ಲಿ ನಡೆದ ಪ್ರಕ್ರಿಯೆಯಾದ್ದರಿಂದ ಬ್ರಾಹ್ಮಣರು ಭಾರತದಾದ್ಯಂತ ಹರಡಿದರು. ಅದರಲ್ಲೂ ಉತ್ತರದ ಗಂಗಾ ಪ್ರಸ್ಥಭೂಮಿಯಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದ ಬ್ರಾಹ್ಮಣರು ದಕ್ಷಿಣಕ್ಕೆ ಸ್ಥಳಾಂತರ ಗೊಂಡರು.

ಊಳಿಗಮಾನ್ಯ ಸಮಾಜವೆನ್ನುವುದು ಭೂಮಿಯನ್ನು ಪ್ರಧಾನ ಉತ್ಪಾದಾನ ಸಾಧನವನ್ನಾ ಗಿಸಿಕೊಂಡು, ಕೃಷಿಯನ್ನಾದರಿಸಿದ ಸಮಾಜ. ಊಳಿಗಮಾನ್ಯ ಸಮಾಜದಲ್ಲಿ ಈ ಕೆಳಗಿನ 5 ಮುಖ್ಯ ಗುಣಲಕ್ಷಣಗಳನ್ನು ನಾವು ಗುರುತಿಸಬಹುದು.1. ಬಲವಂತದ ಶ್ರಮ 2. ಆರ್ಥಿಕೇತರ ವಾಗಿ ಬಲವಂತದಿಂದ ಹೆಚ್ಚುವರಿಯನ್ನು ಪಡೆಯುವುದು 3. ಸ್ಥಳೀಯಗೊಳಿಸ ಲ್ಪಟ್ಟ ಆರ್ಥಿಕ ರಾಜಕೀಯ ಅಧಿಕಾರ. 4. ಸ್ವಯಂ ಪರಿಪೂರ್ಣ ಗ್ರಾಮೀಣ ಆರ್ಥಿಕತೆ ಅಥವಾ ಜೀವನಾಧಾರ ಆರ್ಥಿಕತೆ 5. ಸರಳ ಪುನರುತ್ಪಾದನೆ

ಪ್ರತಿಯೊಂದು ದೇಶದ ಸಾಮಾಜಿಕ ವ್ಯವಸ್ಥೆಯು ಸಾಮಾನ್ಯ ಅಂಶಗಳೊಂದಿಗೆ ತನ್ನದೇ ಆದ ವಿಶಿಷ್ಟ ಅಂಶಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯ ಹಾಗೂ ವಿಶಿಷ್ಟ ಅಂಶಗಳೆ ರಡನ್ನೂ ತಿಳಿಯದಿದ್ದಲ್ಲಿ ನಾವು ಒಂದು ದೇಶದ ಇತಿಹಾಸವನ್ನಾಗಲೀ ಅಥವಾ ಅದರ ಸಾಮಾಜಿಕ ಬೆಳವಣಿಗೆಯನ್ನಾಗಲೀ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಅಂದರೆ ಭಾರತದ ಊಳಿಗಮಾನ್ಯ ವ್ಯವಸ್ಥೆಯ ವಿಶಿಷ್ಟ ಲಕ್ಷಣ ಜಾತಿ ಪದ್ಧತಿ. ಭಾರತದ ಭೂಮಾಲೀಕ ಸಮಾಜ, ಜಾತಿಯನ್ನಾಧರಿಸಿದ ಶ್ರಮ ವಿಭಜನೆ ಹಾಗೂ ಶ್ರೇಣೀಕರಣವನ್ನು ಒಳಗೊಂಡಿದೆ. ಕ್ರಿ.ಶ. 4 ನೆ ಶತಮಾನದ ನಂತರದಲ್ಲಿ ಉಗಮಗೊಡ ಭಾರತದ ಊಳಿಗಮಾನ್ಯ ಸಮಾಜ ವನ್ನು ಜಾತಿ ಆಧಾರಿತ ಊಳಿಗಮಾನ್ಯ ಸಮಾಜವೆಂದು ಕರೆಯಬಹುದು.

ಸ್ವಯಂ ಪರಿಪೂರ್ಣ ಆರ್ಥಿಕ ವ್ಯವಸ್ಥೆ, ಭಾರತದ ಊಳಿಗಮಾನ್ಯ ಸಮಾಜದ ವಿಶೇಷ ಅಂಶವೆನ್ನುವ ಅಭಿಪ್ರಾಯವಿದೆ. ಇದು ಅರ್ಧ ಸತ್ಯ. ಏಕೆಂದರೆ ಜಾತಿ ವ್ಯವಸ್ಥೆ ಇಲ್ಲದೆ ಸ್ವಯಂ ಪರಿಪೂರ್ಣ ಆರ್ಥಿಕತೆ ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ. ಸಾಮಾನ್ಯವಾಗಿ ಯಾವುದೇ ಊಳಿಗಮಾನ್ಯ ಸಮಾಜದಲ್ಲಿ ಸರಕು ಉತ್ಪಾದನೆ ತೀರ ಕೆಳಮಟ್ಟದಲ್ಲಿದ್ದು, ಗ್ರಾಮೀಣ ಮಟ್ಟದ ಅಗತ್ಯವನ್ನಷ್ಟೇ ಪೂರೈಸುವಂತಿರುತ್ತದೆ. ಅವುಗಳನ್ನು ಹೊರಗೆ ತಂದು ಮಾರುವುದು ತೀರಾ ಕಡಿಮೆಯಿರುತ್ತದೆ. ಉತ್ಪಾದಿಸುವ ಹೆಚ್ಚುವರಿಯನ್ನು ಅಲ್ಲಿಯ ಆಳುವ ವರ್ಗಗಳೇ ಕಬಳಿಸಿಬಿಡುತ್ತಾರೆ. ಹೀಗಾಗಿ ಆರ್ಥಿಕತೆ ಹಳ್ಳಿಯ ಚೌಕಟ್ಟಿನೊಳಗೇ ಸೀಮೀತಗೊಳಿಸಲ್ಪಡುತ್ತದೆ. ಜೀವನಾಧಾರ ಆರ್ಥಿಕತೆ ಕೂಡ ಒಂದು ರೀತಿಯಲ್ಲಿ ಸ್ವಯಂ ಪರಿಪೂರ್ಣ ಆರ್ಥಿಕತೆಯಾಗಿರುತ್ತದೆ. ಹೀಗಾಗಿ ಶ್ರಮ ವಿಭಜನೆ ಹಾಗೂ ಸಾಮಾಜದ ಶ್ರೇಣೀಕೃತ ರಚನೆಯಿಲ್ಲದೆ ಸ್ವಯಂ ಪರಿಪೂರ್ಣ ಆರ್ಥಿಕತೆ ತನ್ನ ವಿಶಿಷ್ಟ ಲಕ್ಷಣವನ್ನು ಕಳೆದುಕೊಳ್ಳುತ್ತದೆ. ಒಟ್ಟಿನಲ್ಲಿ ಭಾರತದ ಊಳಿಗಮಾನ್ಯತೆಯ ವಿಶಿಷ್ಟ ಅಂಶ ಜಾತಿ ವ್ಯವಸ್ಥೆಯೇ ಆಗಿದೆ.

ಶೂದ್ರ ಒಡೆತನ ಸಮಾಜ ಕುಸಿದು ಬಿದ್ದು, ಜಾತಿ ಆಧಾರಿತ ಸ್ವಯಂ ಪರಿಪೂರ್ಣ ಆರ್ಥಿಕ ವ್ಯವಸ್ಥೆಯ ಉಗಮದೊಂದಿಗೆ ಹೊಸ ವರ್ಗಗಳ ಹುಟ್ಟು ಹಾಗೂ ಅವುಗಳ ನಡುವಿನ ಸಂಬಂಧಗಳಲ್ಲೂ ಬದಲಾವಣೆಗಳುಂಟಾದವು. ಕೇಂದ್ರೀಕೃತ ಪ್ರಭುತ್ವ ಹೋಗಿ ವಿಕೇಂದ್ರೀಕರಣ ಪ್ರಾರಂಭವಾಯಿತು. ಭೂದಾನವನ್ನು ಪಡೆದು ಹಳ್ಳಿಗಳಲ್ಲಿ ನೆಲೆಸಲ್ಪಟ್ಟ ಆಳುವ ವರ್ಗಗಳ ಕೈಗೆ ರಾಜಕೀಯ ಆರ್ಥಿಕ ಅಧಿಕಾರವನ್ನು ನೀಡಲಾಯಿತು. ಪ್ರಭುತ್ವಕ್ಕೆ ಸೇವೆ ಸಲ್ಲಿಸಿದವರಿಗೆ, ಬ್ರಾಹ್ಮಣರಿಗೆ ಭೂದಾನ ನೀಡಲ್ಪಟ್ಟು ಅವರೇ ಭೂಮಾಲೀಕ ವರ್ಗವಾದರು. ಅವರಿಗೆ ಎಲ್ಲಾ ರೀತಿಯ ತೆರಿಗೆಗಳಿಂದಲೂ ವಿನಾಯಿತಿ ನೀಡಲಾಯಿತು. ಬ್ರಾಹಣರಿಗೇ ಹೆಚ್ಚು ಭೂಮಿ ನೀಡಿದ್ದರಿಂದ ಅವರೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಅಧಿಪತ್ಯ ನಡೆಸುವಂತಾದರು.

ಊಳಿಗಮಾನ್ಯ ಸಮಾಜದಲ್ಲಿ ಸ್ವಲ್ಪಮಟ್ಟಿಗೆ ಶೂದ್ರರ ಬದುಕು ಸುಧಾರಿಸಿತು. ಗುಲಾಮಗಿರಿ ತೊಲಗಿ ಶೂದ್ರರು ಗೇಣಿದಾರರಾಗಿಯೋ ಇಲ್ಲ ಜೀತದಾಳುಗಳಾಗಿಯೋ ಭೂಮಿಯಲ್ಲಿ ದುಡಿಯುವಂತಾದರು. ಗೇಣಿದಾರರು ಭೂಮಾಲೀಕರ ಭೂಮಿಯಲ್ಲಿ ದುಡಿಯುತ್ತಿದ್ದರಿಂದ ಅದರ ಉತ್ಪಾದನೆಯಲ್ಲಿನ ಒಂದು ಪಾಲನ್ನು ಪಡೆಯುವಂತಾದರು. ಅವರು ಪ್ರಭುತ್ವಕ್ಕೆ ಒಂದು ಭಾಗದಷ್ಟು ತೆರಿಗೆಯನ್ನು ನೀಡುವಂತಾದರು. ಮತ್ತೆ ಕೆಲವರು ಗುಲಾಮಗಿರಿಯಿಂದ ಹೊರಬಂದರೂ ಹೆಚ್ಚು ಕಡಿಮೆ ಅದೇ ಸ್ಥಿತಿಯಲ್ಲಿರುವ ಜೀತದಾಳುಗಳಾದರು. ಇವರು ಭೂಮಿಯಲ್ಲಿ ದುಡಿದರೂ ಅದರ ಫಲ ಮಾತ್ರ ಸಂಪೂರ್ಣವಾಗಿ ಭೂಮಾಲೀಕರಿಗೆ ಸೇರುತ್ತಿತ್ತು. ಉತ್ಪಾದನೆಯಲ್ಲಿ ಅವರಿಗೆ ಯಾವುದೇ ರೀತಿಯ ಹಕ್ಕುಗಳು ಇರಲಿಲ್ಲ. ಭೂಮಾಲೀಕರ ಕೃಪಕಟಾಕ್ಷದಲ್ಲೇ ಅವರು ತಮ್ಮ ಬದುಕನ್ನು ಸಾಗಿಸಬೇಕಿತ್ತು. ಇವರು ಭೂಮಾಲೀಕರು ಹಾಗೂ ಭೂಮಿಯೊಂದಿಗೆ ಬಿಗಿಯಲ್ಪಟ್ಟು ಯಾವ ಸ್ವಾತಂತ್ರ್ಯವಿಲ್ಲದೇ ಬದುಕಬೇಕಿತ್ತು. ಈ ಎರಡು ಬಗೆಯ ಜನರ (ಗೇಣಿದಾರ ಮತ್ತು ಜೀತಗಾರ) ಶ್ರಮದ ಮೇಲೆಯೇ ಊಳಿಗಮಾನ್ಯತೆ ನಿಂತಿತ್ತು. ಇದೇ ರೀತಿಯಲ್ಲಿ ಕುಶಲಕರ್ಮಿಗಳು, ಸೇವಾ ಜಾತಿಗಳು ಕೂಡ ಭೂಮಾಲೀಕರೊಂದಿಗೆ ಇಲ್ಲವೇ ಮಠಗಳೊಂದಿಗೆ ಬಿಗಿಹಿಡಿಯಲ್ಪಟ್ಟು ಒಂದೇ ಕಡೆ ನೆಲೆಸುವಂತಾದರು. ಗ್ರಾಮಕ್ಕೆ ಅಗತ್ಯವಿರುವ ವಸ್ತುಗಳನ್ನು ಉತ್ಪಾದಿಸುತ್ತಾ ಶ್ರೇಣೀಕೃತ ಸಮಾಜದಲ್ಲಿ ತಮಗೆ ನಿರ್ಧರಿಸಲ್ಪಟ್ಟ ಪ್ರತಿಫಲವನ್ನು ಪಡೆಯುವಂತಾದರು.

ಶೂದ್ರ ಒಡೆಯರ ಸಮಾಜದಲ್ಲಿ ಸ್ವತಂತ್ರ ರೈತರಾಗಿ, ಕರಕುಶಲಗಾರರಾಗಿದ್ದ ವೈಶ್ಯರು ಹೆಚ್ಚು ಕಡಿಮೆ ಶೂದ್ರರಂತೆಯೇ ಬದಲಾದರು. ಅವರು ಕೂಡ ಬಿಗಿಯಲ್ಪಟ್ಟ ಗೇಣಿದಾರ ರಾಗಿ, ಕುಶಲಕರ್ಮಿಗಳಾದರು. ಇವರಲ್ಲಿ ವ್ಯಾಪಾರವನ್ನು ಕಸುಬಾಗಿಸಿಕೊಂಡಿದ್ದ ಒಂದು ಸಣ್ಣ ಮೇಲ್ವರ್ಗದ ಗುಂಪು ಮಾತ್ರ ವೈಶ್ಯರಾಗಿ ಮುಂದುವರೆದರು.

## ಇ. ಜಾತಿ ಪದ್ಧತಿಯ ತಳಹದಿಯಾಗಿ

## ಒಳ ವಿವಾಹ ಪದ್ಧತಿ

ಜಾತಿ ವ್ಯವಸ್ಥೆ ಮುರಿಯದಂತೆ ಗಟ್ಟಿಯಾಗಿ ಉಳಿದಿರಲು ಆಯಾ ಜಾತಿಗಳೊಳಗಿನ ಒಳ ಮದುವೆ ಪದ್ಧತಿಯೇ ಪ್ರಮುಖ ಕಾರಣ. ಒಳ ಮದುವೆಯಿಲ್ಲದ ಜಾತಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಒಳ ಮದುವೆಯನ್ನು ಪಾಲಿಸದಿದ್ದಲ್ಲಿ ಜಾತಿಯ ಬಿಗಿ ಕಡಿಮೆಯಾಗಿ, ಯಾವೊಂದು ಜಾತಿಯೂ ತನ್ನ ಗುರುತನ್ನು ಉಳಿಸಿಕೊಳ್ಳಲಾಗುವುದಿಲ್ಲ ಹಾಗೂ ಬೆರಕೆಯಿಂದಾಗಿ ಎಲ್ಲಾ ಜಾತಿಗಳ ತಳಹದಿ ಕುಸಿದುಬಿಡುತ್ತದೆ. ಜಾತಿ ವ್ಯವಸ್ಥೆ ಪ್ರಾರಂಭಗೊಂಡಂದಿನಿಂದಲೂ ಒಳ ಮದುವೆ ಪದ್ಧತಿಯನ್ನು ಉಲ್ಲಂಘಿಸದೆ ಅದನ್ನೊಂದು ನಿಯಮವನ್ನಾಗಿ ಪಾಲಿಸುತ್ತಿರುವುದರಿಂದಲೇ (ಅದಕ್ಕೆ ಆರ್ಥಿಕ ತಳಹದಿಯೂ ಇರುವುದ ರಿಂದ) ಇಂದಿಗೂ ಜಾತಿ ಹಾಗೆಯೇ ಮುಂದುವರೆಯುತ್ತಿದೆ.

ಮಾನವ ಸಮಾಜ ರೂಪುಗೊಂಡ ಸುಮಾರು ಕಾಲದ ನಂತರ ಇಂತಹವರು ಇಂತಿಂಥವರೊಂದಿಗೆ ವೈವಾಹಿಕ ಸಂಬಂಧವಿಟ್ಟುಕೊಳ್ಳಬಾರದೆಂಬ ಸಾಮಾಜಿಕ ನಿಯಮ ಜಾರಿಗೆ ಬಂತು. ಅದುವರೆಗೆ ಒಂದು ಬುಡಕಟ್ಟಿನಲ್ಲಿನ ಸ್ತ್ರೀ ಪುರುಷರು ಯಾರನ್ನು ಬೇಕಾದರೂ ಮದುವೆಯಾಗುತ್ತಿದ್ದರು. ಅಂದರೆ ಮಾನವ ಸಮಾಜ ಉಗಮಗೊಂಡಂದಿ ನಿಂದಲೇ ಒಂದು ಗುಂಪಿನೊಳಗೆ ಮದುವೆಯಾಗುವ ಪದ್ಧತಿ ಪ್ರಾರಂಭಗೊಂಡಿತು. ಆದರೆ ಇದು ನೈಸರ್ಗಿಕವಾಗಿ, ಸಹಜವಾಗಿ ನಡೆಯುತ್ತಿತ್ತು. ಸಾಮಾನ್ಯವಾಗಿ ಮಾನವ ಸಮಾಜದ ಬೆಳವಣಿಗೆಯನ್ನು ಮೂರು ಹಂತಗಳಾಗಿ ವಿಂಗಡಿಸಬಹುದು. 1. ಕಿರಾತ ಅವಸ್ಥೆ 2. ಅನಾಗರೀಕ ಅವಸ್ಥೆ 3. ನಾಗರೀಕ ಅವಸ್ಥೆ. ಮೊದಲ ಕಟ್ಟುಪಾಡು, ಒಂದು ತಲೆಮಾರಿಗೆ ಸೇರಿದವರು ಮತ್ತೊಂದು ತಲೆಮಾರಿಗೆ ಸೇರಿದವರೊಂದಿಗೆ ಅಂದರೆ ತಂದೆ ತಾಯಿ ಮತ್ತು ಮಕ್ಕಳ ನಡುವೆ ಲೈಂಗಿಕ ಸಂಬಂಧವಿರಬಾರದೆನ್ನುವುದಾಗಿತ್ತು. ಆದರೆ ಸಹೋದರ ಸಹೋದರಿಯರನ್ನೂ ಒಳಗೊಂಡಂತೆ ಒಂದೇ ತಲೆಮಾರಿನ ಎಲ್ಲಾ ಗಂಡು ಹೆಣ್ಣುಗಳು ಪರಸ್ಪರ ಲೈಂಗಿಕ ಸಂಪರ್ಕವನ್ನು ಹೊಂದಿದ್ದರು. ಇದನ್ನು ರಕ್ತ ಸಂಬಂಧದ ಕುಟುಂಬವೆಂದು ಕರೆಯಲಾಗುತ್ತದೆ. ನಂತರದಲ್ಲಿ ಸೋದರ ಸೋದರಿಯರ ನಡುವಿನ ಮದುವೆ ಸಂಬಂಧವನ್ನು ತಡೆಯಲಾಯಿತು. ಈ ಹಂತದಲ್ಲಿ ಒಡಹುಟ್ಟಿದವರಷ್ಟೇ ಅಲ್ಲದೆ ಚಿಕ್ಕಮ್ಮ, ದೊಡ್ಡಮ್ಮರ ಮಕ್ಕಳ ನಡುವೆಯೂ ಮದುವೆ ಸಂಬಂಧವನ್ನು ತಡೆಯಲಾಯಿತು. ಇದನ್ನು ಪುನಲೂವನ್ ಕುಟುಂಬವೆಂದು ಕರೆಯಲಾಗುತ್ತದೆ. ಇದರಲ್ಲಿ ತಂದೆ ಯಾರೆಂಬುದನ್ನು ಪತ್ತೆಹಚ್ಚಲು ಸಾಧ್ಯವಿರದಿದ್ದರಿಂದ ಮಕ್ಕಳನ್ನು ತಾಯಿಯ ಮೂಲಕವೇ ಗುರುತಿಸಲಾಗುತ್ತಿತ್ತು. ಹೀಗಾಗಿ ಇದು ಮಾತೃ ಪ್ರಧಾನ ಸಮಾಜವಾಗಿರುತ್ತದೆ. ಇದರಲ್ಲಿ ಒಬ್ಬ ತಾಯಿಯ ಮೂಲಕ ಒಂದೇ ರಕ್ತ ಸಂಬಂಧವುಳ್ಳ ಎಲ್ಲ ಸೋದರ ಸೋದರಿಯರು ಒಂದೇ ಗುಂಪಿಗೆ ಸೇರಿದವರೆಂದು ಗುರುತಿಸಲಾಯಿತು. ಇದನ್ನು ಗಣ ಎಂದು ಕರೆಯಲಾಯಿತು. ಕನ್ನಡದಲ್ಲಿ ಇದನ್ನು ಬಳ್ಳಿ ಎಂದು ಕರೆಯಲಾಗುವುದು. ಒಂದೆ ಬಳ್ಳಿಯ ಒಳಗೆ ಮದುವೆ ಸಂಬಂಧವನ್ನು ನಿಷೇಧಿಸಿ ಬಳ್ಳಿಯ ಹೊರಗಿನ ವಿವಾಹ ಪದ್ಧತಿಯನ್ನು ಕಟ್ಟುನಿಟ್ಟಿನಿಂದ ಜಾರಿಗೊಳಿಸಲಾಯಿತು. ಬಳ್ಳಿಯ ಹೊರಗೆ ಆದರೆ ಒಂದು ಬುಡಕಟ್ಟಿನೊಳಗಿನ ಒಳ ವಿವಾಹ ಪದ್ಧತಿಯನ್ನು ಜಾರಿಗೊಳಿಸಲಾಯಿತು. ಸಾಮಾನ್ಯವಾಗಿ ಈ ಪದ್ಧತಿ ಕಿರಾತ ಅವಸ್ಥೆಯ ಕೊನೆಯ ಹಂತದಲ್ಲೂ, ಅನಾಗರೀಕ ಅವಸ್ಥೆಯ ಆರಂಭದ ಹಂತದಲ್ಲೂ ರೂಢಿಯಲ್ಲಿತ್ತು. ಇದು ಈ ಹಂತವನ್ನು ದಾಟಿ ಬಂದ ಎಲ್ಲಾ ಸಮಾಜಗಳಿಗೂ ಅನ್ವಯಿಸುತ್ತದೆ. ಹೊರ ವಿವಾಹ ಪದ್ಧತಿಯನ್ನು ಸಾಮಾಜಿಕ ನಿಯಮವನ್ನಾಗಿ ಪಾಲಿಸುತ್ತಿದ್ದ ಬುಡಕಟ್ಟುಗಳು ಇದ್ದುದಕ್ಕೆ ಆಧಾರಗಳಿಲ್ಲ. ಒಂದು ಗುಂಪಿನಲ್ಲಿ ಕಡಿಮೆಯೆಂದರೆ ಎರಡು ಗಣಗಳಿದ್ದವು. ಜನಸಂಖ್ಯೆ ಹೆಚ್ಚಿದಷ್ಟೂ ಗಣಗಳ ಸಂಖ್ಯೆ ಹೆಚ್ಚಿತಲ್ಲದೆ ಈ ಗಣಗಳು ವಿಭಜನೆಯಾಗುತ್ತಾ ಹೊಸ ಬುಡಕಟ್ಟುಗಳು ಸಹ ಹುಟ್ಟಿಕೊಂಡವು. ಹೀಗಾಗಿಯೇ ನಾವು ಒಂದೇ ಗಣಕ್ಕೆ ಸೇರಿದವರು ಕೂಡ ಹಲವಾರು ಬುಡಕಟ್ಟುಗಳಲ್ಲಿ ಇರುವುದನ್ನು ಕಾಣಬಹುದು. ಒಂದೇ ಗಣಕ್ಕೆ ಸೇರಿದವರು ಬೇರೊಂದು ಬುಡಕಟ್ಟಿಗೆ ಸೇರಿ ಮೂಲ ಗಣದೊಂದಿಗಿನ ಸಂಪರ್ಕ ಕಡಿದುಕೊಂಡರು. ಒಂದೆ ಗಣಕ್ಕೆ ಸೇರಿದವರು ಮದುವೆ ಸಂಬಂಧವನ್ನು ಹೊಂದಿರು ವುದಿಲ್ಲ. ಹೀಗಾಗಿ ಹೊರ ಮದುವೆ ಪದ್ಧತಿಯೆನ್ನುವುದು ತಾಯಿಯ ಮೂಲಕ ರಕ್ತ ಸಂಬಂಧವನ್ನು ಆಧಾರವಾಗಿಸಿಕೊಂಡ ಗಣ ಸಮಾಜದಲ್ಲಿನ ಮದುವೆ ಪದ್ಧತಿಯಾಗಿದೆ.

ನಂತರ ಉತ್ಪಾದನಾ ಶಕ್ತಿಯಲ್ಲಿ ಬೆಳವಣಿಗೆಯುಂಟಾಗಿ ಹೆಚ್ಚುವರಿ ಉತ್ಪಾದನೆ ಶುರುವಾದ ಮೇಲೆ ಉತ್ಪಾದನೆಯಲ್ಲಿ ಗಂಡಿನದೇ ಮೇಲುಗೈಯಾಯಿತು. ಹೆಚ್ಚುವರಿ ಉತ್ಪಾದನೆಯಿಂದ ದೊರಕಿದ ವಸ್ತುಗಳು ಗಂಡಿನ ಸ್ವತ್ತಾಗಿ ಬದಲಾದವು. ಗಂಡಿನ ರಕ್ತ ಸಂಬಂಧಿಗಳು ಅಂದರೆ ಗಂಡಿನ ಸಹೋದರಿಯ ಮಕ್ಕಳು ಅವನ ಆಸ್ತಿಯ ವಾರಸು ದಾರರಾದರು. ಇದು ಮಾತೃ ಪ್ರಧಾನ ಸಮಾಜದ ಸಂಬಂಧಗಳನ್ನು ಬದಲಾಯಿಸಿ ಪುರುಷ ಪ್ರಧಾನ ಸಮಾಜದ ಉಗಮಕ್ಕೆ ದಾರಿ ಮಾಡಿಕೊಟ್ಟಿತು. ತಂದೆಯ ಆಸ್ತಿಗೆ ಅವನನ್ನಾಧರಿಸಿ ಅವನ ಮಕ್ಕಳನ್ನೇ ವಾರಸುದಾರರನ್ನಾಗಿ ಗುರುತಿಸಲು ಏಕ ವಿವಾಹ ಪದ್ಧತಿ ಜಾರಿಗೆ ಬಂತು. ವರ್ಗ ಸಮಾಜದ ಉಗಮದೊದಿಗೆ ಈ ಪದ್ಧತಿ ಜಾರಿಗೊಳಿಸಲ್ಪಟ್ಟಿತು. ತಂದೆಯನ್ನಾಧರಿಸಿದ ಕುಟುಂಬಕ್ಕೆ ಆಸ್ತಿಯ ವಾರಸುದಾರಿಕೆಯೇ ತಳಪಾಯವಾಗಿದೆ. ಮಾತೃ ಪ್ರದಾನ ವ್ಯವಸ್ಥೆಯಿಂದ ಪಿತೃ ಪ್ರಧಾನ ವ್ಯವಸ್ಥೆಗೆ ಬದಲಾಗುವ ಪ್ರಕ್ರಿಯೆಯಲ್ಲಿ ಜೋಡಿ ಕುಟುಂಬ ವ್ಯವಸ್ಥೆ ಜಾರಿಗೆ ಬಂತು. ವರ್ಗ ಸಮಾಜದ ಉಗಮದೊಂದಿಗೆ ಈ ಪದ್ಧತಿ ಜಾರಿಗೊಳಿಸಲ್ಪಟ್ಟಿತು. ತಂದೆಯನ್ನಾಧರಿಸಿದ ಏಕ ವಿವಾಹ ಕುಟುಂಬದ ಜಾರಿಯ ನಂತರ ಗಣ ಆಧಾರಿತ ಸಮಾಜ ನಶಿಸಿತು. ಆದರೂ ಒಂದೇ ರಕ್ತ ಸಂಬಂಧಿಗಳ ನಡುವಿನ ಮದುವೆ ಸಂಬಂಧವನ್ನು ತಪ್ಪಿಸಲು ರಕ್ತ ಸಂಬಂಧಿ ವಿವಾಹವನ್ನು ವಿರೋಧಿಸುವ ಸಾಮಾಜಿಕ ನಿಯಮ ಮುಂದುವರೆಯಿತು. ಬುಡಕಟ್ಟು ಸಮಾಜದ ಕುಸಿತದೊಂದಿಗೆ ಹೊರ ಮದುವೆ, ಒಳ ವಿವಾಹ ಪದ್ಧತಿಗಳು ಅರ್ಥ ಕಳೆದುಕೊಂಡವು. ವರ್ಗ ಸಮಾಜದ ಉಗಮದೊಂದಿಗೆ ಏಕ ವಿವಾಹ ಪದ್ಧತಿ ಅಸ್ತಿತ್ವಕ್ಕೆ ಬಂದಿತು. ಇದನ್ನು ಸಾಮಾನ್ಯವಾಗಿ ಪಶ್ಚಿಮ ದೇಶಗಳಾದ ರೋಮ್, ಗ್ರೀಕ್‌ಗಳಲ್ಲಿ ಕಾಣಬಹುದು. ಭಾರತದಲ್ಲಿ ವರ್ಗ ಸಮಾಜದ ಹುಟ್ಟು ಬುಡಕಟ್ಟು ಸಮಾಜದ ಕುಸಿತದಿಂದ ಉಂಟಾದುದಲ್ಲ. ಕೆಲವೆಡೆ ಈ ಬುಡಕಟ್ಟುಗಳು ಕುಸಿದು ವರ್ಗಗಳನ್ನು ಸೃಷ್ಟಿಸಿದರೆ ಮತ್ತೊಂದೆಡೆ ಈ ಗುಂಪುಗಳು ತಾವಿದ್ದ ಸ್ಥಿತಿಯಲ್ಲೇ ವರ್ಗ ಸಮಾಜದೊಳಗೆ ವಿಲೀನಗೊಳಿಸಲ್ಪಟ್ಟವು. ಹೀಗಾಗಿ ಬುಡಕಟ್ಟು ಸಮಾಜದ ಹಲವಾರು ಅಂಶಗಳು ವರ್ಗ ಸಮಾಜದಲ್ಲಿನ ಆಳುವ ವರ್ಗಗಳಿಗೆ ತಕ್ಕಂತೆ

ಮುಂದುವರಿದವು. ಶೂದ್ರರಾಗಿ ಬದಲಾಯಿಸಲ್ಪಟ್ಟ ಬುಡಕಟ್ಟು ಸಮಾಜದ ಪುರುಷ ಪ್ರಧಾನ ಸಮಾಜದ ಏಕ ಮದುವೆ ಕುಟುಂಬ ಪದ್ಧತಿಗೆ ಬದಲಾದುದರಿಂದ ಹಳೆಯ ಗಣ ಆಧಾರಿತ ಸಾಮಾಜಿಕ ಘಟಕ ಮುಂದುವರೆಯದೆ ನಾಶಹೊಂದಿತು. ಆದರೆ ಒಳ ಮದುವೆ ಪದ್ಧತಿಯನ್ನು ಹೊದಿರುವ ಬುಡಕಟ್ಟುಗಳು ವರ್ಗ ಸಮಾಜದಲ್ಲಿ ಜಾತಿಗಳಾದವು. ಶೂದ್ರರಾಗಿಸಲ್ಪಟ್ಟ ಬುಡಕಟ್ಟುಗಳು ಒಳ ಮದುವೆ ಪದ್ಧತಿಯಿಂದ ತಲತಲಾಂತರಕ್ಕೂ ಶೂದ್ರರಾಗಿಯೇ ಮುಂದುವರಿದರು. ಆಳುವ ವರ್ಗಗಳಾದ ಬ್ರಾಹ್ಮಣರು, ಕ್ಷತ್ರಿಯರುಗಳು ತಮ್ಮ ಆಧಿಪತ್ಯವನ್ನು ಸ್ಥಿರಪಡಿಸಿಕೊಳ್ಳಲು ಒಳ ಮದುವೆ ಪದ್ಧತಿಯನ್ನು ಒಂದು ಅಸ್ತ್ರವನ್ನಾಗಿಸಿ ಕೊಂಡರು. ಹೀಗಾಗಿ ಒಳ ಮದುವೆ, ಹೊರ ಮದುವೆಗಳೆರಡೂ ಬುಡಕಟ್ಟು ಸಮಾಜದ ಅಂಶಗಳಾಗಿದ್ದರೂ ವರ್ಗ ಸಮಾಜದಲ್ಲಿ ಒಳ ಮದುವೆ ಶೋಷಣೆಯ ಅಸ್ತ್ರವಾಗಿ ಬಳಸಲ್ಪಟ್ಟು ವರ್ಗಗಳ ಶ್ರೇಣೀಕರಣವನ್ನು ಕಾಪಾಡಿದ್ದರಿಂದ ಆಳುವ ವರ್ಗಗಳು ಅದನ್ನು ರಕ್ಷಿಸಿ ಪೋಷಿಸಿದರು. ಹೊರ ಮದುವೆ ತನ್ನ ಆರ್ಥಿಕ ತಳಪಾಯವನ್ನು ಕಳೆದುಕೊಂಡಿತು. ಆದರೂ ಒಂದೆ ಗಣದೊಳಗೆ (ಗೋತ್ರದೊಳಗೆ) ಮದುವೆ ಆಗುವುದನ್ನು (ಒಳ ಸಂತಾನಾಭಿವೃದ್ಧಿ) ತಪ್ಪಿಸಲು ಹೊರ ಮದುವೆ ಪದ್ಧತಿಯಿನ್ನೂ ಮುಂದುವರಿಯುತ್ತಿದೆ. ಆದರೆ ಒಳ ಮದುವೆಗೆ ಒಂದು ಹೊಸ ಸಾಮಾಜಿಕ ತಳಪಾಯವನ್ನು ಒದಗಿಸಲಾಯಿತು. ಒಳ ವಿವಾಹ ಪದ್ಧತಿ ಮುಂದುವರೆಯುತ್ತಿರುವುದರಿಂದ ಯಾವ ಸಾಮಾಜಿಕ ಪಾತ್ರ ಇಲ್ಲವಾದರೂ ಹೊರ ವಿವಾಹ ಪದ್ಧತಿ ಸಹ ಮುಂದುವರೆಯುತ್ತಿದೆ.

ಹೊರ ಮದುವೆ ಪದ್ಧತಿಯ ಮೇಲೆ ಒಳ ಮದುವೆ ಪದ್ಧತಿಯನ್ನು ಹೇರಿರುವ ಪ್ರತಿಫಲವೇ ಜಾತಿ ಪದ್ಧತಿ ಎಂದು ಅಂಬೇಡ್ಕರರು ಹೇಳಿದ್ದಾರೆ. ಜಾತಿಯ ಆರ್ಥಿಕ ತಳಹದಿಯನ್ನು ನೋಡಲು ವಿಫಲರಾಗಿದ್ದರಿಂದ ಅವರು ಒಳ ಮದುವೆ ಹಾಗೂ ಹೊರ ಮದುವೆಯನ್ನು ಪರಸ್ಪರ ವಿರುದ್ಧ ದಿಕ್ಕಿನಲ್ಲಿರಿಸುವ ತಪ್ಪು ಅಭಿಪ್ರಾಯಕ್ಕೆ ಬಂದರು.

ಬುಡಕಟ್ಟು ಸಮಾಜದಿಂದ ವರ್ಣ (ವರ್ಗ) ಸಮಾಜಕ್ಕೆ ಬದಾಲಾವಣೆಗೊಂಡ ಪರಿವರ್ತನಾ ಕಾಲದಲ್ಲಿ (ಋಗ್ವೇದದ ಕಾಲದಲ್ಲಿ) ವರ್ಣಗಳಲ್ಲಿ ಒಂದಷ್ಟು ಬದಲಾವಣೆ ಗಳು ನಡೆದವೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಆ ಹಂತದಲ್ಲಿ ಒಳ ಮದುವೆ ಪದ್ಧತಿ ಸ್ವಲ್ಪ ಸಡಿಲವಾಗಿತ್ತು. ವರ್ಣಗಳ ನಡುವೆ ಮದುವೆ ಸಂಬಂಧಗಳಿದ್ದವು. ವರ್ಣಾಶ್ರಮ ವ್ಯವಸ್ಥೆಯಲ್ಲಿ ಇವು ಬಿಗಿಯಾದವು. ಒಂದು ವರ್ಣಕ್ಕೆ ಸೇರಿದವರು ಮತ್ತೊಂದು ವರ್ಣದವರೊಂದಿಗೆ ಮದುವೆ ಸಂಬಂಧವನ್ನಿಟ್ಟುಕೊಳ್ಳಲು ನಿರ್ಬಂಧಗಳನ್ನು ಹಾಕಲಾಯಿತು. ಮುಖ್ಯವಾಗಿ ಮೇಲ್ವರ್ಣದ ಹೆಂಗಸರು (ಆಳುವ ವರ್ಗದವರು) ಶೂದ್ರರನ್ನು ಮದುವೆಯಾಗುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ಅದೇ ರೀತಿಯಲ್ಲಿ ಉಚ್ಛ ವರ್ಣದ ಬ್ರಾಹ್ಮಣರು, ಕ್ಷತ್ರಿಯರು ಕೆಳ ವರ್ಣದ ಶೂದ್ರ ಹೆಣ್ಣು ಮಕ್ಕಳೊಂದಿಗೆ ಮದುವೆಯಾಗುವುದನ್ನು ನೀಚತನವೆಂದು ಪರಿಗಣಿಸಲ್ಪಟ್ಟಿತು. ಹೆಚ್ಚೆಂದರೆ ಅವರನ್ನು ದಾಸಿಗಳನ್ನಾಗಿ ಅಥವಾ ಇಟ್ಟುಕೊಂಡವರನ್ನಾಗಿ ಮಾಡಿದರು. ಅದೇ ರೀತಿ ಕೆಳ ವರ್ಣದ ಹೆಣ್ಣಿಗೆ ಹುಟ್ಟುವ ಗಂಡು ಮಗುವನ್ನು ಶೂದ್ರ ವರ್ಣಕ್ಕೆ ಸೇರಿಸಿದರು. ಅದರ ನಂತರ ಊಳಿಗಮಾನ್ಯ ಸಮಾಜದಲ್ಲಿ ಒಂದೆ ವರ್ಣಕ್ಕೆ ಸೇರಿದ ಹಲವಾರು ಜಾತಿಗಳ ಉಗಮದ ನಂತರ ವರ್ಣವನ್ನು ಬಿಟ್ಟು ಮದುವೆಯಾಗುವುದಷ್ಟೇ ಅಲ್ಲದೆ ಒಂದೇ ವರ್ಣದ ಒಳಗಿರುವ ಜಾತಿಗಳ ನಡುವಿನ ಮದುವೆಯನ್ನೂ ನಿಷೇಧಿಸಲಾಯಿತು. ಇದನ್ನು ಮೀರಿ ಮದುವೆಯಾದವರು ಆ ಜಾತಿಯಿಂದ ಬಹಿಷ್ಕೃತಗೊಂಡರು. ಈ ರೀತಿ ಬಹಿಷ್ಕೃತಗೊಂಡವರನ್ನು ಸಮಾಜದ ಅತೀ ಕೆಳಮಟ್ಟದವರಾದ ಅಸ್ಪೃಶ್ಯರೊಂದಿಗೆ ಸೇರಿಸ ಲಾಯತು.

ಆದ್ದರಿಂದ ಆದಿಮ ಸಮಾತಾ ಸಮಾಜದ ಹಂತದಲ್ಲಿ ಸಹಜವಾಗಿ ಜಾರಿಗೆ ಬಂದ ಒಳ ಮದುವೆ ಪದ್ಧತಿಯು ನಂತರದಲ್ಲಿ ತನ್ನ ಗುರುತನ್ನು ಉಳಿಸಿಕೊಳ್ಳುವ ಒಂದು ಸಾಮಾಜಿಕ ನಿಯಮವಾಗಿ ರೂಪುಗೊಂಡು ವರ್ಗ ಸಮಾಜದಲ್ಲಿ, ಊಳಿಗಮಾನ್ಯ ಸಮಾಜ ದಲ್ಲಿ ಬ್ರಾಹ್ಮಣ, ಕ್ಷತ್ರಿಯರಂಥ ಸವರ್ಣೀಯ ಆಳುವ ವರ್ಗಗಳ ಶೋಷಣೆಗೆ ಆಯುಧ ವಾಗಿ, ದಮನಿಸಲ್ಪಟ್ಟ ಶೂದ್ರ, ದಲಿತರ ಐಕ್ಯತೆಗೆ ಭಂಗ ತರುವ ಅಸ್ತ್ರವಾಗಿ ಕಾರ್ಯ ನಿರ್ವಹಿಸಿತು. ಇಂದೂ ಸಹ ನಿರ್ವಹಿಸುತ್ತಿದೆ.

## ಈ. ಜಾತಿ ಆಧಾರಿತ ಶ್ರಮ ವಿಭಜನೆ

ಶೂದ್ರ ಒಡೆತನ ಸಮಾಜ ವ್ಯವಸ್ಥೆ ಪತನಗೊಂಡು ಸ್ವಯಂ ಪರಿಪೂರ್ಣ ಆರ್ಥಿಕ ವ್ಯವಸ್ಥೆ ಉಗಮಗೊಂಡ ನಂತರ ಉತ್ಪಾದನೆ ಮತ್ತು ವಿತರಣೆ ಹಳ್ಳಿಯ ಮಟ್ಟಕ್ಕಷ್ಟೇ ಸೀಮಿತಗೊಂಡಿತು. ಗ್ರಾಮೀಣ ಮಟ್ಟದಲ್ಲಿ ಹಣದ ಪಾತ್ರ ಹೆಚ್ಚುಕಡಿಮೆ ಇಲ್ಲವೇ ಇಲ್ಲ ಎನ್ನುವ ಸ್ಥಿತಿ ಉಂಟಾದ ಮೇಲೆ ಉತ್ಪಾದನೆಯಾದ ವಸ್ತುಗಳ ವಿನಿಮಯಕ್ಕೆ ಒಂದು ಹೊಸ ಪದ್ಧತಿಯ ಅಗತ್ಯ ಉಂಟಾಯಿತು. ಹೀಗಾಗಿ ಸಾಮಾಜಿಕ ಉತ್ಪಾದನೆಗೆ ಬೇಕಾದ ಶ್ರಮ ವಿಭಜನೆ, ಉತ್ಪತ್ತಿಯಾದ ವಸ್ತುಗಳ ವಿತರಣೆ ಮತ್ತು ವಿನಿಮಯ ಮುಂತಾದುವನ್ನು ಒಳಗೊಂಡ ವಿಧಾನವೊಂದು ಬೇಕಾಯಿತು. ಜಾತಿ ಶ್ರೇಣಿಯನ್ನಾಧರಿಸಿ ಶ್ರಮ ವಿಭಜನೆ ನಡೆದು ಅದಕ್ಕೆ ತಕ್ಕಂತೆ ವಿತರಣೆ ಹಾಗೂ ವಿನಿಮಯವನ್ನು ಮಾಡ ಲಾಯಿತು. ಈ ಪದ್ಧತಿಯನ್ನು ಉತ್ತರದಲ್ಲಿ ಜಜಮಾನಿ ಪದ್ಧತಿಯೆಂದು, ಕರ್ನಾಟಕದಲ್ಲಿ ಆಯಾಗಾರ ಪದ್ಧತಿಯೆಂದೂ, ಮಹಾರಾಷ್ಟ್ರದಲ್ಲಿ ಬಲೂತೆದಾರಿ ಪದ್ಧತಿಯೆಂದು ಕರೆಯ ಲಾಯಿತು.

ಪ್ರತಿಯೊಂದು ಜಾತಿಯೂ ತಮ್ಮದೇ ಆದ ಕಸುಬಿನಲ್ಲಿ ತೊಡಗಿದರು. ಉತ್ಪಾದನೆ, ಸೇವೆ ಮುಂತಾದ ಕೆಲಸಗಳಲ್ಲಿ ಬ್ರಾಹ್ಮಣರಿಂದ ಹಿಡಿದು ದಲಿತರವರೆಗಿನ ಪ್ರತಿಯೊಂದು ಜಾತಿಗೂ ನಿರ್ದಿಷ್ಟ ಶ್ರಮ ವಿಭಜನೆಯಾಯಿತು. ಇದನ್ನು ಮೀರಿದವರಿಗೆ ಅದರಲ್ಲೂ ಮುಖ್ಯವಾಗಿ ಶೂದ್ರರು ಹಾಗೂ ಅಸ್ಪೃಶ್ಯರಿಗೆ ಅತಿ ಕಠೋರ ಶಿಕ್ಷೆಯನ್ನು ವಿಧಿಸಲಾಯಿತು. ಶೂದ್ರರು, ಅಸ್ಪೃಶ್ಯರಿಗೆ ಬಿಟ್ಟಿಚಾಕರಿಯನ್ನು ಕಡ್ಡಾಯಗೊಳಿಸಲಾಯಿತು. ಹುಟ್ಟಿನೊಂದಿಗೆ ವ್ಯಕ್ತಿಗಳ ಜಾತಿ ನಿರ್ಣಯಿಸಲ್ಪಟ್ಟು ಸಮಾಜದಲ್ಲಿ ಅವರ ಪಾತ್ರವೇನು, ಅವರಿಗೆ ಸಮಾಜ ದಿಂದ ಏನು ಸಿಗುತ್ತದೆ ಹಾಗೂ ಅವರು ಪಾಲಿಸಬೇಕಾದ ನೀತಿ ನಿಯಮಗಳೇನು ಎನ್ನು ವುದು ತೀರ್ಮಾನಿಸಲ್ಪಟ್ಟಿತು. ಇದು ಸಹಜವಾಗಿ ಜಾತಿ ಶ್ರೇಣಿಯಲ್ಲಿ ಉನ್ನತ ಸ್ಥಾನ ದಲ್ಲಿದ್ದ ಬ್ರಾಹ್ಮಣರಿಗೆ, ಇನ್ನಿತರ ಭೂಮಾಲೀಕರಿಗೆ ಸಾಮಾಜಿಕ ಉತ್ಪಾದನೆಯಲ್ಲಿ ಹೆಚ್ಚಿನ ಪಾಲು ದೊರಕುವಂತೆಯೂ, ಶೂದ್ರ ರೈತರು ಹಾಗೂ ಕುಶಲಕರ್ಮಿಗಳಿಗೆ ಕಡಿಮೆಯೂ, ಅವರಿಗಿಂತ ಕೆಳಮಟ್ಟದಲ್ಲಿದ್ದ ಅಸ್ಪೃಶ್ಯರಿಗೆ ಮತ್ತೂ ಕಡಿಮೆ

ಸಿಗುವಂತೆ ರೂಪಿಸಲಾಯಿತು. ಹೀಗಾಗಿ ಆಯಾಗಾರ ಪದ್ಧತಿಯು ಜಾತಿಯನ್ನಾಧರಿಸಿ ಮಾಡಿದ ಶ್ರಮ ವಿಭಜನೆ, ವಿತರಣೆ, ವಿನಮಯವಷ್ಟೇ ಆಗಿರದೆ ಊಳಿಗಮಾನ್ಯ ಆಳುವ ವರ್ಗಗಳ ಶೋಷಣಾ ವಿಧಾನವೂ ಆಗಿದೆ.

ಒಟ್ಟಾರೆ ಭಾರತದ ಊಳಿಗಮಾನ್ಯ ಸಮಾಜದ ತಳಹದಿಯಾದ ಉತ್ಪಾದನಾ ಪದ್ಧತಿ ಹಾಗೂ ಅದನ್ನಾಧರಿಸಿದ ಕಾನೂನು, ನೀತಿ ನಿಯಮ, ಶಿಕ್ಷಣ, ಸಾಮಾಜಿಕ ಕಟ್ಟುಪಾಡು ಗಳು, ಸಂಸ್ಕೃತಿ ಮುಂತಾದ ಮೇಲ್ರಚನೆಯ ಅಂಶಗಳು ಜಾತಿಯನ್ನಾಧರಿಸಿವೆ. ಆದ್ದ ರಿಂದಲೇ ಜಾತಿ ಪದ್ಧತಿ, ಸಮಾಜದ ಅಡಿಪಾಯ ಹಾಗೂ ಮೇಲ್ರಚನೆಗಳೆರಡರಲ್ಲೂ ಇದೆ.

## ಉ. ಊಳಿಗಮಾನ್ಯ ಸಮಾಜದಲ್ಲಿ ಜಾತಿ ಪದ್ಧತಿ

ಊಳಿಗಮಾನ್ಯ ಸಮಾಜದಲ್ಲಿ ಜಾತಿ ಪದ್ಧತಿ ವ್ಯವಸ್ಥಿತಗೊಂಡು ಅದೊಂದು ಸಾಮಾಜಿಕ ವ್ಯವಸ್ಥೆಯಾಗಿ ರೂಪುಗೊಂಡಿತು. ಪ್ರಭುತ್ವದ ಹಿಡಿತಕ್ಕೆ ಬಂದ ಪ್ರದೇಶಗಳೆಲ್ಲವೂ ಊಳಿಗಮಾನ್ಯ ಉತ್ಪಾದನಾ ವಿಧಾನದ ಕೆಳಗೆ ಹಾಗೂ ಜಾತಿ ಪದ್ಧತಿಯ ಕೆಳಗೆ ತರಲ್ಪಟ್ಟವು. ಭಾರತದ ದಟ್ಟ ಅರಣ್ಯ ಪ್ರದೇಶಗಳನ್ನು ಹೊರತುಪಡಿಸಿ ಇತರ ಎಲ್ಲಾ ಭೂಪ್ರದೇಶಗಳಿಗೆ ಊಳಿಗಮಾನ್ಯತೆ ವಿಸ್ತರಿಸಲ್ಪಟ್ಟಿತು. ಬಹುಪಾಲು ಬುಡಕಟ್ಟುಗಳನ್ನು ಜಾತಿ ವ್ಯವಸ್ಥೆಯೊಳಗೆ ತರಲಾಯಿತು. ಹೀಗೆ ತರಲ್ಪಟ್ಟ ಬುಡಕಟ್ಟಿನ ನಾಯಕರುಗಳು, ಪುರೋಹಿತರುಗಳನ್ನು ಆಳುವ ವರ್ಗದಲ್ಲಿ ವಿಲೀನಗೊಳಿಸಲಾಯಿತು. ಈ ಪ್ರಕ್ರಿಯೆಯನ್ನು ಮನುಸ್ಮೃತಿಯಲ್ಲಿ ವರ್ಣ ಸಂಕರವೆಂದು ಕರೆಯಲಾಯಿತು. ಊಳಿಗಮಾನ್ಯತೆಯ ಅಡಿ ಯಲ್ಲಿ ತರಲ್ಪಟ್ಟ ಬುಡಕಟ್ಟುಗಳ ಪ್ರದೇಶಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಡಲ್ಪಟ್ಟು ಅಲ್ಲಿ ಜಜ್‌ಮಾನಿ ರೂಪದ ಶೋಷಣೆ ಆರಂಭವಾಯಿತು. ಬಿಟ್ಟಿ ಚಾಕರಿ ಸಾಂಸ್ಥಿಕಗೊಳಿಸ ಲ್ಪಟ್ಟು ಶೂದ್ರರು, ಕುಶಲಕರ್ಮಿಗಳು ಅದಕ್ಕಾಗಿ ತಮ್ಮ ಶ್ರಮದ ಒಂದು ಭಾಗವನ್ನು ಬಿಟ್ಟುಕೊಡಬೇಕಾಯಿತು. ಅಸ್ಪೃಶ್ಯತೆ, ಮೈಲಿಗೆ ಮುಂತಾದವು ಮೊದಲಿನಿಂದ ರೂಢಿಯಲ್ಲಿದ್ದರೂ ಊಳಿಗಮಾನ್ಯ ಸಮಾಜದಲ್ಲಿ ಅಸ್ಪೃಶ್ಯರು ಹೊಲಸು ಬಳಿಯುವವರಾಗಿ, ಜೀತದಾರರಾಗಿ ಪರಿಗಣಿಸಲ್ಪಟ್ಟರು. ಆದ್ದರಿಂದ ಜಾತಿ ವ್ಯವಸ್ಥೆಯಲ್ಲಿ ಅತೀ ಹೆಚ್ಚು ಕಠೋರ ಶೋಷಣೆಗೆ ಒಳಗಾದವರೆಂದರೆ ಅಸ್ಪೃಶ್ಯರಾಗಿದ್ದಾರೆ. ಈ ಅವಧಿಯಲ್ಲಿ ವರ್ಣಗಳು ಸಾಮಾನ್ಯ ವರ್ಗಗಳಾಗಿಯೂ, ಜಾತಿಗಳು ನಿರ್ದಿಷ್ಟ ಶ್ರಮದಲ್ಲಿ ತೊಡಗುವ ನಿರ್ದಿಷ್ಟ ವರ್ಗವಾಗಿಯೂ ಬದಲಾವಣೆಗೊಂಡವು. ಒಂದು ಜಾತಿಯಲ್ಲಿ ಹುಟ್ಟುವುದು ಒಂದು ವರ್ಗಕ್ಕೆ ಸೇರಿದಂತಾಯಿತು. ಹೀಗಾಗಿ ಜಾತಿ ವ್ಯವಸ್ಥೆ ಸಮಾಜದ ಒಂದು ನಿಯಮವಾಗಿ ಪರಿವರ್ತನೆಯಾಯಿತು. ಶೂದ್ರ ಒಡೆತನ ಸಮಾಜಕ್ಕೆ ಹೋಲಿಸಿದಲ್ಲಿ ಊಳಿಗಮಾನ್ಯ ಸಮಾಜದಲ್ಲಿ ಶೂದ್ರರ ಬದುಕಿನ ಸ್ಥಿತಿ, ಸಾಮಾಜಿಕ ಅಂತಸ್ತು ಒಂದಷ್ಟು ಮಟ್ಟಿಕ್ಕೆ ಸುಧಾರಿಸಿತು. ಶೂದ್ರರ ಗುಲಾಮತನಕ್ಕೆ ಬದಲಾಗಿ ಅಸ್ಪೃಶ್ಯರ ಜೀತಗಾರಿಕೆ ಆಚರಣೆಗೆ ಬಂತು. ಅಸ್ಪೃಶ್ಯತೆ ಸಾಮಾಜಿಕ ಸಂಬಂಧಗಳಲ್ಲಿ ಕಂಡು ಬಂದಿತೇ ಹೊರತು ಆರ್ಥಿಕ ಸಂಬಂಧಗಳಲ್ಲಿ ಅಲ್ಲ ಎನ್ನುವುದನ್ನಿಲ್ಲಿ ನಾವು ಗಮನಿಸಬೇಕು. ಆಳುವ ವರ್ಗ ಅಸ್ಪೃಶ್ಯರ ಶ್ರಮಕ್ಕೆ ಬೆಲೆಯನ್ನು ನೀಡಿದರೂ ಅವರ ಶ್ರಮದ ಪೂರ್ಣ ಫಲ ಅವರಿಗೆ ದಕ್ಕಲಿಲ್ಲ. ಆದರೆ ಸಾಮಾಜಿಕ ಹಕ್ಕಿನ ವಿಚಾರಕ್ಕೆ ಬಂದಾಗ ಅಸ್ಪೃಶ್ಯತೆಯನ್ನು ಆಚರಿಸಲಾಗುತ್ತದೆ. ಹೀಗಾಗಿ ಅಸ್ಪೃಶ್ಯತೆಯ ಉದ್ದೇಶ ದೋಚುವುದೇ ಆಗಿದೆ. ಇದನ್ನು ಒಂದೆಡೆ ಬಲಪ್ರಯೋಗದ ಮೂಲಕ ಸಾಧಿಸಿದರೂ ಅದಕ್ಕಿಂತ ಹೆಚ್ಚಾಗಿ ಜಾತಿ ಸಿದ್ಧಾಂತದ ಮೂಲಕ ಅದನ್ನು ಸಕ್ರಮಗೊಳಿಸಲಾಯಿತು. ಜಾತಿ ಸಿದ್ಧಾಂತ ಶ್ರಮವನ್ನು ಶೋಷಿಸು ವುದಲ್ಲದೆ ಶ್ರಮಜೀವಿಗಳನ್ನು ಶೂದ್ರರು, ಅಸ್ಪೃಶ್ಯರು ಎಂದು ವಿಂಗಡಿಸಿ ಊಳಿಗಮಾನ್ಯ ವಿರೋಧಿ ವರ್ಗಗಳ ನಡುವೆ ಒಂದು ಶಾಶ್ವತ ಬಿರುಕನ್ನು ಸೃಷ್ಟಿಸಿತು. ಆದ್ದರಿಂದ ಅಸ್ಪೃಶ್ಯತಾ ವಿರೋಧಿ ಹೋರಾಟದಲ್ಲಿ ಬ್ರಾಹ್ಮಣವಾದ, ಹಿಂದೂಮತವನ್ನು ವಿರೋಧಿಸುವ ಹೋರಾಟವು ಅತೀ ಮುಖ್ಯವಾದ ಸೈದ್ಧಾಂತಿಕ ಹೋರಾಟವಾಗಿರುತ್ತದೆ.

## ಊ. ಊಳಿಗಮಾನ್ಯತೆಯ ಅಡಿಯಲ್ಲಿ ಜಾತಿ ಪದ್ಧತಿಯಲ್ಲಾದ ಬದಲಾವಣೆಗಳು

ಕ್ರಿ.ಶ. 4 ನೆ ಶತಮಾನದಿಂದ 10 ನೆ ಶತಮಾನದವರೆಗೆ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಗಳೇನೂ ನಡೆಯಲಿಲ್ಲ. ಆದರೆ 11-12 ನೆ ಶತಮಾನ ದಲ್ಲಿ ಊಳಿಗಮಾನ್ಯತೆಯ ಬುಡವನ್ನೇ ಅಲುಗಾಡಿಸುವಂತೆ ವಚನಕಾರರ ಚಳುವಳಿ ಸ್ಫೋಟ ಗೊಂಡಿತು. ಅಗ್ರಹಾರ ಹಾಗೂ ಮಠಗಳ ಉಗಮ, ನಗರೀಕರಣ, ಸಂತೆ, ಶ್ರಮದ ಕೌಶಲ್ಯವನ್ನಾಧರಿಸಿ ಹೊಸ ಉದ್ದಿಮೆ ಹಾಗೂ ಹೊಸ ಜಾತಿಗಳ ಹುಟ್ಟು, ಹೆಚ್ಚಿದ ವಾಣಿಜ್ಯ, ಎಡಗೈ-ಬಲಗೈ ಶ್ರೇಣಿಗಳ ಹುಟ್ಟು ಮುಂತಾದ ಬೆಳವಣಿಗೆಗಳು ಜಾತಿ ವ್ಯವಸ್ಥೆಯ ಮೇಲೆ ದೊಡ್ಡ ಪರಿಣಾಮವನ್ನು ಬೀರಿದವು. ಊಳಿಗಮಾನ್ಯ ಭೂಮಾಲೀಕರನ್ನು ವಿರೋಧಿಸಿ ಬಸವಣ್ಣನವರ ನಾಯಕತ್ವದಲ್ಲಿ ನಡೆದ ವಚನಕಾರ ಚಳುವಳಿಯು ಹಲವಾರು ಜಾತಿಗಳಿಗೆ ಸೇರಿದ ಶ್ರಮಜೀವಿಗಳನ್ನು ಅದರಲ್ಲೂ ಮುಖ್ಯವಾಗಿ ಕುಶಲಕರ್ಮಿಗಳು ಹಾಗೂ ಸೇವಾ ಜಾತಿಗಳನ್ನು ಒಗ್ಗೂಡಿಸಿ ದೊಡ್ಡ ಹೋರಾಟವನ್ನೇ ನಡೆಸಿತು. ಅದು ಮಠ, ಬ್ರಾಹ್ಮಣವಾದ, ಜಾತಿ ಸಿದ್ಧಾಂತ, ಹಿಂದೂಧರ್ಮ, ಮೂಢನಂಬಿಕೆಗಳ ವಿರುದ್ಧ ಸಮರ ಸಾರಿತು. ವಿವಿಧ ಜಾತಿಗಳಾಗಿ ವಿಂಗಡಿಸಲ್ಪಟ್ಟ ಜನರು ತಮ್ಮದೇ ಆದ ಸಂಸ್ಥೆ ಯೊಂದನ್ನು ಕಟ್ಟಿಕೊಂಡು ಜಾತಿಯ ಚೌಕಟ್ಟನ್ನು ಸ್ಫೋಟಿಸಲು ಮುಂದಾದರು. "ಕಾಯಕವೇ ಕೈಲಾಸ", "ಎಲ್ಲಾ ಕೆಲಸಗಳೂ ಸಮದಾದವೆ" ಎಂಬಂತಹ ಪ್ರಗತಿಪರ ವಿಚಾರಗಳು ಹುಟ್ಟಿಕೊಂಡವು. ಗುಲಾಮತನದ ಸಂಕೋಲೆಯಲ್ಲಿ, ಮನೆಯ ನಾಲ್ಕು ಗೋಡೆಗಳಲ್ಲಿ ಬಂಧಿಸಲ್ಪಟ್ಟ ಮಹಿಳೆಯರು ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ಹೊರಬಂದರು. ಒಟ್ಟಾರೆ ವಚನಕಾರ ಚಳುವಳಿಯು ಜಾತಿ ಆಧಾರಿತ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಒಂದು ಬಿರುಕನ್ನು ಉಂಟುಮಾಡಿತು. ಇದು ಊಳಿಗಮಾನ್ಯತೆಗೆ ನೀಡದ ಮೊಟ್ಟ ಮೊದಲ ಪೆಟ್ಟಾಗಿತ್ತು.

15 ನೆ ಶತಮಾನದ ವಿಜಯನಗರ ಸಾಮ್ರಾಜ್ಯದಲ್ಲಿ ಸರಕು ಉತ್ಪಾದನೆ ಮತ್ತಷ್ಟು ಬೆಳೆದುದನ್ನು ಆಧರಿಸಿ ಜಾತಿ ವ್ಯವಸ್ಥೆಯಲ್ಲೂ ಕೆಲ ಬದಲಾವಣೆಗಳಾದವು. ಬ್ರಾಹ್ಮಣರ ನಂತರದ ಒಕ್ಕಲಿಗ, ಲಿಂಗಾಯತ ಜಾತಿಗೆ ಸೇರಿದ ಆಳುವ ಭೂಮಾಲೀಕರ ವರ್ಗಗಳ ಸ್ಥಿತಿಯಲ್ಲಿ ಕೆಲ

ಬದಲಾವಣೆಗಳಾದವು. ಕುರುಬ, ಬೇಡ, ಬಣಜಿಗ ಮುಂತಾದ ಜಾತಿಗೆ ಸೇರಿದವರೂ ಕೂಡ ಆಳುವ ವರ್ಗಕ್ಕೆ ಸೇರಿದರು. ಇದು ಅನಿವಾರ್ಯವಾಗಿ ಬ್ರಾಹ್ಮಣರ ಮೇಲಾಧಿಪತ್ಯವನ್ನು ಪ್ರಶ್ನಿಸುವಂತೆ ಮಾಡಿತು. ಬ್ರಾಹ್ಮಣ ಹಾಗೂ ಬ್ರಾಹ್ಮಣೇತರ ಆಳುವ ವರ್ಗಗಳ ನಡುವಿನ ಪೈಪೋಟಿ ತೀವ್ರಗೊಂಡಿತು.

ಬಲಗೈ ಜಾತಿ ಶ್ರೇಣಿಯಲ್ಲಿದ್ದ ಅಸ್ಪೃಶ್ಯರಾದ ಹೊಲೆಯರಿಗೆ ಒಂದಷ್ಟು ಸಾಮಾಜಿಕ ಅಂಗೀಕಾರ ದೊರಕಿತು. ಈ ಅವಧಿಯಲ್ಲೇ ಹರಿದಾಸರ ಚಳುವಳಿ ಪ್ರಾರಂಭವಾಯಿತು. ಕನಕದಾಸರ ಬ್ರಾಹ್ಮಣ ವಿರೋಧಿ, ಜಾತಿ ವಿರೋಧಿ ವಿಚಾರಗಳು ದೊಡ್ಡ ಪ್ರಭಾವವನ್ನು ಬೀರಿದವು. ಅವರಿಗೆ ಉಡುಪಿ ಶ್ರೀಕೃಷ್ಣ ದೇವಾಲಯದೊಳಗೆ ಪ್ರವೇಶ ನಿಷೇಧಿಸಿದುದನ್ನು ಪ್ರತಿಭಟಿಸಿ ದೊಡ್ಡ ಮಟ್ಟದ ಗಲಭೆಗಳು ಸ್ಫೋಟಗೊಂಡವು. ಇವೆಲ್ಲವೂ ಜಾತಿ ವ್ಯವಸ್ಥೆಯೊಳಗೆ ಗುರುತಿಸಲ್ಪಡುವ ಬದಲಾವಣೆಗಳಾಗಿವೆ.

ಇದರ ನಂತರ 17 ನೆ ಶತಮಾನದ ಚಿಕ್ಕ ದೇವರಾಜ ಒಡೆಯರ್ ಕಾಲದಲ್ಲಿ ಆರಂಭಗೊಂಡ ಬಂಡವಾಳಶಾಹಿ ಸಂಬಂಧಗಳು 18 ನೆ ಶತಮಾನದ ಹೈದರ್ ಟಿಪ್ಪು ಕಾಲದಲ್ಲಿ ಮತ್ತಷ್ಟು ಸದೃಢಗೊಂಡು ಸಮಾಜವು ಅರೆ ಊಳಿಗಮಾನ್ಯ ಸಮಾಜವಾಗಿ ಬದಲಾಯಿತು. ಊಳಿಗಮಾನ್ಯ ಸಮಾಜದಲ್ಲುಂಟಾದ ಈ ಬದಲಾವಣೆಗಳು ಜಾತಿಯ ಮೇಲೂ ತನ್ನ ಪ್ರಭಾವವನ್ನು ಬೀರಿದವು. ಬಂಡವಾಳಶಾಹಿಯ ಬೆಳವಣಿಗೆಯು ಎಲ್ಲಾ ಜಾತಿಯಲ್ಲಿ ಅದರಲ್ಲೂ ಮುಖ್ಯವಾಗಿ ಶೂದ್ರರಲ್ಲಿನ ವರ್ಗ ವಿಭಜನೆಯನ್ನು ತೀವ್ರ ಗೊಳಿಸಿತು. ಪರಿಣಾಮವಾಗಿ ಒಂದು ಜಾತಿಯೆಂದರೆ ಒಂದು ವರ್ಗ ಎಂಬ ಸ್ಥಿತಿ ಬದಲಾಗಿ ಒಂದೇ ಜಾತಿಯೊಳಗೆ ಹಲವಾರು ವರ್ಗಗಳು ಸೃಷ್ಟಿಯಾದವು. ಇದು ಜಾತಿ ಯೊಳಗಿದ್ದ ಸಮಾನತೆಯನ್ನು ಹೋಗಲಾಡಿಸಿ ಜಾತಿ ಐಕ್ಯತೆಯನ್ನು ಬಲಹೀನ ಗೊಳಿಸಿತು. ಈ ಪ್ರಕ್ರಿಯೆ ಸಣ್ಣ ಮಟ್ಟದ್ದಾದರೂ ಗಮನಾರ್ಹ ಬದಲಾವಣೆಯನ್ನು ಉಂಟುಮಾಡಿತು.

ವಾಣಿಜ್ಯದ ಬೆಳವಣಿಗೆಯು ವ್ಯಾಪಾರಿ ಜಾತಿಗಳ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಿ ಬ್ರಾಹ್ಮಣರ ಅಧಿಕಾರವನ್ನು ಗಣನೀಯವಾಗಿ ಕುಗ್ಗಿಸಿತು. ಸಣ್ಣ ಮಟ್ಟದಲ್ಲಿ ಪ್ರಾರಂಭ ವಾದ ಕೈಗಾರಿಕಾ ಬಂಡವಾಳವು ಸ್ವತಂತ್ರ ಕೂಲಿ ಕಾರ್ಮಿಕರನ್ನು ಹುಟ್ಟುಹಾಕಿದ್ದ ರಿಂದ ಅದು ಜಾತಿ ವ್ಯವಸ್ಥೆಯನ್ನು ಬಲಹೀನಗೊಳಿಸಿತು. ಇದು ಕುಲ ಕಸುಬುಗಳಿಗಿದ್ದ ಆಧಾರ ಕುಸಿಯುವಂತೆ ಮಾಡಿತು. ಎಡಗೈ ಬಲಗೈ ಜಾತಿ ಶ್ರೇಣಿಗಳ ಮಧ್ಯೆ ವೈರುಧ್ಯಗಳು ತೀವ್ರಗೊಂಡು ಗಲಭೆಗಳು ಉಂಟಾದವು (ಸಾಮಾನ್ಯವಾಗಿ ಎಡಗೈ ಎಂದರೆ ಉತ್ಪಾದನೆ ಯಲ್ಲಿ ತೊಡಗಿದ ಜಾತಿಗಳು, ಬಲಗೈ ಎಂದರೆ ಸೇವಾ ವೃತ್ತಿಯ ಜಾತಿಗಳು). ಈ ಶ್ರೇಣಿಗಳಿಗೆ ಸೇರಿದ ದಲಿತ ಜಾತಿಗಳು (ಬಲಗೈ ಹೊಲೆಯರು, ಎಡಗೈ ಮಾದಿಗರು) ಗಲಭೆಯ ಸಮಯದಲ್ಲಿ ಶಸ್ತ್ರಾಸ್ತ್ರಗಳನ್ನಿಡಿದು ಹೋರಾಡುವ ಅವಕಾಶ ಸಿಕ್ಕಿತು. ಊಳಿಗ ಮಾನ್ಯ ಸಮಾಜದಲ್ಲಿ ದಲಿತರು ಶಸ್ತ್ರಾಸ್ತ್ರಗಳನ್ನು ಹೊಂದುವ ಹಕ್ಕಿನಿಂದ ವಂಚಿತ ರಾಗಿದ್ದರು. ಇದು ಅವರಿಗೆ ಜಾತಿ ವ್ಯವಸ್ಥೆಯೊಳಗೆ ದೊರಕಿದ ಸಾಮಾಜಿಕ ಅಂತಸ್ತಾಗಿತ್ತು.

ಒಟ್ಟಾರೆ ಊಳಿಗಮಾನ್ಯ ಸಮಾಜದೊಳಗೆ ಸರಕು ಉತ್ಪಾದನೆಯ ಬೆಳವಣಿಗೆ ಯಾದಂತೆಲ್ಲಾ ಜಾತಿಯ ಪ್ರಭಾವ ಬಲಹೀನಗೊಳ್ಳಲಾರಂಭಿಸಿತು. ಹೈದರ್ ಟಿಪ್ಪುವಿನ ಕಾಲದಲ್ಲಿ ಈ ಪ್ರಕ್ರಿಯೆ ಮತ್ತಷ್ಟು ತೀವ್ರಗೊಂಡಿತು. ಇದು ಪ್ರಜಾತಾಂತ್ರಿಕ ಕ್ರಾಂತಿಗೆ ತಳಹದಿಯನ್ನು ರೂಪಿಸಿತು. ನಂತರದ 800 ವರ್ಷಗಳಲ್ಲಿ ಜಾತಿ ವ್ಯವಸ್ಥೆ ಹಲವಾರು ಬದಲಾವಣೆಗಳನ್ನು ಕಂಡಿತು. ಪ್ರಜಾತಾಂತ್ರಿಕ ಕ್ರಾಂತಿಯನ್ನು ಯಶಸ್ವಿಗೊಳಿಸಿದ್ದಲ್ಲಿ ಅದು ಗುಣಾತ್ಮಕ ಬದಲಾವಣೆಗಳನ್ನು ಕಂಡಿರಬಹುದಿತ್ತು. ಆದರೆ ವಸಾಹತುಶಾಹಿಗಳ ದಾಳಿಯಿಂದ ಈ ಪ್ರಕ್ರಿಯೆ ಮಧ್ಯದಲ್ಲಿ ಛಿದ್ರಗೊಂಡಿತು. ಹೀಗಾಗಿ ಊಳಿಗಮಾನ್ಯತೆಗೆ ಮತ್ತೆ ಪುನರ್ಜೀವ ಬಂದು ಅದು ಮತ್ತಷ್ಟು ಶಕ್ತಿಯುತವಾಗಿ ಆದರೆ ವಸಾಹತುಶಾಹಿಗಳ ಅಗತ್ಯಕ್ಕೆ ತಕ್ಕಂತೆ ಬದಲಿಸಲಾಯಿತು. ಕರ್ನಾಟಕದ ಪ್ರಾಚೀನ ವಸ್ತು ಸಂಗ್ರಹಾಲಯದಲ್ಲಿ ಇಡಬೇಕಿದ್ದ ಊಳಿಗಮಾನ್ಯ ಜಾತಿ ವ್ಯವಸ್ಥೆ ಇನ್ನೂ ಜೀವಂತವಾಗಿ ಮುಂದುವರೆಯುತ್ತಿದೆ.

## ಖ. ಬ್ರಿಟಿಷ್ ಆಡಳಿತದಲ್ಲಿ ಜಾತಿಯ ಮೇಲಾದ ಪರಿಣಾಮಗಳು

ಬ್ರಿಟಿಷ್ ವಸಾಹತುಶಾಹಿ ಆಡಳಿತ, ಭಾರತದ ಬ್ರಾಹ್ಮಣೀಯ ಹಿಂದೂ ಸಮಾಜದ ಅಡಿಪಾಯವನ್ನು ಮತ್ತದರ ಕಠೋರ ಆಚರಣೆಯಾದ ಜಾತಿ ವ್ಯವಸ್ಥೆಯನ್ನು ಯಾವ ರೀತಿಯಲ್ಲಿಯೂ ಬದಲಾಯಿಸಲಿಲ್ಲ. ಬದಲಿಗೆ ಬ್ರಾಹ್ಮಣವಾದಿ ಜಾತಿ ಶಿಸ್ತುಗಳನ್ನು ತಮ್ಮ ಪಾಶ್ಚಿಮಾತ್ಯದ ಕಾನೂನು ವ್ಯವಸ್ಥೆಯಲ್ಲಿ ಸೇರಿಸಿಕೊಂಡಿತು. ವೇದ ಶಾಸ್ತ್ರಗಳನ್ನು ವ್ಯಾಖ್ಯಾನಿಸಲು, ಅವುಗಳನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಜಾರಿಗೊಳಿಸಲು, ಬ್ರಿಟಿಷ್ ನ್ಯಾಯಮೂರ್ತಿಗಳಿಗೆ ಸಲಹೆ ನೀಡಲು ಬ್ರಾಹ್ಮಣ ಪಂಡಿತರನ್ನು ನೇಮಿಸಿಕೊಂಡು ಸಾಂಪ್ರದಾಯಿಕ ಪ್ರತಿಗಾಮಿ ಕಂದಾಚಾರಗಳಿಗೆ ನೀರೆರೆಯಲಾಯಿತು. ಸ್ಥಳೀಯ ಆಚಾರ ವಿಚಾರಗಳನ್ನು ಗೌರವಿಸುವ ನೆಪದಲ್ಲಿ ಅಸ್ಪೃಶ್ಯತೆ ಮುಂದುವರಿಯಲು ದಾರಿ ಮಾಡಿ ಕೊಟ್ಟಿತು. ಜಾತಿ ಕಟ್ಟುಪಾಡುಗಳನ್ನು, ಜಾತಿ ಶ್ರೇಣೀಕರಣ, ಜಾತಿ ನಡವಳಿಕೆ ಮುಂತಾದವುಗಳನ್ನು ಎತ್ತಿ ಹಿಡಿಯಿತು. ಜಾತಿ ವ್ಯವಸ್ಥೆಯು ಜನಾಂಗೀಯ ಶ್ರೇಷ್ಠತೆಯನ್ನು ಕಾಪಾಡುತ್ತದೆಂದೂ, ಆರ್ಯ ಜನಾಂಗವು ಯುರೋಪಿಯನ್ ಜನಾಂಗವಾದುದರಿಂದ ಅವರೇ ಶ್ರೇಷ್ಠರು ಎನ್ನುವುದನ್ನು ಪ್ರಚಾರ ಮಾಡುತ್ತಾ ಜನಾಂಗವಾದವನ್ನೂ, ಜಾತಿಯ ಹುಟ್ಟಿಗೆ ಕಾರಣವಾದ ವರ್ಣ ವ್ಯವಸ್ಥೆಯನ್ನೂ ಎತ್ತಿ ಹಿಡಿದರು. ಅದಕ್ಕಾಗಿ ಸಂಸ್ಕೃತ ಪುಸ್ತಕಗಳನ್ನು ಇಂಗ್ಲಿಷಿಗೆ ಭಾಷಾಂತರಿಸಲು, ಅವುಗಳ ಬಗ್ಗೆ ಸಂಶೋಧನೆ ನಡೆಸಲು ಧನ ಸಹಾಯವನ್ನು ನೀಡಿತು. ಬ್ರಿಟಿಷರ ಆಡಳಿತದಲ್ಲಿ ಊಳಿಗಮಾನ್ಯ ಶಕ್ತಿಗಳ ವಿಶೇಷ ಸವಲತ್ತುಗಳನ್ನು ರಕ್ಷಿಸಲಾಯಿತು. ಜಮೀನ್ದಾರಿ ಪ್ರದೇಶಗಳಲ್ಲಿ, ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟಿದ್ದ ರಾಜ ಸಂಸ್ಥಾನಗಳಲ್ಲೂ ಭೂಮಾಲೀಕರ ನೇರ ಶೋಷಣೆ ಹಾಗೂ ಆಳ್ವಿಕೆ ನಡೆಯುತ್ತಿತ್ತು. ರೈತವಾರಿ ಪ್ರದೇಶಗಳಲ್ಲೂ ಇನಾಂ ಭೂಮಿ ದೊಡ್ಡ ಪ್ರಮಾಣದಲ್ಲಿ ಮುಂದುವರಿಯಿತು.

ಆದರೂ ತಮ್ಮ ಆಡಳಿತವನ್ನು ಸ್ಥಿರಗೊಳಿಸಿಕೊಳ್ಳಲು ಹಾಗೂ ತಮ್ಮ ಶೋಷಣೆಯನ್ನು ತೀವ್ರಗೊಳಿಸಲು 19 ನೆ ಶತಮಾನದಲ್ಲಿ ವಸಾಹತುಶಾಹಿ ಆಡಳಿತ ಪರಿಚಯಿಸಿದ ಸುಧಾರಣೆಗಳು, ಗ್ರಾಮೀಣ ಪ್ರದೇಶಗಳ ಉತ್ಪಾದನಾ ಸಂಬಂಧಗಳಲ್ಲಿ ಒಂದು ಮಟ್ಟದ

ಬದಲಾವಣೆಯನ್ನು ತಂದವು. ಮುಖ್ಯವಾಗಿ ಭೂಮಿ, ಕೊಳ್ಳುವ ಮಾರುವ ಸರಕಾಗಿ ಮಾರ್ಪಾಡಾಯಿತು. ಎಲ್ಲಾ ಜಾತಿಗಳಲ್ಲಿ ವರ್ಗ ವಿಬೇಧ ತೀವ್ರಗೊಂಡಿತು. ವಸಾಹತುಶಾಹಿ ಆಂಗ್ಲ ಶಿಕ್ಷಣ ಪದ್ಧತಿ, ರೈಲ್ವೆ, ಸಾರಿಗೆ, ಅಂಚೆ, ತಂತಿ, ಸಿವಿಲ್ ಹಾಗೂ ಕ್ರಿಮಿನಲ್ ಕಾನೂನು ಮುಂತಾದವುಗಳು ಜಾತಿ ವ್ಯವಸ್ಥೆಯ ಮೇಲೆ ಪರಿಣಾಮ ವನ್ನು ಬೀರಿದವು. ಮುಖ್ಯವಾಗಿ ಭಾರತದ ಆರ್ಥಿಕತೆ ಪ್ರಪಂಚ ಮಾರುಕಟ್ಟೆ ಯೊಂದಿಗೆ ಬೆಸೆಯಲ್ಪಟ್ಟಿದ್ದರಿಂದ ಜನರ ಬದುಕಿನಲ್ಲಿ ಬದಲಾವಣೆಯನ್ನುಂಟುಮಾಡಿ ಹೊಸ ವರ್ಗಗಳ ಉಗಮಕ್ಕೆ ದಾರಿ ಮಾಡಿಕೊಟ್ಟಿತು. ಶಾಶ್ವತ ಭೂಕಂದಾಯ ಶಾಸನದ ಮೂಲಕ ಭೂಮಿಯಲ್ಲಿ ದುಡಿಯದ ಊಳಿಗಮಾನ್ಯ ಶಕ್ತಿಗಳಿಗೆ ಸ್ವಂತ ಭೂಮಿ ನೀಡಲಾಯಿತು. ಇದರ ಮೂಲಕ ಹಳ್ಳಿಯ ವಿತರಣಾ ಪದ್ಧತಿ ಹಾಳಾಗಿ ರೈತರು ಭೂಮಾಲೀಕರ ಕೃಪಾ ಕಟಾಕ್ಷದಲ್ಲಿ ಬಾಳಬೇಕಾದ ಪರಿಸ್ಥಿತಿ ಉಂಟಾಯಿತು. ನೇರ ಸಾಗುವಳಿದಾರರಾದ ಶೂದ್ರ ರೈತರಲ್ಲಿ ಮೇಲು, ಮಧ್ಯಮ ಹಾಗೂ ಬಡ ರೈತರುಗಳಾಗಿ, ಭೂಹೀನ ಗೇಣಿ ರೈತರುಗಳಾಗಿ ವರ್ಗ ವಿಂಗಡಣೆಯಾಯಿತು. ಭೂ ಕಂದಾಯ ವ್ಯವಸ್ಥೆ ದೊಡ್ಡ ಹೊರೆಯಾಗಿ ಪರಿಣಮಿಸಿ ಆಹಾರಧಾನ್ಯದ ಬದಲಿಗೆ ವಾಣಿಜ್ಯ ಬೆಳೆಯನ್ನು ಬೆಳೆಯಬೇಕಾದ ನಿರ್ಬಂಧಕ್ಕೆ ರೈತರು ಒಳಗಾದರು. ಲೇವಾದೇವಿಗಾರರು ಕಂತು ಬಡ್ಡಿ, ಬೆಳೆ ಒತ್ತೆ ಪದ್ಧತಿಗಳ ಕೆಳಗೆ ರೈತರಿಗೆ ಸಾಲ ನೀಡಿ ಅವರು ಬೆಳೆದ ಬೆಳೆಯ ಮೇಲೆ ಅಧಿಪತ್ಯ ಸಾಧಿಸಿದರು. ಮಾರುಟಕಟ್ಟೆಯ ವ್ಯಾಪಾರಿಗಳಾಗಿದ್ದ ಅವರು ಉತ್ಪತ್ತಿಯಾದ ಸರಕುಗಳನ್ನು ತಮಗೆ ಮಾರುವಂತೆ ನಿರ್ಬಂಧ ಹೇರಲಾರಂಭಿಸಿದರು. ಇವರು ನಿರ್ದಿಷ್ಟವಾಗಿ ರೈತವಾರಿ ಪ್ರದೇಶಗಳಲ್ಲಿ ಬೆಳೆಯನ್ನು ಸಂತೆಗೆ ಕೊಂಡೊಯ್ಯುವ ಮಧ್ಯವರ್ತಿಗಳಾಗಿದ್ದರು. ಕರಕುಶಲ ಕ್ಷೇತ್ರ ಅವನತಿ ಹೊಂದಿ ಕುಶಲಕರ್ಮಿಗಳು ಬೀದಿ ಪಾಲಾದರು. ಪ್ರಪಂಚದ ಮಾಟುಕಟ್ಟೆ ಗಾಗಿ, ರೈಲು ಸಾರಿಗೆಗಾಗಿ ಕಾಡುಗಳನ್ನು ನಾಶಗೊಳಿಸಿ ಪರಿಸರ ನಾಶ ಮಾಡಲಾಯಿತು. ಸೂಕ್ತ ಗಮನ ಹರಿಸದ ಕಾರಣ ಅದುವರೆಗೆ ಪಾರಂಪರಿಕವಾಗಿ ಉಳಿಸಿಕೊಂಡು ಬಂದಿದ್ದ ಕೆರೆಗಳು, ಬಾವಿಗಳು ಹಾಳಾದವು. ಇದರಿಂದ ವ್ಯವಸಾಯಕ್ಕೆ ಪೆಟ್ಟು ಬಿದ್ದು ಕ್ಷಾಮದಿಂದ ಸಾವು ನೋವುಗಳು ತಾಂಡವವಾಡಿದವು. 19 ನೆ ಶತಮಾನದಲ್ಲಿ ಒಟ್ಟು 31 ಕ್ಷಾಮಗಳು ಘಟಿಸಿ ಸುಮಾರು 2 ರಿಂದ 2 1/2 ಕೋಟಿ ಜನರು ಅಸುನೀಗಿದರು. ಗಣಿಗಾರಿಕೆ, ಪ್ಲಾಂಟೇಷನ್‌ಗಳು ಪ್ರಾರಂಭಿಸಲ್ಪಟ್ಟು ಬಹುಪಾಲು ದಲಿತರು, ಗಿರಿಜನರು ಅವುಗಳಲ್ಲಿ ಕೆಲಸ ಮಾಡುವ ಕಾರ್ಮಿಕರಾದರು. ಇವರಲ್ಲಿನ ಅನೇಕರನ್ನು ವಸಾಹತುಶಾಹಿಗಳು ವೆಸ್ಟ್ ಇಂಡೀಸ್ ದ್ವೀಪಗಳಿಗೆ, ಆಗ್ನೇಯ ಏಷ್ಯಾದ ದೇಶಗಳಿಗೆ ಇಲ್ಲ ಶ್ರೀಲಂಕದಂತಹ ದ್ವೀಪಗಳಿಗೆ ಸಾಗಿಸಿ ಅವರು ಅಲ್ಲಿ ಜೀತದಾಳುಗಳಾಗಿ ದುಡಿಯುವಂತೆ ಮಾಡಿದರು. ದೊಡ್ಡ ಮಟ್ಟದಲ್ಲಿ ಗಿರಣಿಗಳು ಪ್ರಾರಂಭವಾದ್ದರಿಂದ ಗಿರಣಿ ಕಾರ್ಮಿಕರ ಒಂದು ಹೊಸ ವರ್ಗ ಸೃಷ್ಟಿಯಾಯಿತು. ಇವರಲ್ಲಿನ ಬಹುಪಾಲು ಮಂದಿ ಹಿಂದುಳಿದ ಜಾತಿಗೆ ಸೇರಿದವರಾಗಿದ್ದು, ಒಂದು ಸಣ್ಣ ಪಾಲು ದಲಿತರಾಗಿದ್ದರು. ಸರ್ಕಾರಿ ನೌಕರರು, ಉಪಾಧ್ಯಾಯರು, ವಕೀಲರು ಮುಂತಾದ ಪುಟ್ಟ ಬಂಡವಾಳಶಾಹಿ ವರ್ಗ ಸೃಷ್ಟಿಯಾಯಿತು. ಒಟ್ಟಾರೆ ವಸಾಹತುಶಾಹಿ ಆಡಳಿತ ಪರಂಪರೆಯಾಗಿದ್ದ ಕುಲ ಕಸುಬನ್ನು ಮುರಿದು ಹಿಂದುಳಿದ ಹಾಗೂ ದಲಿತ ಜಾತಿಗಳು ಕಲ್ಪಿಸಿಕೊಳ್ಳಲೂ ಆಗದಿದ್ದ ಸಣ್ಣ ಪ್ರಮಾಣದಲ್ಲಿ ಉದ್ದಿಮೆಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ಒದಗಿಸಿತು. ಹಲವಾರು ಜಾತಿಗಳಿಗೆ ಸೇರಿದ ಹೊಸ ವರ್ಗಗಳ ಸೃಷ್ಟಿ ಜಾತಿ ವ್ಯವಸ್ಥೆಯನ್ನೇನೂ ನಿರ್ಮೂಲಿಸಲಿಲ್ಲವಾದರೂ ಅದನ್ನು ಒಂದು ಮಟ್ಟಕ್ಕೆ ಸಡಿಲಗೊಳಿಸಿತು. ಪರಿಸ್ಥಿತಿಗೆ ಅನುಗುಣವಾಗಿ ಜಾತಿ ಶ್ರೇಣೀಕರಣವನ್ನು ಪುನರ್ರಚಿಸಿಕೊಂಡಿತು. ಹೊಸದಾಗಿ ಸೃಷ್ಟಿಯಾದ ವೃತ್ತಿಪರರು ಹಾಗೂ ಉದ್ದಿಮೆಪತಿಗಳು ಬಹುಪಾಲು ಮೇಲ್ಜಾತಿ ಬ್ರಾಹ್ಮಣರು, ಬನಿಯಾಗಳೇ ಆದರು. ಆಡಳಿತಾಂಗದಲ್ಲಿ ಮುಖ್ಯವಾಗಿ ಉನ್ನತ ಹುದ್ದೆಗಳಲ್ಲಿ ಬಹುಪಾಲು ಬ್ರಾಹ್ಮಣರೇ ಇದ್ದರು. ಲೇವಾದೇವಿಗಾರರಾಗಿ, ಉದ್ದಿಮೆಪತಿಗಳಾಗಿ ಮಾರ್ವಾಡಿ, ಪಾರ್ಸಿ, ಸಿಂಧಿ, ಬನಿಯಾ, ಜೈನ್, ಚೆಟ್ಟಿಯಾರ್‌ಗಳು ಇದ್ದರು. ಶೂದ್ರರು ದಲಿತ ಜಾತಿಗೆ ಸೇರಿದವರು ಮಿಲ್ ಕಾರ್ಮಿಕರಾಗಿ, ಗಣಿ, ತೋಟಗಾರಿಕೆ ಕಾರ್ಮಿಕರಾಗಿ ಪರಿವರ್ತನೆಯಾದರು.

1852 ರಿಂದ ಸ್ವಾತಂತ್ರ ಸಂಗ್ರಾಮದ ನಂತರದ ಬೆಳವಣಿಗೆಯನ್ನು ಗಮನಿಸಿದ ಬ್ರಿಟಿಷ್ ವಸಾಹತುಶಾಹಿಗಳು ಅದಕ್ಕೆ ತಕ್ಕಂತೆ ತಂತ್ರೋಪಾಯಗಳನ್ನು ಕೈಗೊಂಡರು. ಕೆಳವರ್ಗದ ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದುವಂತೆ ಪ್ರೋತ್ಸಾಹಿಸಿದರು. 1901 ರ ಜನಗಣತಿಯಲ್ಲಿ ಮೊಟ್ಟ ಮೊದಲ ಬಾರಿಗೆ ಜಾತಿ ಹಿನ್ನಲೆಯನ್ನು ನಮೂದಿಸ ಲಾಯತು. ಇದರಿಂದಾಗಿ ಜಾತಿ ಸಮಾವೇಶಗಳು, ಜಾತಿ ಪತ್ರಿಕೆಗಳು, ಜಾತಿಯ ಪ್ರಾದೇಶಿಕ ಸಂಘಗಳು ಹುಟ್ಟಿಕೊಳ್ಳಲು ಅವಕಾಶವಾಯಿತು. ಹಿಂದುಳಿದ ಹಾಗೂ ದಲಿತ ಜಾತಿಗಳು ಸಂಘಟನೆ ಕಟ್ಟಿಕೊಂಡು ತಮ್ಮ ಹಕ್ಕುಗಳಿಗಾಗಿ, ಜಾತಿ ದಬ್ಬಾಳಿಕೆಯನ್ನು ವಿರೋಧಿಸಿ ಹೋರಾಡುವಂತಾದರು. ಭಾರತದ ಹಲವಾರು ಪ್ರದೇಶಗಳಲ್ಲಿ ಬ್ರಾಹ್ಮಣೇತರ ಚಳುವಳಿಗಳು, ದಲಿತ ಚಳುವಳಿಗಳು ಪ್ರಾರಂಭವಾದವು.

## III. ಕರ್ನಾಟಕದಲ್ಲಿ ಹಿಂದುಳಿದ ಹಾಗೂ ದಲಿತ ಜಾತಿಗಳ ಚಳುವಳಿ

### ಅ. 1900 ರಿಂದ 1947 ರವರೆಗಿನ ಹಿಂದುಳಿದ ಜಾತಿಗಳ ಹೋರಾಟ

ಬ್ರಾಹ್ಮಣರ ಅಧಿಪತ್ಯವನ್ನು, ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಕರ್ನಾಟಕದಲ್ಲಿ 12 ನೆ ಶತಮಾನದಲ್ಲಿನ ವಚನಕಾರ ಚಳುವಳಿ, ದಾಸರ ಚಳುವಳಿಯಂತಹ ಹಲವಾರು ಚಳುವಳಿಗಳು ನಡೆದಿವೆ. ಬ್ರಿಟಿಷರ ಆಗಮನದ ನಂತರ 20 ನೆ ಶತಮಾನದ ಪ್ರಾರಂಭ ದಲ್ಲಿ ಬ್ರಾಹ್ಮಣ ವಿರೋಧಿ ಚಳುವಳಿಗಳು ಪ್ರಾರಂಭವಾದವು. 1905 ರ ನಂತರ ವೀರಶೈವ ಮಹಾಸಭಾ, ಒಕ್ಕಲಿಗರ ಸಂಘ, ಆದಿ ದ್ರಾವಿಡ ಅಭಿವೃದ್ಧಿ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಸರ್ಕಾರಿ ಆಡಳಿತ ಕ್ಷೇತ್ರದಲ್ಲಿದ್ದ ಬ್ರಾಹ್ಮಣರ ಅಧಿಪತ್ಯವನ್ನು ವಿರೋಧಿಸಿ ಅದರಲ್ಲಿ ತಮ್ಮ ಜಾತಿಗೂ ಅವಕಾಶ ನೀಡಬೇಕೆಂಬುದು ಇವರ ಪ್ರಮುಖ ಬೇಡಿಕೆಯಾಗಿತ್ತು. ಇವರು 1918 ರಲ್ಲಿ ಮೈಸೂರು ಸರ್ಕಾರಕ್ಕೆ ಒಂದು ಅರ್ಜಿಯನ್ನು

ಸಲ್ಲಿಸಿದರು. ನಂತರ 1919 ರಲ್ಲಿ ಮಿಲ್ಲರ್ ಕಮೀಷನ್ ವರದಿಯಲ್ಲಿನ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಸರ್ಕಾರಿ ಕ್ಷೇತ್ರದಲ್ಲಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಯನ್ನು ನೀಡಲಾಯಿತು. ಆದರೆ ಇದರಲ್ಲಿ ದಲಿತರಿಗೆ ಯಾವ ಅವಕಾಶವನ್ನೂ ನೀಡಲಿಲ್ಲ. ಮದ್ರಾಸ್ ಸಂಸ್ಥಾನದಲ್ಲಿ ಪೆರಿಯಾರರ ನಾಯಕತ್ವದಲ್ಲಿ ನಡೆಸಲ್ಪಟ್ಟ ಬ್ರಾಹ್ಮಣ ವಿರೋಧಿ ಚಳುವಳಿಯಂತೆ ಇಲ್ಲೂ ಕೂಡ ಲಿಂಗಾಯತರು, ಒಕ್ಕಲಿಗರು, ಮುಸ್ಲಿಮರು ಜಂಟಿಯಾಗಿ ಪ್ರಜಾ ಮಿತ್ರ ಮಂಡಳಿ ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಇದು ಮೈಸೂರು ಸರ್ಕಾರಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಿತು.

1930 ರಲ್ಲಿ ಸ್ಥಾಪಿಸಲ್ಪಟ್ಟ ಪ್ರಜಾ ಪಕ್ಷ ಸಂಘಟನೆಯೊಡನೆ 1935 ರಲ್ಲಿ ಒಗ್ಗೂಡಿದ ಪ್ರಜಾ ಮಿತ್ರಮಂಡಳಿ ನಂತರ ಪ್ರಜಾ ಒಕ್ಕೂಟವೊಂದನ್ನು ರಚಿಸಿಕೊಂಡು ಅಂತಿಮವಾಗಿ 1937 ರಲ್ಲಿ ಕಾಂಗ್ರೆಸ್ಸಿನೊಂದಿಗೆ ವಿಲೀನಗೊಂಡಿತು. ಈ ಕಾಲದಲ್ಲಿ ಈ ಸಂಘಟನೆಗಳು ಬಹುತೇಕ ಹಿಂದುಳಿದ ಜಾತಿಗಳಿಗೆ ಕೆಲ ಸವಲತ್ತುಗಳಿಗಾಗಿ ಲಾಬಿ ನಡೆಸುವುದಕ್ಕಷ್ಟೇ ಸೀಮಿತಗೊಂಡಿದ್ದವು. ಇವು ಜನ ಸಮೂಹವನ್ನು ಸಂಘಟಿಸಿ ಯಾವ ಪ್ರಜಾ ಚಳುವಳಿಯನ್ನೂ ನಡೆಸಲಿಲ್ಲ.

1930 ರ ದಶಕದಲ್ಲಿ ಲಿಂಗಾಯತ, ಒಕ್ಕಲಿಗ ಜಾತಿಗೆ ಸೇರಿದ ನಗರದ ಮೇಲ್ವರ್ಗದ ಜನರು ತಮ್ಮ ಚಟುವಟಿಕೆಗಳನ್ನು ಹಳ್ಳಿಗಳಿಗೂ ವಿಸ್ತರಿಸಿದರು. ಆ ಮೂಲಕ ತಮ್ಮ ಬಲವನ್ನು ಬೆಳೆಸಿಕೊಂಡು ಮೀಸಲಾತಿ ಬೇಡಿಕೆಗೆ ಮತ್ತಷ್ಟು ಬಲವನ್ನು ಪಡೆದುಕೊಂಡರು. ಅದೇ ಸಮಯದಲ್ಲಿ ಭಾರತದಾದ್ಯಂತ ಬ್ರಿಟಿಷ್ ವಿರೋಧಿ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಿತು. ದೊಡ್ಡ ಮಟ್ಟದ ಪ್ರಜಾ ದಂಗೆಗಳು ಸಿಡಿದವು. ಹಿಂದುಳಿದ ಜಾತಿಗಳ ಚಳುವಳಿಯೂ ಸ್ವಾತಂತ್ರ್ಯ ಹೋರಾಟದ ಜೊತೆ ಐಕ್ಯಗೊಂಡಿತು. 1937 ರಲ್ಲಿ ಪ್ರಜಾ ಒಕ್ಕೂಟ ಕಾಂಗ್ರೆಸ್‌ನೊಂದಿಗೆ ಸೇರಿದ ನಂತರ ಕಾಂಗ್ರೆಸ್ ಪಕ್ಷದಲ್ಲಿ ಹಿಂದುಳಿದ ಜಾತಿಗಳ ಬಲ ಹೆಚ್ಚಾಯಿತು. ಭಾರತದಾದ್ಯಂತ ನಡೆಯುತ್ತಿದ್ದ ಪ್ರಜಾ ಹೋರಾಟದ ಅಂಗವಾಗಿ ಕರ್ನಾಟಕದಲ್ಲೂ ಜನ ಹೋರಾಟ ತೀವ್ರಗೊಂಡಿತು. 1938 ರ ಏಪ್ರಿಲ್ 11 ರಂದು ಮೈಸೂರ್ ಕಾಂಗ್ರೆಸ್ ತನ್ನ ಮೊದಲ ಸಮಾವೇಶವನ್ನು ವಿದುರಾಶ್ವತದಲ್ಲಿ ನಡೆಸಿತು (ಅದುವರೆಗೂ ಮೈಸೂರು ಕಾಂಗ್ರೆಸ್ ಪಕ್ಷ ಬೊಂಬಾಯ್ ಸಂಸ್ಥಾನ ಕಾಂಗ್ರೆಸ್ ಪಕ್ಷದ ಅಂಗವಾಗಿತ್ತು). ಅಲ್ಲಿ ರಾಷ್ಟ್ರಧ್ವಜ ಹಾರಿಸುವಾಗ ನಡೆದ ಗಲಭೆಯಲ್ಲಿ ಗೋಲಿಬಾರ್ ಆಗಿ ಬಹುಪಾಲು ರೈತರುಗಳೇ ಆದ 32 ಜನ ಅಸುನೀಗಿದರು. ಇದನ್ನು ವಿರೋಧಿಸಿ ಹುಟ್ಟಿದ ಮಿಲಿಟೆಂಟ್ ಹೋರಾಟವನ್ನು ದಿಕ್ಕು ತಪ್ಪಿಸಿ ಸಾಮರಸ್ಯಕ್ಕೆ ಕೊಂಡೊಯ್ಯಲು ಗಾಂಧಿ, ಗಾಂಧಿವಾದಿಗಳು ಪ್ರಯತ್ನಿಸಿದರು. ಒಂದೆಡೆ ಹೋರಾಟ ತೀವ್ರ ಸ್ವರೂಪ ಪಡೆಯುವುದನ್ನು ಕಂಡ ಗಾಂಧಿವಾದಿಗಳು ಅದನ್ನು ಸಾಮರಸ್ಯದ ಹಾದಿಯಲ್ಲಿ ಕೊಂಡೊಯ್ಯಲು ಪ್ರಯತ್ನಿಸಿದರು. ಮತ್ತೊಂದೆಡೆ ಕಾಂಗ್ರೆಸ್ ಪಕ್ಷದಲ್ಲಿ ಬ್ರಾಹ್ಮಣೇತರರ ಬಲ ಹೆಚ್ಚುತ್ತಿರುವುದನ್ನು ಕಂಡು ಹೆದರಿದರು. ಉದಾಹರಣೆಗೆ ಗಾಂಧಿಯ ಕಾರ್ಯದರ್ಶಿಯಾಗಿದ್ದ ಮಹಾದೇವ ದೇಸಾಯಿ, ವಿದುರಾಶ್ವತದ ಘಟನೆಯ ಅಧ್ಯಯನಕ್ಕಾಗಿ ಮೈಸೂರಿಗೆ ಬಂದು ಒಂದು ವರದಿಯನ್ನು ಸಲ್ಲಿಸಿದರು. ಅದರಲ್ಲಿ ಅವರು "ಮೈಸೂರು ಕಾಂಗ್ರೆಸ್ಸಿನಲ್ಲಿ ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿರುವುದರಿಂದ ಅದು ಎಲ್ಲಾ ತರಹದ ಜನರನ್ನು ಪ್ರತಿನಿಧಿಸುವ ಸ್ವರೂಪದಲ್ಲಿಲ್ಲ" ಎಂದು ಹೇಳಿದ್ದಾರೆ. ನಿಜವಾಗಿ ರಾಷ್ಟ್ರೀಯ ಹೋರಾಟದಲ್ಲಿ ಕಂಡುಬಂದ ಬ್ರಾಹ್ಮಣ ವಿರೋಧಿ, ಜಾತಿ ವಿರೋಧಿ ಅಂಶಗಳನ್ನು ಕಂಡು ಈ ಗಾಂಧಿವಾದಿಗಳು ನಿಜವಾಗಿ ಹೆದರಿದ್ದರು. ಆದರೆ ಜನರ ಮಿಲಿಟೆಂಟ್ ಹೋರಾಟಗಳಿಗೆ ನಾಯಕತ್ವ ನೀಡಲು ಅಸಮರ್ಥರಾದ ಹಿಂದುಳಿದ ಜಾತಿಗಳ ನಾಯಕರು ಸಾಮರಸ್ಯದ ರಾಜಕೀಯದಲ್ಲಿ ಮುಳುಗಿ ಅರ್ಜಿ ಸಲ್ಲಿಸುವುದರಲ್ಲೂ, ಮಾತುಕತೆ ನಡೆಸುವುದರಲ್ಲೂ ಮುಳುಗಿದರು. ಒಟ್ಟಿನಲ್ಲಿ ಹೇಳುವುದಾದಲ್ಲಿ 1947 ರ ಮೊದಲು ಹಿಂದುಳಿದ ಜಾತಿಗಳ ಜಾತಿ ವಿರೋಧಿ ಚಳುವಳಿ ಮೀಸಲಾತಿ ರಾಜಕೀಯ ವನ್ನು ಕೇಂದ್ರವಾಗಿಟ್ಟುಕೊಂಡಿತ್ತು. ಅದು ದಲಿತರ ಬೇಡಿಕೆಗಳನ್ನು ಮುಂದಿಡಲಿಲ್ಲ. ದಲಿತ ಸಂಘಟನೆಗಳ ಜೊತೆ ಯಾವ ರೀತಿಯ ಜಂಟಿ ಚಟುವಟಿಕೆಗಳಿಗೆ ಮುಂದಾಗಲಿಲ್ಲ. ಇದು ಆಡಳಿತಾಂಗದಲ್ಲಿ ಮೇಲುಗೈ ಪಡೆದಿದ್ದ ಬ್ರಾಹ್ಮಣರ ಅಧಿಪತ್ಯವನ್ನು ಬದಲಿಸಿ ಹಿಂದುಳಿದ ಜಾತಿಗಳಿಗೆ ಗುರುತಿಸುವ ಮಟ್ಟಕ್ಕೆ ಅವಕಾಶ ಕಲ್ಪಿಸಿಕೊಟ್ಟ ಸುಧಾರಣಾವಾದಿ ಚಳುವಳಿಯಾಗಿತ್ತು. ಈ ಚಳುವಳಿಯ ನಾಯಕತ್ವವು ಬಹುಪಾಲು ಬಂಡವಾಳಶಾಹಿ ಸಿದ್ಧಾಂತವನ್ನೊಳಗೊಂಡ ಸಾಮರಸ್ಯವಾದಿ ನಾಯಕತ್ವವಾಗಿತ್ತು.

## ಆ. ಲೋಹಿಯವಾದ ಹಾಗೂ ಕರ್ನಾಟಕದಲ್ಲಿ ಅದರ ಪಾತ್ರ

1947 ರ ನಂತರ ಹಿಂದುಳಿದ ಜಾತಿಗಳ ಚಳುವಳಿಯು ಒಂದೆಡೆ ಸಂಸದೀಯ ಸುಧಾರಣವಾದಿಗಳಾದಂಥ ದೇವರಾಜ ಅರಸ್ ಹಾಗೂ ಮತಾಂಧ ಕಾಂಗ್ರೆಸ್ ನಾಯಕರು ಗಳಿಂದಲೂ, ಮತ್ತೊಂದೆಡೆ ಲೋಹಿಯಾವಾದಿಗಳಿಂದಲೂ ಮುನ್ನಡೆಸಲ್ಪಟ್ಟಿತು. ಲೋಹಿಯಾವಾದಿ ಗಳು ಸುಧಾರಣವಾದಿ ಧೋರಣೆಯನ್ನು ಹೊಂದಿದ್ದು ಜನರನ್ನು ಒಗ್ಗೂಡಿಸಿ ಹೋರಾಡುವ ಮೂಲಕ ಸುಧಾರಣೆಗಳನ್ನು ತರಲು ಪ್ರಯತ್ನಿಸಿದರು. ಲೋಹಿಯಾವಾದದ ಪ್ರಭಾವ ಕರ್ನಾಟಕದ ಪ್ರಜಾತಂತ್ರ ಶಕ್ತಿಗಳ ಮೇಲೆ ಹಾಗೂ ಬುದ್ದಿಜೀವಿಗಳ ಮೇಲೆ ಗಣನೀಯವಾಗಿದೆ. ಮಾರ್ಕ್ಸ್‌ವಾದಿ ಸಮಾಜವಾದಕ್ಕೆ ಬದಲಾಗಿ ಲೋಹಿಯಾ ಸಮಾಜವಾದದ ಪ್ರಭಾವ ಇಲ್ಲಿರುವ ಪುಟ್ಟ ಬಂಡವಾಳಶಾಹಿ ಪ್ರಜಾತಂತ್ರವಾದಿಗಳ ಮೇಲೆ ಹೆಚ್ಚಿದೆ.

ಉತ್ತರ ಪ್ರದೇಶದ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಸದಸ್ಯರಾಗಿದ್ದ ಡಾ. ರಾಮ ಮನೋಹರ ಲೋಹಿಯಾ, ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದಲ್ಲಿ ಕಮ್ಯುನಿಸ್ಟರ ಅಧಿಪತ್ಯ ವಿದೆಯೆಂಬ ಕಾರಣ ನೀಡಿ ಅದರಿಂದ ಹೊರಬಂದು ಪ್ರತ್ಯೇಕವಾಗಿ ಕಾರ್ಯಪ್ರವರ್ತ್ತರಾದರು. 1947 ರ ನಂತರ ಕಾಂಗ್ರೆಸ್ ಸಂಪರ್ಕವನ್ನು ಮುರಿದುಕೊಂಡು ಸೋಷಿಯಲಿಸ್ಟ್ ಪಕ್ಷವನ್ನು ಸ್ಥಾಪಿಸಿದರು. ಆ ಪಕ್ಷ 1952 ರಲ್ಲಿ ಎನ್.ಜಿ. ರಂಗ, ಆಚಾರ್ಯ ಕ್ರಿಪ್ಲಾನಿ ಮುಂತಾದವರ ನಾಯಕತ್ವದಲ್ಲಿದ್ದ ಕಿಸಾನ್ ಮಜ್ದೂರ್ ಪ್ರಜಾ ಪಕ್ಷದೊಂದಿಗೆ ಐಕ್ಯವಾಗಿ ಪ್ರಜಾ ಸೋಷಿಯಲಿಸ್ಟ್

ಪಕ್ಷವನ್ನು ಸ್ಥಾಪಿಸಿದರು. 1955 ರಲ್ಲಿ ಆ ಪಕ್ಷದ ಮಿತವಾದಿ ನಡವಳಿಕೆಯನ್ನು ವಿರೋಧಿಸಿ ಅದರಿಂದ ಹೊರಬಂದು ಮತ್ತೆ ಸೋಷಿಯಲಿಸ್ಟ್ ಪಕ್ಷವನ್ನು ಪ್ರಾರಂಭಿಸಿದರು. ಲೋಹಿಯರ ವಿಚಾರಗಳು, ಸಂಸದೀಯ ರಾಜಕೀಯದಲ್ಲಿ ಅಂತಹ ಪ್ರಭಾವವನ್ನಾಗಲೀ ಅಥವ ಬದಲಾವಣೆ ಯನ್ನಾಗಲೀ ತರಲಿಲ್ಲ.

ಭಾರತದಲ್ಲಿ ಜಾತಿ ಎನ್ನುವುದು ಶೋಷಣೆಗೂ, ಅಧಿಪತ್ಯಕ್ಕೂ ನೆರವಾಗುವ ಪ್ರಮುಖ ಸಾಧನ ಎಂಬ ವಿಚಾರವನ್ನು ಲೋಹಿಯಾರವರು ಹೊಂದಿದ್ದರು. ಆದರೆ ಅದು ಸಹಜವಾದದ್ದು ಎಂದೂ, ಸಮಾಜ ಜಾತಿ ವ್ಯವಸ್ಥೆಯನ್ನು ಸಹಜವಾಗಿ ಆಯ್ಕೆ ಮಾಡಿಕೊಂಡಿದೆ ಎಂದವರು ಹೇಳಿದರು. ಜಾತಿ ಆಧಾರದಲ್ಲಿರುವ ಶ್ರಮ ವಿಭಜನೆ, ಸಾಮಾಜಿಕ ಬೆಳವಣಿಗೆಗೆ ಸಹಾಯಕವಾಗುವುದೆಂದೂ, ಆದರೆ ಜಾತಿಗಳ ನಡುವೆ ಅಸಮಾನತೆ ಉಂಟಾಗಿರುವುದರಿಂದ ಅದು ಅಸಾಧ್ಯವಾಗಿದೆ ಎನ್ನುವುದು ಲೋಹಿಯಾರ ವಿಚಾರ. ಅಂದರೆ ಜಾತಿಗಳ ನಡುವೆ ಸಮಾನತೆ ಇದ್ದಲ್ಲಿ ಜಾತಿ ಆಧಾರಿತ ಕೆಲಸಗಳೆಲ್ಲವನ್ನು ಸಮಾನವಾಗಿ ಕಂಡು, ಅವುಗಳ ಫಲವನ್ನು ಸಮವಾಗಿ ಹಂಚಿಕೊಂಡಲ್ಲಿ ಸಾಮಾಜಿಕ ಬೆಳವಣಿಗೆ ಹೊಂದುತ್ತಿತ್ತು ಎನ್ನುವುದು ಅವರ ವಿಚಾರ. ಸಹಜವಾಗಿ ಮೇಲ್ಜಾತಿಗಳು ಸಮಾಜದಲ್ಲಿ ಮೇಲಾಧಿಪತ್ಯವನ್ನು, ಕೆಳಜಾತಿಗಳು ಕೆಳಮಟ್ಟವನ್ನು ಹೊಂದಿದ್ದವು, ಹಾಗೆ ಕೃತಕವಾಗಿ ಹೊಂದಿದ್ದ ಮೇಲಾಧಿಪತ್ಯದ ಸ್ಥಾನವನ್ನು ಹಲವಾರು ತರದ ಮೋಸ, ವಂಚನೆಗಳಿಂದ ಅವರು ಪಡೆದುಕೊಂಡಿದ್ದಾರೆ, ಕೆಳಜಾತಿಯ ಜನರು ಬದುಕನ್ನು ಕಳೆದುಕೊಂಡರು, ಮೇಲ್ವರ್ಗದವರು ಮೋಸಗೊಳಿಸುವವರಾದರು, ಜಾತಿ ಪದ್ಧತಿ ಇದನ್ನು ಮಾಡಿರುವುದರಿಂದ ಅದನ್ನು ನಿರ್ಮೂಲಿಸ ಬೇಕೆನ್ನುವುದು ಲೋಹಿಯಾರ ವಿಚಾರ.

ಜಾತಿಯ ಅಸಮಾನತೆಯನ್ನು, ದಮನ ದಬ್ಬಾಳಿಕೆಯನ್ನು ನಿರ್ಮೂಲಿಸಬೇಕೆಂಬ ಲೋಹಿಯಾರ ವಿಚಾರ ಸರಿಯಾಗಿದ್ದರೂ, ಜಾತಿ ವ್ಯವಸ್ಥೆಯ ಉಗಮದ ಬಗೆಗಿನ ಅವರ ವಿಚಾರಗಳು ಕಾಲ್ಪನಿಕವಾದುದು ಎಂದು ಸ್ಪಷ್ಟವಾಗತ್ತದೆ. ಮತ್ತೆ ಶ್ರಮ ವಿಭಜನೆಯನ್ನು ಅಡಿಪಾಯವಾಗಿ ಹೊಂದಿರುವ ಜಾತಿ ಪದ್ಧತಿ ಸಹಜವಾದುದು ಎಂದು, ಕೆಲ ವ್ಯಕ್ತಿಗಳು ಅಥವಾ ಒಂದು ಸಣ್ಣ ಗುಂಪಿನ ಮೋಸಗಾರಿಕೆಯಿಂದ ಜಾತಿ ಪದ್ಧತಿ ಅಸಮಾನವಾಗಿ ಬದಲಾವಣೆಯಾಯಿತೆಂದು ಹೇಳುವುದು ಜಾತಿ ಪದ್ಧತಿಯನ್ನು ಸಮರ್ಥಿಸಿದಂತೆಯೇ ಆಗುತ್ತದೆ. ವರ್ಗ ವೈರುಧ್ಯವನ್ನು ಮರೆಮಾಚಿ ದಿಕ್ಕು ತಪ್ಪಿಸುವ ಕೆಲಸವಾಗುತ್ತದೆ. ಯಾವುದೇ ಒಂದು ಸಾಮಾಜಿಕ ಆರ್ಥಿಕ ರಚನೆ, ಮನುಷ್ಯನ ಇಷ್ಟಕ್ಕನುಗುಣವಾಗಿರದೆ ಸಾಮಾಜಿಕ ಬೆಳವಣಿಗೆಯ ಹಂತದ ಸ್ವಭಾವಕ್ಕನು ಗುಣವಾಗಿ ಇರುತ್ತದೆ. ಆ ರೀತಿಯಲ್ಲಿ ಅದು ಸ್ವಯಂಪ್ರೇರಿತವಾಗಿ ನಡೆಯುತ್ತದೆಯೇ ಹೊರತು ಸಹಜವಾದುದ್ದಲ್ಲ. ಆದರೆ ಆ ಸಮಾಜದ ನೀತಿ ನಿಯಮಗಳು, ಸಾಮಾಜಿಕ ಕಟ್ಟುಪಾಡುಗಳು, ಸಂಸ್ಕೃತಿ, ಶಿಸ್ತು ಮುಂತಾದ ಮೇಲ್ರಚನೆಯ ಅಂಶಗಳು ಸಹಜವಾಗಿಯೂ, ಸ್ವಪ್ರೇರಿತವಾಗಿಯೂ ರೂಪುಗೊಳ್ಳುವುದಿಲ್ಲ. ಅವು ಆ ಸಮಾಜದ ಆಳುವ ವರ್ಗಗಳ ಅಗತ್ಯಗಳಿಗೆ ತಕ್ಕಂತೆ ಪ್ರಜ್ಞಾಪೂರ್ವಕವಾಗಿ ರಚಿಸಲ್ಪಡುತ್ತದೆ. ಆದುದರಿಂದ ಜಾತಿ ಪದ್ಧತಿಯ ಉಗಮಕ್ಕೆ ಅದನ್ನು ವ್ಯವಸ್ಥಿತಗೊಳಿಸಿ ಸಾಮಾಜಿಕ ವ್ಯವಸ್ಥೆಯೊಂದಿಗೆ ಸಕ್ರಮಗೊಳಿಸಿದ್ದು ಆಳುವ ವರ್ಗಗಳ ಅಗತ್ಯಗಳ ಆಧಾರದ ಮೇಲೆಯೇ. ಆದ್ದರಿಂದ ಈ ಎರಡು ಅಂಶಗಳನ್ನು ಒಗ್ಗೂಡಿಸಿ ನೋಡುವ ಮೂಲಕವೇ ಜಾತಿ ಪದ್ಧತಿ ಸಾಂಸ್ಥಿಕಗೊಂಡಿದ್ದರ ಕಾರಣವನ್ನು ನಾವು ಅರ್ಥಮಾಡಿಕೊಳ್ಳಬಹುದು.

ಜಾತಿ ನಿರ್ಮೂಲನೆಗೆ, ಮತ್ತಿತರ ಕಾಂಗ್ರೆಸ್ ನಾಯಕರುಗಳಂತಲ್ಲದೆ ಬಹುಸಂಖ್ಯಾತ ಜನರನ್ನು ಒಗ್ಗೂಡಿಸಿ ಹೋರಾಡಬೇಕೆಂದು ಲೋಹಿಯಾ ಹೇಳಿದರು. ಶೂದ್ರರು, ದಲಿತರು, ಆದಿವಾಸಿಗಳು, ಮಹಿಳೆಯರು, ಮುಸ್ಲೀಮರು ಮುಂತಾದವರನ್ನು ಒಳಗೊಂಡ ಚಳುವಳಿಯನ್ನು ಕಟ್ಟಬೇಕೆಂದು ಅವರು ಹೇಳಿದರು. ಆದರೆ ಆ ಹೋರಾಟ ಅಹಿಂಸೆಯ ಹಾದಿಯಲ್ಲಿ ಇರಬೇಕೆಂದು ಅವರು ಬಯಸಿದರು. ಮಿಲಿಟೆಂಟ್ ಆದ ಜನ ಹೋರಾಟಗಳನ್ನು ವಿರೋಧಿಸಿ, ಕಾನೂನು ಚೌಕಟ್ಟಿನಲ್ಲೇ ಹೋರಾಟದ ಸ್ವರೂಪ ಇರಬೇಕೆಂದು, ಅದು ಭಾರತ ಸಂವಿಧಾನವನ್ನು (1947 ರ ನಂತರ ) ಉಲ್ಲಂಘಿಸಬಾರದೆಂದು ಹೇಳಿದರು. ಅದರ ಮೂಲಕ ಆಳುವ ವರ್ಗಗಳು, ಜಾತಿ ಅಧಿಪತ್ಯ ಶಕ್ತಿಗಳು ಹಿಂಸೆಯ ಮೂಲಕ ತಮ್ಮ ಶೋಷಣೆಯನ್ನು ಜಾತಿ ಅಧಿಪತ್ಯವನ್ನು ಮುಂದುವರಿಸುತ್ತಿದ್ದಾರೆ ಎಂಬ ಸತ್ಯವನ್ನು, ದಮನಕ್ಕೆ ಒಳಗಾಗಿರುವ ಜನರಿಂದ ಮರೆಮಾಚಿ ಈ ಪ್ರಭುತ್ವದ ಮೇಲೂ, ಶೋಷಕ ವ್ಯವಸ್ಥೆಯ ಮೇಲೂ ಭ್ರಮೆಗಳನ್ನು ಸೃಷ್ಟಿಸಿದರು. ಅದರೊಂದಿಗೆ ಗಾಂಧಿಯನ್ನು "ರಾಷ್ಟ್ರಪಿತ" ಎಂದು ಕರೆದು ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಗಾಂಧಿ ನಿಜವಾಗಿ ಹೋರಾಡಿದರೆಂಬ ಭ್ರಮೆಗಳನ್ನು ಬಲಗೊಳಿಸಲು ನೆರವಾದರು.

ಹಿಂದು ಧರ್ಮದ ಬಗ್ಗೆ ಹಾಗೂ ಅದಕ್ಕೆ ಅಡಿಪಾಯವಾಗಿರುವ ಬ್ರಾಹ್ಮಣವಾದದ ಬಗೆಗಿನ ಲೋಹಿಯಾರವರ ವಿಚಾರಗಳು ಉದಾರವಾದಿ ಧೋರಣೆಯನ್ನು ಹೊದಿದ್ದವು. ಹಿಂದೂ ಧರ್ಮದ ಕೆಡುಕುಗಳಾದ ಜಾತಿ ಶ್ರೇಣೀಕರಣವನ್ನು ಮತ್ತು ಬ್ರಾಹ್ಮಣವಾದವನ್ನು ತೊಲಗಿಸಿ ಹಿಂದೂ ಧರ್ಮವನ್ನು ಸುಧಾರಿಸಬಹುದೆಂದು ಅವರು ನಂಬಿದ್ದರು. ವಸಿಷ್ಠರ ಬದಲಿಗೆ ವಾಲ್ಮೀಕಿಯನ್ನು, ಸೀತೆಗೆ ಬದಲಾಗಿ ದ್ರೌಪದಿಯನ್ನು ಹಿಂದೂ ಧರ್ಮದ ವಾರಸುದಾರರನ್ನಾಗಿಸಬೇಕೆಂದು ಹೇಳುತ್ತಾ ಜಾತಿ ದಬ್ಬಾಳಿಕೆಗೂ ಮಹಿಳಾ ಗುಲಾಮೀಯತೆಗೂ ಸೈದ್ಧಾಂತಿಕ ನೆಲೆಗಟ್ಟಾಗಿ ಹಿಂದೂ ಧರ್ಮ ಹಾಗೂ ಬ್ರಾಹ್ಮಣವಾದ ಇದೆ ಎನ್ನುವುದನ್ನು ನೋಡಲು ವಿಫಲರಾದರು. ಅದೇ ರೀತಿ ಹಿಂದಿ ಭಾಷಾ ಮೇಲಾಧಿಪತ್ಯದ ಬಗ್ಗೆಯೂ, ಭಾರತದ ಐಕ್ಯತೆಯ ಬಗ್ಗೆಯೂ ಅವರ ವಿಚಾರಗಳು ಭಾರತದ ಆಳುವ ವರ್ಗಗಳಿಗೆ ಸೇವೆ ಮಾಡುವ, ಉದಾರವಾದಿ ಬಂಡವಾಳಶಾಹಿ ಸಿದ್ಧಾಂತಗಳಾಗಿವೆ. ಜಾತಿ ದಬ್ಬಾಳಿಕೆಯ ವಿನಾಶಕ್ಕಾಗಿ ಈ ಕೆಳಗಿನ ಸೂತ್ರಗಳನ್ನು ಲೋಹಿಯಾರವರು ಮುಂದಿಟ್ಟರು.

1. ಜಾತಿ ಪದ್ಧತಿಯನ್ನು ನಿರ್ಮೂಲಿಸಲು ದಮನಕ್ಕೊಳಗಾದ ಜಾತಿಗಳಿಗೆ ರಾಜಕೀಯ, ಆಡಳಿತಾಂಗ, ಸೈನ್ಯ, ಕೈಗಾರಿಕೆ, ವಾಣಿಜ್ಯ ಮುಂತಾದ ಕ್ಷೇತ್ರಗಳಲ್ಲಿ ಶೇ. 60 ರಷ್ಟು ಮೀಸಲಾತಿ ನೀಡುವುದು

2. ಹಿಂದೂ ಧರ್ಮದಿಂದ ಜಾತಿಯ ಕಳಂಕವನ್ನು ತೊಲಗಿಸಿ ಪರಿಶುದ್ಧಗೊಳಿಸುವುದು

3. ಅಂತರ್ಜಾತಿ ವಿವಾಹಗಳನ್ನು ದೀರ್ಘಕಾಲದ ಯೋಜನೆಯನ್ನಾಗಿಯೂ, ಸಹಪಂಕ್ತಿ ಭೋಜನವನ್ನು ತಕ್ಷಣದ ಕಾರ್ಯಕ್ರಮವನ್ನಾಗಿಯೂ ಲೋಹಿಯಾರವರು ಮುಂದಿಟ್ಟರು. ರಾಜಕಿಯ ಆರ್ಥಿಕ ಕ್ಷೇತ್ರದಲ್ಲಿ ಆಡಳಿತ ವಿಕೇಂದ್ರೀಕರಣ, ಬೃಹತ್ ಕೈಗಾರಿಕೆ

ಮತ್ತು ದೊಡ್ಡಪ್ರಮಾಣದಲ್ಲಿ ಉತ್ಪಾದನೆ ಮುಂತಾದವುಗಳನ್ನು ವಿರೋಧಿಸುವುದು, ಕಿಸಾನ್ ಪಂಚಾಯ್ತಿಗಳಿಗೆ ಪ್ರಾಮುಖ್ಯತೆ ನೀಡುವುದು ಮುಂತಾದ ಯೋಜನೆಗಳನ್ನು ಮುಂದಿಟ್ಟರು. ಇದು ಹೆಚ್ಚು ಕಡಿಮೆ ಗಾಂಧಿಯ ರಾಮರಾಜ್ಯ, ಗ್ರಾಮರಾಜ್ಯದ ಯೋಜನೆಯಂತೆಯೇ ಇದೆ.

ಒಟ್ಟಾರೆ ಜಾತಿ ಪದ್ಧತಿಯ ಬಗ್ಗೆ ಲೋಹಿಯಾರವರ ವಿಚಾರಗಳು, ಅದನ್ನು ನಿರ್ಮೂಲಿಸುವ ಬಗೆಗಿನ ಅವರ ಯೋಜನೆಗಳು ಸುಧಾರಣವಾದಿ, ಕಾನೂನುಬದ್ಧವಾದಿ ಧೋರಣೆಗಳನ್ನೊಳಗೊಂಡ ಉದಾರವಾದಿ, ಬಂಡವಾಳಶಾಹಿ ನಿಲುವುಗಳಾಗಿದ್ದವು.

ಕರ್ನಾಟಕದಲ್ಲಿ ಲೋಹಿಯವಾದದ ಪ್ರವೇಶ 1950 ರ ದಶಕದಲ್ಲಿ ಕಾಗೋಡು ಹೋರಾಟದೊಂದಿಗೆ ಪ್ರಾರಂಭವಾಯಿತು. ಕಾಗೋಡು, ಶಿವಮೊಗ್ಗ ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿರುವ ಊರು. 1946 ರಲ್ಲಿ ಅಲ್ಲಿದ್ದ ದೊಡ್ಡ ಭೂಮಾಲೀಕರನ್ನು ವಿರೋಧಿಸಿ ಗೇಣಿ ರೈತರು 2/3 ರಂತೆ ಗೇಣಿ ನೀಡಬೇಕೆಂದು ಒತ್ತಾಯಿಸಿ ಹೋರಾಟವನ್ನು ಪ್ರಾರಂಭಿಸಿದರು. ಇದಕ್ಕೆ ಲೋಹಿಯಾ ಸೋಷಿಯಲಿಸ್ಟ್ ಮತ್ತು ಕೆಲವು ಕಾಂಗ್ರೆಸ್ಸಿಗರು ನಾಯಕತ್ವ ವಹಿಸಿದರು. ಅದರ ನಂತರ 1948 ರಲ್ಲಿ ಸಾಗರ ತಾಲೂಕಿನಲ್ಲಿ ದೀವಾರು ಜಾತಿಗೆ ಸೇರಿದ ಗೇಣಿ ರೈತರು ಬಿಟ್ಟಿ ಚಾಕರಿ ಪದ್ಧತಿಯನ್ನು ನಿರ್ಮೂಲಿಸಲು, ಭೂಮಾಲೀಕರ ದಬ್ಬಾಳಿಕೆಯನ್ನು ತಡೆಯಲು ಆಗ್ರಹಿಸಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿದರು. 1950-51 ರಲ್ಲಿ ಲೋಹಿಯಾ ಶಿವಮೊಗ್ಗಕ್ಕೆ ಭೇಟಿ ನೀಡಿ ಹೋರಾಟಗಾರರನ್ನು ಕಂಡು ಮಾತನಾಡಿದರು. ಹೋರಾಟ ಹೊಸ ಪ್ರದೇಶಗಳಿಗೆ ವಿಸ್ತರಣೆಯಾಗುವುದನ್ನು, ಹಾಗೂ ಉಗ್ರರೂಪ ಪಡೆಯಬಹುದೆಂದು ಹೆದರಿದ ಭೂಮಾಲೀಕರು ಸಾಮರಸ್ಯಕ್ಕೆ ಮುಂದೆ ಬಂದರು. ಅದರೊಂದಿಗೆ ಲೋಹಿಯಾರವರ ಸಾಮರಸ್ಯವಾದಿ ಧೋರಣೆಯ ಹೋರಾಟ ಕೊನೆಗೊಂಡಿದ್ದಕ್ಕೆ ಪ್ರಮುಖವಾದ ಕಾರಣವಾಗಿದೆ. ಹೋರಾಟವು ನಿರ್ದಿಷ್ಟ ಹಂತವನ್ನು ತಲುಪಿದ ನಂತರವೂ ಮಿಲಿಟೆಂಟ್ ಸ್ವರೂಪಕ್ಕೆ ಬದಲಾಗುವುದನ್ನು 'ಅಹಿಂಸಾವಾದಿ'ಯಾದ ಲೋಹಿಯರವರು ಇಷ್ಟಪಡಲಿಲ್ಲ. ಅದರಿಂದ ಭೂಮಾಲೀಕರು ಸಾಮರಸ್ಯಕ್ಕೆ ತಯಾರಾಗಿರುವುದನ್ನು ಅರಿತು ಆ ಸಂದರ್ಭವನ್ನು ಬಳಸಿ ಹೋರಾಟವನ್ನು ಕೊನೆಗೊಳಿಸಿದರು. ಆಂಧ್ರದ ತೆಲಂಗಾಣ ರೈತರ ಹೋರಾಟವು ಭೂಮಾಲೀಕರ ವಿರುದ್ಧವಾಗಿಯೂ, ನಿಜಾಮ್ ಸರ್ಕಾರದ ವಿರುದ್ಧವಾಗಿಯೂ ಸಶಸ್ತ್ರ ಹೋರಾಟವನ್ನು ಮುನ್ನಡೆಸಿದ ಅದೇ ಕಾಲದಲ್ಲಿ ಕಾಗೋಡು ಹೋರಾಟವು ನಡೆಯುತ್ತಿತ್ತು ಎಂಬುದನ್ನು ನಾವಿಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಕರ್ನಾಟಕದಲ್ಲಿ ಮತ್ತೊಂದು ತೆಲಂಗಾಣ ಸೃಷ್ಟಿಯಾಗುವುದನ್ನು ಲೋಹಿಯಾರವರು ಮತ್ತು ಇತರೆ ನಾಯಕರು ಬಯಸಲಿಲ್ಲ. ಆದರೂ ಹಿಂದುಳಿದ ಜಾತಿಗೆ ಸೇರಿದ ಗೇಣಿ ರೈತರು ಬಿಟ್ಟಿ ಚಾಕರಿಯಿಂದ ವಿಮೋಚನೆ ಪಡೆದರು. ಆದರೆ ದಲಿತ ಜಾತಿಗೆ ಸೇರಿದವರು ಮುಂದೆಯೂ ಬಿಟ್ಟಿಚಾಕರಿಯಲ್ಲಿ ಮುಂದುವರಿಯಬೇಕಾಯಿತು. ಗೇಣಿ ಪಾಲು ಇಳಿಸಲ್ಪಟ್ಟು, ಮನಬಂದಂತೆ ರೈತರನ್ನು ಹೊರಹಾಕುವುದು ನಿಂತಿತು. ಸುಧಾರಣವಾದಿ ನಾಯಕತ್ವದ ಕೆಳಗಿನ ಹೋರಾಟ ಸಾಮರಸ್ಯಕ್ಕೆ ಹೋದರೂ 1947 ರ ನಂತರ ನಡೆದ ಭೂಮಾಲೀಕ ವಿರೋಧಿ ಹೋರಾಟಗಳಲ್ಲಿ ಕಾಗೋಡು ಹೋರಾಟ ಪ್ರಮುಖವಾದುದು. ಈ ಚಳುವಳಿಯಿಂದ ಹೊರಹೊಮ್ಮಿದ ಹಲವಾರು ನಾಯಕರುಗಳು ನಂತರ ಸಂಸದೀಯ ಪಕ್ಷಗಳಲ್ಲಿ ಸೇರಿ ಆಳುವ ವರ್ಗದ ರಾಜಕೀಯದಲ್ಲಿ ಮುಳುಗಿದ್ದಾರೆ.

ಇದರ ನಂತರ ಬ್ರಾಹ್ಮಣೇತರ (ಹಿಂದುಳಿದ ಜಾತಿಗಳ) ಹೋರಾಟಗಳು ಮೀಸಲಾತಿಯನ್ನು ಕೇಂದ್ರೀಕರಿಸಿಕೊಂಡೇ ನಡೆದವು. 1947 ರನಂತರದ ನಾಗನಗೌಡ ಸಮಿತಿಯ ಶಿಫಾರಸ್ಸುಗಳ ಜಾರಿಗಾಗಿ, 1970 ರ ಹಾವನೂರ್ ಕಮೀಷನ್ ವರದಿಯನ್ನು ಜಾರಿಗೊಳಿಸುವಂತೆ ಒತ್ತಾಯಿಸಿ, 1980 ರಲ್ಲಿ ವೆಂಕಟಸ್ವಾಮಿ ವರದಿಯನ್ನು ವಿರೋಧಿಸಿ, 1990 ರ ಮಂಡಲ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಕೋರಿ ಸಾರ್ವತ್ರಿಕ ಹೋರಾಟಗಳು ನಡೆದವು.

ಒಟ್ಟಾರೆ ಕರ್ನಾಟಕದಲ್ಲಿ ಹಿಂದುಳಿದ ಜಾತಿಗಳ ಜಾತಿ ವಿರೋಧಿ ಚಳುವಳಿ ಬಹುಪಾಲು ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕೋರುವ ಹೋರಾಟಗಳಾಗಿವೆ. ಹಳ್ಳಿ ಜನರನ್ನೂ ಒಳಗೊಂಡಂತೆ ಪ್ರಜಾ ಚಳುವಳಿಗೂ ನಡೆದಿವೆ. ಕೆಲ ಸಂದರ್ಭಗಳಲ್ಲಿ ಪ್ರಜ್ಞಾಪೂರ್ವಕವಾಗಿ ಭೂಮಾಲೀಕ ವಿರೋಧಿ ಅಂಶಗಳನ್ನೊಳಗೊಂಡಿದ್ದರೂ ಜಾತಿ ನಿರ್ಮೂಲನೆಯನ್ನು ತಮ್ಮ ಗುರಿಯನ್ನಾಗಿ ಮಾಡಿಕೊಂಡಿರಲಿಲ್ಲ. ಆದರೂ ಶಿಕ್ಷಣ ಮತ್ತು ಆಡಳಿತಾಂಗದಲ್ಲಿ ಬ್ರಾಹ್ಮಣರ ಅಧಿಪತ್ಯವನ್ನು ಕಡಿಮೆಗೊಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿರುವ ಇದು ಸುಧಾರಣಾವಾದಿ ಪ್ರಜಾತಾಂತ್ರಿಕ ಚಳುವಳಿಯಾಗಿದೆ.

## ಇ. ದಲಿತ ಚಳುವಳಿ ಉಗಮದ ಹಿನ್ನಲೆ

1920 ರ ದಶಕದಲ್ಲಿ ದಲಿತ ಚಳುವಳಿಯು ಒಂದು ಪ್ರಜ್ಞಾಪೂರ್ವಕವಾಗಿ ಸಂಘಟಿತವಾದ ಸಾಮಾಜಿಕ, ರಾಜಕೀಯ ಚಳುವಳಿಯಾಗಿ ನಾಗಪುರ್(ವಿದರ್ಭ), ಹೈದ್ರಾಬಾದ್, ಮದ್ರಾಸ್ ಸಂಸ್ಥಾನ ಹಾಗೂ ಮೈಸೂರು ಪ್ರದೇಶಗಳಲ್ಲಿ ಪ್ರಾರಂಭವಾಯಿತು. 1920 ರ ದಶಕವು ಅಂತರರಾಷ್ಟ್ರೀಯ ಮಟ್ಟದಲ್ಲೂ, ಭಾರತದ ಮಟ್ಟದಲ್ಲೂ ದೊಡ್ಡ ಕ್ರಾಂತಿಕಾರಿ ದಂಗೆಗಳನ್ನು ಕಂಡ ಕಾಲವಾಗಿತ್ತು. ರಷ್ಯದ ಬೋಲ್ಷೆವಿಕ್ ಕ್ರಾಂತಿಯ ಜಯ ಪ್ರಪಂಚದಾದ್ಯಂತ ಶೋಷಣೆ ಗೊಳಗಾದ ಜನರ ಮೇಲೆ ಪ್ರಭಾವ ಬೀರಿ ಹೋರಾಟಗಳು ತೀವ್ರ ಸ್ವರೂಪವನ್ನು ಪಡೆಯುತ್ತಿದ್ದವಯ. ಭಾರತದ ಸ್ವಾತಂತ್ರ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರ ಹೆಚ್ಚಾಯಿತು. ರಾಷ್ಟ್ರ ವಿಮೋಚನಾ ಹೋರಾಟದೊಂದಿಗೆ ಕಾರ್ಮಿಕ ರೈತರ ಹೋರಾಟವು ಸಂಘಟಿತ ಚಳುವಳಿಯಾಗಿ ಬೆಳೆಯುತ್ತಿತ್ತು. ಇದೇ ಕಾದಲ್ಲಿ ದಮನಕ್ಕೊಳಗಾದ ಬ್ರಾಹ್ಮಣೇತರರ ಚಳುವಳಿ ಹಾಗೂ ದಲಿತ ಚಳುವಳಿಗಳು ಪ್ರಾರಂಭವಾದವು. ಮತ್ತೊಂದೆಡೆ ಹೆಚ್ಚುತ್ತಿರುವ ತೀವ್ರ ಸ್ವರೂಪದ ಹೋರಾಟಗಳನ್ನು ಕಂಡು ಹೆದರಿದ ಬ್ರಿಟಿಷ್ ವಸಾಹತುಶಾಹಿಗಳು ಕಾಂಗ್ರೆಸ್ ಪಕ್ಷ ಹಾಗೂ ಗಾಂಧಿ ನಾಯಕತ್ವವನ್ನು ಮುಂದಕ್ಕೆ ತಂದು ಹೋರಾಟವನ್ನು ಅಹಿಂಸಾ ಹಾದಿಯಲ್ಲಿ ದಿಕ್ಕುತಪ್ಪಿಸಲು ಪ್ರಾರಂಭಿಸಿದರು. ಹಿಂದು ಮುಸ್ಲಿಂರ ಮಧ್ಯೆ ಇದ್ದ ಮತ ಬೇಧಗಳನ್ನು ತೀವ್ರಗೊಳಿಸಿ ಅವರ ಜಂಟಿ ಹೋರಾಟವನ್ನು ಬಲಹೀನಗೊಳಿಸುವ ಉದ್ದೇಶದಿಂದ ಬೇರೆ ಬೇರೆ ಚಳುವಳಿಗಳನ್ನು ರೂಪಿಸಲು ಅನುಕೂಲ ಮಾಡಿಕೊಟ್ಟರು. ಕೋಮುವಾದಿ

ಸಂಘಟನೆಗಳಾದ ಹಿಂದು ಮಹಾಸಭೆ 1915 ರಲ್ಲೂ, ಆರ್‌ಎಸ್‌ಎಸ್ 1925 ರಲ್ಲೂ ಪ್ರಾರಂಭಿಸಲ್ಪಟ್ಟು ಹಿಂದೂ ರಾಷ್ಟ್ರೀಯವಾದಕ್ಕೆ ಸಂಘಟನಾ ಸ್ವರೂಪ ಕೊಡಲಾಯಿತು.

ಇಂತಹ ಚಾರಿತ್ರಿಕ ಹಂತದಲ್ಲಿ ಅಸ್ಪೃಶ್ಯತೆ ನಿರ್ಮೂಲನೆಯ ಘೋಷಣೆಯನ್ನು ಕೇಂದ್ರವಾಗಿರಿಸಿ ಕೊಂಡು ಸ್ಫೋಟಗೊಂಡ ದಲಿತ ಚಳುವಳಿಯು ರಾಜಕೀಯವಾಗಿ ಪ್ರಾಮುಖ್ಯತೆಯನ್ನು ಹೊಂದಿದೆ. ಚರಿತ್ರೆಯಲ್ಲಿ ಮೊಟ್ಟ ಮೊದಲ ಬಾರಿಗೆ ದಲಿತರು ತಮ್ಮದೇ ಆದ ಪ್ರತ್ಯೇಕ ಸಂಘಟನೆಯನ್ನು ಕಟ್ಟಿಕೊಂಡು ಹೋರಾಡಲು ಪ್ರಾರಂಭಿಸಿದರು. ಇದು ದಕ್ಷಿಣ ಭಾರತದಲ್ಲೂ, ಪಶ್ಚಿಮ ಭಾರತದಲ್ಲೂ ಮುಖ್ಯವಾಗಿ ಮರಾಠಿ ಭಾಷೆಯ ಜನರಲ್ಲಿ ದೊಡ್ಡ ಚಳುವಳಿಯಾಗಿ ಸ್ಫೋಟ ಗೊಂಡಿತು. ಮಹಾರಾಷ್ಟ್ರದಲ್ಲಿ ಬಲವಾಗಿ ಪ್ರಾರಂಭವಾದ ಈ ಚಳುವಳಿಯ ನೇತೃತ್ವವನ್ನು ಡಾ. ಅಂಬೇಡ್ಕರ್‌ರವರು ವಹಿಸಿದರು.

## ಈ. ಅಂಬೇಡ್ಕರ್ ಚಳುವಳಿ ಹಾಗೂ ಅಂಬೇಡ್ಕರ್‌ವಾದ

ಭಾರತದಲ್ಲೇ ಬಲವಾದ ದಲಿತ ಚಳುವಳಿ ನಾಗಪುರ್, ವಿದರ್ಭ ಪ್ರದೇಶದಲ್ಲಿ ಪ್ರಾರಂಭವಾಗಲು ಸಾಮಾಜಿಕ, ಆರ್ಥಿಕ ಕಾರಣಗಳಿವೆ. ಈ ಪ್ರದೇಶವು ಸಮೃದ್ಧ ರೇಶ್ಮೆ ಬೆಳೆಗೆ, ಅದರ ವ್ಯಾಪಾರಕ್ಕೆ ಹೆಸರುವಾಸಿಯಾಗಿದ್ದು ಹಲವಾರು ರೇಶ್ಮೆ ಮಿಲ್ಲುಗಳನ್ನು ಹೊಂದಿದ್ದ ಪ್ರದೇಶವಾಗಿತ್ತು. ಈ ರೇಶ್ಮೆ ಮಿಲ್ಲುಗಳಲ್ಲಿನ ಬಹುತೇಕ ಕಾರ್ಮಿಕರು ಮಹರ್ ಜಾತಿಗೆ ಸೇರಿದ ದಲಿತರಾಗಿದ್ದರು. ಈ ಪ್ರದೇಶದಲ್ಲಿನ ಕೃಷಿ ಉತ್ಪಾದನೆಯನ್ನು ವಾಣಿಜ್ಯೀಕರಣಗೊಳಿಸಿದರ ಫಲವಾಗಿ ಹಳ್ಳಿಗಳಲ್ಲಿ ಆಚರಣೆಯಲ್ಲಿದ್ದ ಬಲೂತೆದಾರಿ ಪದ್ಧತಿ ಬಲಹೀನಗೊಂಡಿತು. ಇದರ ಪರಿಣಾಮವಾಗಿ ಮಹರುಗಳು ಸಾಪೇಕ್ಷವಾಗಿ ಸ್ವತಂತ್ರರಾಗಿ ಪಟ್ಟಣಗಳಿಗೆ ಸ್ಥಳಾಂತರಗೊಂಡರು ಹಾಗೂ ಗಣನೀಯ ಸಂಖ್ಯೆಯಲ್ಲಿದ್ದ ಮಹರುಗಳು ಸಣ್ಣ ರೈತರಾಗಿಯೂ, ನೇಕಾಕಾರರಾಗಿಯೂ ಆಗಿದ್ದರು. ಇನ್ನು ಕೆಲವರು ಶ್ರೀಮಂತ ವ್ಯಾಪಾರಿಗಳಾಗಿಯೂ, ಹೆಚ್ಚು ಭೂಮಿ ಹೊಂದಿದ ರೈತರಾಗಿಯೂ ಇದ್ದರು. ಬ್ರಿಟಿಷ್ ಸೈನ್ಯದಲ್ಲಿ ಒಂದು ಭಾಗ ಮಹರ್‌ಗಳು ಸೇವೆ ಸಲ್ಲಿಸುತ್ತಿದ್ದರಿಂದ ಬ್ರಿಟಿಷ್‌ರವರ ಬಂಡವಾಳಶಾಹಿ ಪದ್ಧತಿಗಳ ಪರಿಚಯ ಅವರಿಗಿತ್ತು. ಇದರೊಂದಿಗೆ ಆಂಗ್ಲ ಶಿಕ್ಷಣದ ಅವಕಾಶ ಪಡೆದ ಒಂದು ಸಣ್ಣ ಸ್ತರ ಕೂಡ ಇತ್ತು. ಇವೆಲ್ಲವೂ ಸೇರಿ ಒಂದು ಬಲವಾದ ಪ್ರಜಾ ಚಳುವಳಿ ರೂಪುಗೊಳ್ಳಲು ಅದಕ್ಕೆ ನಾಯಕತ್ವ ನೀಡಲು ಅಗತ್ಯವಾದ ಪುಟ್ಟ ಬಂಡವಾಳಶಾಹಿ ಶಕ್ತಿಗಳ ಬೆಳವಣಿಗೆಗೆ ಕಾರಣವಾಯಿತು. ಅದರೊಂದಿಗೆ ಜ್ಯೋತಿಬಾ ಫುಲೆಯವರ ಸತ್ಯ ಶೋಧಕ ಸಮಾಜದ ಬ್ರಾಹ್ಮಣೇತರ ಚಳುವಳಿ ಇದಕ್ಕೆ ಪೂರಕವಾದ ಅಂಶವಾಗಿತ್ತು.

1920 ರ ದಶಕದ ಕೊನೆಯ ಭಾಗದಲ್ಲಿ ಅಂಬೇಡ್ಕರವರ ರಾಜಕೀಯ ಪ್ರವೇಶವಾಯಿತು. ಅದುವರೆಗೆ ದಲಿತ ಚಳುವಳಿಯಲ್ಲಿದ್ದ ಹಿಂದೂಮತದೊಂದಿಗೆ ಐಕ್ಯವಾಗುವ ವಿಚಾರಕ್ಕೆ ವಿರುದ್ಧವಾಗಿ, ಅಂಬೇಡ್ಕರ್‌ರವರ ರಾಜಕೀಯ, ಬ್ರಾಹ್ಮಣವಾದ, ಹಿಂದೂ ಮತವನ್ನು ವಿರೋಧಿಸಿ ದಲಿತ ಸ್ವಾಯತ್ತತೆಯನ್ನು ಮುಂದಿಟ್ಟಿತು. ಅಸ್ಪೃಶ್ಯತೆ ವಿರೋಧಿ ಹೋರಾಟಗಳಲ್ಲಿ ಅಂಬೇಡ್ಕರ್ ಸತತವಾಗಿ ತೊಡಗಿಸಿಕೊಂಡರು. 1927 ರಲ್ಲಿ ಮಹಾಡ್ ಸತ್ಯಾಗ್ರಹ (ಮಹದ್‌ನಗರದ ಸಾರ್ವಜನಿಕ ಕೊಳವನ್ನು ದಲಿತರಿಗೆ ತೆರೆಯಲು ಆಗ್ರಹಿಸಿ ಹೋರಾಟ) ಮನುಸ್ಮೃತಿ ದಹನ, ಅಮರಾವತಿ ದೇವಸ್ಥಾನದ ಪ್ರವೇಶಕ್ಕಾಗಿ ಹೋರಾಟ, ನಾಸಿಕ್ ಹೋರಾಟ ಮುಂತಾದವುಗಳು ಸತತವಾಗಿ ನೆಡದವು. ದಲಿತ ಭೂಹೀನ, ರೈತಕೂಲಿಗಳಿಗಾಗಿ ಎರಡು ಬಗೆಯ ಯೋಜನೆಯನ್ನು ಮುಂದಿಟ್ಟು ಅವರು ಹೋರಾಡಿದರು. ಮೊದಲನೆಯದಾಗಿ ಮಹರ್ ವತನ್ ಎಂಬ ಬಿಟ್ಟಿಚಾಕರಿ ಪದ್ಧತಿಯನ್ನು ನಿರ್ಮೂಲಿಸಲು, ಎರಡನೆಯದಾಗಿ ಗೋಮಾಳ, ಅರಣ್ಯ ಭೂಮಿ ಮುಂತಾದ ಸರ್ಕಾರಿ ಭೂಮಿಗಳನ್ನು ಭೂಹೀನ ದಲಿತರಿಗೆ ಹಂಚುವಂತೆ ಒತ್ತಾಯಿಸಿದರು. 1936 ರಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿದರು. ಇದರ ನಾಯಕತ್ವದಲ್ಲಿ ಜವಳಿ ಕಾರ್ಮಿಕರ ಹೋರಾಟ ನಡೆಯಿತು. ಖೋಟ್ ಭೂಮಾಲೀಕರನ್ನು ವಿರೋಧಿಸಿದ ಗೇಣಿ ರೈತರ ಹೋರಾಟಕ್ಕೆ ನಾಯಕತ್ವ ನೀಡಿ ಖೋಟಿ ಗೇಣಿ ಪದ್ಧತಿಯನ್ನು ನಿರ್ಮೂಲನೆಗೊಳಿಸಿ ಗೇಣಿದಾರರಿಗೆ ಭೂಮಿಯನ್ನು ದಕ್ಕಿಸಿಕೊಡಲು ಹೋರಾಡಿದರು. ಇದರ ಮಧ್ಯೆ 1930 ರ ದಶಕದಲ್ಲಿ ಭಾರತದೊಳಗೆ ಭಾರತದ ಜನರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳಲು ಸ್ಥಾಪಿಸಲ್ಪಟ್ಟ ಸಂವಿಧಾನ ಸಭೆಯ ಬಗ್ಗೆ ಮಾತುಕತೆ ನಡೆಸಲು ದುಂಡು ಮೇಜಿನ ಸಮಾವೇಶವನ್ನು ಕರೆಯಲಾಯಿತು. ಮೊದಲ ಸಮಾವೇಶದಲ್ಲಿ ದಮನಕ್ಕೊಳಗಾದ ಸಮುದಾಯದ (depressed class) ಪ್ರತಿನಿಧಿಯಾಗಿ ಅಂಬೇಡ್ಕರವರು, ಚನ್ನೈಯವರಾದ ಎಂ.ಎಸ್. ಶ್ರೀನಿವಾಸನ್‌ರವರು ಪಾಲ್ಗೊಂಡರು. ಆ ಸಮಾವೇಶದಲ್ಲಿ ಅಸ್ಪೃಶ್ಯರಿಗೆ ಮೀಸಲಾತಿ ಹಾಗೂ ರಕ್ಷಣೆಯೊಂದಿಗೆ ವಯಸ್ಕರ ಮತದಾನದ ಹಕ್ಕು ನೀಡಬೇಕೆಂಬುದು ಅಂಬೇಡ್ಕರ್‌ರವರ ಬೇಡಿಕೆಯಾಗಿತ್ತು. ಕಾಂಗ್ರೆಸ್ ಪಕ್ಷವು ಗಾಂಧಿಯು ಆ ಸಮಾವೇಶದಲ್ಲಿ ಇದ್ದುದರಿಂದ (ಅಸಹಕಾರ ಚಳುವಳಿ ನಡೆಯುತ್ತಿದ್ದರಿಂದ) ಎರಡನೆಯ ದುಂಡು ಮೇಜಿನ ಸಮಾವೇಶ ಕರೆಯಲಾಯಿತು. ಅದರಲ್ಲಿ ಅಂಬೇಡ್ಕರ್‌ರವರಿಗೂ ಗಾಂಧಿಗೂ ತೀವ್ರ ವಾಗ್ವಾದ ನಡೆಯಿತು. ಮುಖ್ಯವಾಗಿ ಅಸ್ಪೃಶ್ಯರನ್ನು ಯಾರು ಪ್ರತಿನಿಧಿಸುವುದು ಎಂಬುದರ ಬಗ್ಗೆ, ಅಸ್ಪೃಶ್ಯರಿಗೆ ಪ್ರತ್ಯೇಕ ಮೀಸಲು ಕ್ಷೇತ್ರ ನೀಡುವ ಬಗ್ಗೆ ವಾಗ್ವಾದ ನಡೆಯಿತು. ವಯಸ್ಕ ಮತದಾನದ ಹಕ್ಕು ಸಾಧ್ಯವಿಲ್ಲ ಎಂಬುದನ್ನು ಅರಿತು ಅಂಬೇಡ್ಕರ್ ತಮ್ಮ ನಿಲುವನ್ನು ಬದಲಾಯಿಸಿಕೊಂಡು ಪ್ರತ್ಯೇಕ ಕ್ಷೇತ್ರದ ಬೇಡಿಕೆಗೆ ಬೆಂಬಲ ನೀಡಿದರು. ಗಾಂಧಿಯು ಅಪ್ಪಟವಾದ ಮೇಲ್ಜಾತಿ ಹಿಂದೂಗಳ ಪ್ರತಿನಿಧಿಯಾಗಿ ವಾದಿಸಿದರು. ತನ್ನ ಪ್ರಾಣ ಇರುವವರೆಗೂ ಅಸ್ಪೃಶ್ಯರಿಗೆ ಪ್ರತ್ಯೇಕ ಕ್ಷೇತ್ರದ ಬೇಡಿಕೆಯನ್ನು ವಿರೋಧಿಸಿ ಹೋರಾಡುವುದಾಗಿ ಆ ಸಮಾವೇಶದಲ್ಲಿ ಸಾರಿ ಹೇಳಿದರು. ಬ್ರಿಟಿಷ್ ಸರ್ಕಾರದಿಂದ ಜನರನ್ನು ಮರೆಮಾಡಲು ತರಲ್ಪಟ್ಟ ಸಣ್ಣ ಬದಲಾವಣೆಯನ್ನೂ ಕೂಡ ಅಸ್ಪೃಶ್ಯರಿಗೆ ಹೋಗಲು ಬಿಡಬಾರದು ಎಂಬುದರಲ್ಲಿ ಗಾಂಧಿ ದೃಢವಾಗಿದ್ದರು. "ಅಸ್ಪೃಶ್ಯರು ಇಚ್ಛಿಸಿದರೆ ಇಸ್ಲಾಂ ಧರ್ಮಕ್ಕೋ ಅಥವಾ ಕ್ರೈಸ್ತಧರ್ಮಕ್ಕೊ ಮತಾಂತರಗೊಳ್ಳುವುದನ್ನು ಬೇಕಾದರೆ ಸಹಿಸಿಕೊಳ್ಳುತ್ತೇನೆ ಆದರೆ ಅವರು ಹಿಂದು ಧರ್ಮದೊಳಗೆ ಇದ್ದುಕೊಂಡು ಪ್ರತ್ಯೇಕ ಕ್ಷೇತ್ರ ಕೇಳುವುದರಿಂದ ಹಳ್ಳಿಗಳಲ್ಲಿ ಉಂಟಾಗಿರುವ ವಿಂಗಡಣೆ ಪರಿಣಾಮವಾಗಿ ಹಿಂದೂಧರ್ಮಕ್ಕೆ ಉಂಟಾಗಲಿರುವ ಸ್ಥಿತಿಯನ್ನು ನನ್ನಿಂದ ಮಾತ್ರ

ಸಹಿಸಿಕೊಳ್ಳಲು ಸಾಧ್ಯವಿಲ್ಲ. ಅಸ್ಪೃಶ್ಯರಿಗೆ ರಾಜಕೀಯ ಹಕ್ಕಿನ ಬಗ್ಗೆ ಮಾತಾಡುವವರಿಗೆ ಭಾರತದ ಬಗ್ಗೆಯೂ, ಭಾರತದ ಸಮಾಜ ಹೇಗೆ ಕಟ್ಟಲ್ಪಟ್ಟಿದೆ ಎಂಬುದರ ಬಗ್ಗೆಯೂ ಗೊತ್ತಿಲ್ಲ. ಆದ್ದರಿಂದ ನಾನೊಬ್ಬನೇ ಈ ಬೇಡಿಕೆಯನ್ನು ವಿರೋಧಿಸಬೇಕಾದ ಸ್ಥಿತಿ ಉಂಟಾದರೂ ನನ್ನ ಪ್ರಾಣ ಇರುವವರೆಗೂ ನಾನು ವಿರೋಧಿಸುವೆನು" ಎಂಬುದನ್ನು ಬಹಳ ಗಟ್ಟಿಯಾಗಿ ಹೇಳುತ್ತೇನೆ ಎಂದು ಆ ಸಮಾವೇಶದಲ್ಲಿ ಹೇಳಿದರು.

ಅದಕ್ಕೆ ಸಂಬಂಧಿಸಿದಂತೆ ರಾಮ್ ಸಿ ಮ್ಯಾಕ್‌ಡೊನಾಲ್ಡ್ ತೀರ್ಪಿನ ಪ್ರಕಾರ ಅಲ್ಪಸಂಖ್ಯಾತರು ಗಳಿಗೆ, ಅಸ್ಪೃಶ್ಯರನ್ನೂ ಒಳಗೊಂಡಂತೆ ಪ್ರತ್ಯೇಕ ಕ್ಷೇತ್ರಗಳನ್ನು ನೀಡಲು ಶಿಫಾರಸ್ಸು ಮಾಡಿತು. ಅದನ್ನು ವಿರೋಧಿಸಿ ಒಂದು ಕಡೆ ಗಾಂಧಿ ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು. ಮತ್ತೊಂದೆಡೆ ಕಾಂಗ್ರೆಸ್ ಪಕ್ಷ, ಹಿಂದೂಮಹಾ ಸಭಾ ಮುಂತಾದ ಕೋಮುವಾದಿ ಸಂಘಟನೆಗಳು ಪ್ರತ್ಯೇಕ ಕ್ಷೇತ್ರದ ಬೇಡಿಕೆಯನ್ನು ಕೈಬಿಡಲು ಎಂ.ಸಿ. ರಾಜ, ಗವಾಯಿ ಮುಂತಾದ ದಲಿತ ನಾಯಕರನ್ನು ಒಪ್ಪಿಸಿದರು. ಅಲ್ಲದೆ ಅಸ್ಪೃಶ್ಯರಿಗೆ ಸಮಾನತೆ ಕೊಡಲು, ಬೇಕಾದರೆ ಬ್ರಾಹ್ಮಣರಿಗೆ ಸಮನಾದ ಅಂತಸ್ತು ನೀಡುವುದಾಗಿ ಆಸೆಯ ಮಾತುಗಳನ್ನು ಆಡಿದರು. ಅಸ್ಪೃಶ್ಯರ 'ಉದ್ಧಾರ'ಕ್ಕಾಗಿ ಕೆಲವು ಯೋಜನೆಗಳನ್ನು ರೂಪಿಸಿ ಅದನ್ನು ಜಾರಿಗೊಳಿಸಲು ಪ್ರಾರಂಭಿಸಿದರು.

ಗಾಂಧಿಯ ಉಪವಾಸ ಸತ್ಯಾಗ್ರಹವು ಅಸ್ಪೃಶ್ಯರನ್ನು ಸರಿ ಸಮಾನವಾಗಿ ಪರಿಗಣಿಸಬೇಕೆಂದು ಮೇಲ್ಜಾತಿ ಹಿಂದುಗಳನ್ನು ಒತ್ತಾಯಿಸುವ ಸಲುವಾಗಿ ಹಿಂದೂಧರ್ಮದಿಂದ ಅಸ್ಪೃಶ್ಯತೆಯ ಕಳಂಕವನ್ನು ತೊಲಗಿಸಲು ನಡೆಸಲ್ಪಟ್ಟಿದ್ದೆಂದೂ ಪ್ರಚಾರ ಮಾಡಿದರು. ಆದರೆ ಅಂಬೇಡ್ಕರ್ ಅದನ್ನು ದಲಿತರ ವಿರುದ್ಧವಾಗಿ ನಡೆಸಲ್ಪಟ್ಟ ಸತ್ಯಾಗ್ರಹವೆಂದು ಪರಿಗಣಿಸಿದರು. ಪ್ರತ್ಯೇಕ ಕ್ಷೇತ್ರದ ಬೇಡಿಕೆಯನ್ನು ಕೈಬಿಡುವಂತೆ ಬ್ಲ್ಯಾಕ್‌ಮೇಲ್ ಮಾಡಲು, ದಲಿತರಿಗೆ ರಾಜಕೀಯ ಹಕ್ಕು ದೊರಕದಂತೆ ಮಾಡಲು ನಡೆಸಲ್ಪಟ್ಟ ಸತ್ಯಾಗ್ರಹವೆಂಬುದು ಅವರ ಅಭಿಪ್ರಾಯವಾಗಿತ್ತು. ಈ ತರಹದ ರಾಜಕೀಯ ಬೆಳವಣಿಗೆಯ ಹಿನ್ನಲೆಯಲ್ಲಿ ಅಂಬೇಡ್ಕರ್ ಮತ್ತು ಗಾಂಧಿಯ ಮಧ್ಯೆ ಸಾಮರಸ್ಯ ಉಂಟಾಗಿ ಒಂದು ಒಪ್ಪಂದಕ್ಕೆ ಬರಲಾಯಿತು. ಇದನ್ನು ಪೂನಾ ಒಪ್ಪಂದವೆಂದು ಕರೆಯಲಾಗುವುದು. ಅಂಬೇಡ್ಕರ್ ಪ್ರತ್ಯೇಕ ಕ್ಷೇತ್ರದ ಬೇಡಿಕೆಯನ್ನು ಕೈಬಿಟ್ಟು ಜನಸಂಖ್ಯೆ ಆಧಾರದಲ್ಲಿ ದಲಿತರಿಗೆ ಮೀಸಲಾತಿ ಕೊಡಬೇಕೆಂಬ ನಿಲುವಿಗೆ ರಾಜಿ ಮಾಡಿಕೊಂಡರು. ಆದರೆ ಇದನ್ನು ಸಂಬಂಧಿಸಿ ನಡೆದ ಬೆಳವಣಿಗೆಗಳು ದಲಿತ ಸಮಸ್ಯೆಯ ಕುರಿತು ಗಾಂಧಿಗೂ ಅಂಬೇಡ್ಕರ ರಿಗೂ ಮಧ್ಯೆ ಇದ್ದ ಭಿನ್ನಾಭಿಪ್ರಾಯವನ್ನು ಸ್ಪಷ್ಟವಾಗಿ ಚಿತ್ರಿಸಿತು. ಅಂಬೇಡ್ಕರ್ ದಲಿತರ ರಾಜಕೀಯ ಹಕ್ಕುಗಳ (ಸುಧಾರಣವಾದಿ) ಬಗ್ಗೆ ಮಾತನಾಡಿದರೆ, ಗಾಂಧಿ ಮೇಲ್ಜಾತಿ ಹಿಂದೂಗಳಿಂದ ದಲಿತರು ರಕ್ಷಿಸಲ್ಪಡಬೇಕೆಂದು ಹೇಳಿದರು. ಹಾಗೆ ಅಂಬೇಡ್ಕರ್ ತಾನು ದಲಿತರ ಏಕೈಕ ಪ್ರತಿನಿಧಿ ಎಂಬುದನ್ನು ಸಾಬೀತುಪಡಿಸಿದರು.

ಈ ಪ್ರಜಾ ಹೋರಾಟಗಳು ದಲಿತ ಸಮುದಾಯದ ಮಿಲಿಟೆಂಟ್ ಯುವಕರಲ್ಲಿ ಉತ್ಸಾಹವನ್ನು ತುಂಬಿದ್ದು ಮಾತ್ರವಲ್ಲದೆ ಒಟ್ಟಾರೆ ಸಮಾಜದಲ್ಲಿ ದೊಡ್ಡ ಜಾಗೃತಿಯನ್ನು ಮೂಡಿಸಿದವು. ಈ ಹೋರಾಟಗಳಿಗೆ ಸಾಮಾನ್ಯವಾಗಿ ಪ್ರಗತಿಪರ ಪ್ರಜಾತಂತ್ರ ಶಕ್ತಿಗಳು ಬೆಂಬಲವೂ ಇತ್ತು. ಅಂಬೇಡ್ಕರ್ ದಲಿತ ಜಾತಿಯವರ ಮೇಲೆ ನಡೆಸಲ್ಪಡುವ ದಬ್ಬಾಳಿಕೆಗೆ ಉಳಿದ ಎಲ್ಲಾ ಜಾತಿಗಳ ಜನರೂ (ಹಿಂದುಳಿದ ಜಾತಿಗಳನ್ನೂ ಒಳಗೊಂಡಂತೆ) ಕಾರಣ ಎಂದು ಹೇಳಿದರೂ ಬ್ರಾಹ್ಮಣರಿಗೂ, ಇನ್ನುಳಿದ ಹಿಂದುಳಿದ ಜಾತಿಗಳ ನಡುವಿರುವ ಬೇಧವನ್ನು ಅರ್ಥಮಾಡಿಕೊಂಡಿದ್ದರು. ಮರಾಠ ಹಾಗೂ ಇನ್ನಿತರ ಜಾತಿಗಳು ಹಳ್ಳಿ ಮಟ್ಟದಲ್ಲಿ ದಮನಿಸುವ ಜಾತಿಗಳಾಗಿದ್ದರೂ ಬ್ರಾಹ್ಮಣರು ಒಟ್ಟು ಸಮಾಜವನ್ನು ದಮನಿಸುವ ಜಾತಿಯೆಂದು ವಿಂಗಡಿಸಿ ಹೇಳುತ್ತಾ ದಲಿತ ಶೂದ್ರ ಐಕ್ಯತೆಯ ಬಗ್ಗೆ ಒತ್ತಿ ಹೇಳಿದರು. ಈ ನಿಟ್ಟಿನಲ್ಲಿ ಅಂಬೇಡ್ಕರ್ ಫುಲೆಯವರ ವಿಚಾರಗಳನ್ನು ಹೊಂದಿದ್ದರು. ಅಂಬೇಡ್ಕರ್ ನಾಯಕತ್ವದ ಹೋರಾಟಗಳಲ್ಲಿ ತಕ್ಷಣದ ಬೇಡಿಕೆಗಳು ಈಡೇರದೆ ಹೋದುದಕ್ಕೆ, ದಲಿತ ಶೂದ್ರ ಐಕ್ಯತೆಯನ್ನು ಸಾಧಿಸದೆ ಹೋದುದಕ್ಕೆ ಹಲವಾರು ಕಾರಣಗಳಿವೆ. ಒಂದೆಡೆ ಊಳಿಗಮಾನ್ಯ ಶಕ್ತಿಗಳ ತೀವ್ರವಾದ ವಿರೋಧ, ಅದಕ್ಕೆ ಬ್ರಿಟಿಷ್ ವಸಾಹತುಶಾಹಿಗಳ ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲ, ಮತ್ತೊಂದೆಡೆ ದಲಿತ ಹಾಗೂ ಬ್ರಾಹ್ಮಣೇತರ ಚಳುವಳಿಗಳ ಬಲಹೀನತೆ ಹಾಗೂ ಕ್ರಾಂತಿಕಾರಿ ಚಳುವಳಿಗಳ ಬಲಹೀನತೆ ಪ್ರಮುಖವಾದ ಕಾರಣಗಳಾಗಿದ್ದವು. ಆದರೆ ದಲಿತ ಸಮಸ್ಯೆಯನ್ನು ಭಾರತದ ರಾಜಕೀಯ ರಂಗದಲ್ಲಿ ಮುಂದಕ್ಕೆ ತಂದು ಸಾವಿರಾರು ವರ್ಷಗಳಿಂದ ದಮನಕ್ಕೊಳಗಾದ ದಲಿತ ಜನಾಂಗಕ್ಕೆ ಜಾಗೃತಿ ಮೂಡಿಸಿ ಜಾತಿ ದಬ್ಬಾಳಿಕೆಯಿಂದ ವಿಮೋಚನೆಗೊಂಡು ಸ್ವಾಭಿಮಾನದಿಂದ ತಲೆಯೆತ್ತಿ ಬಾಳುವುದಕ್ಕೆ ಲಕ್ಷಾಂತರ ಜನರನ್ನು ಹೋರಾಟದಲ್ಲಿ ತೊಡಗಿಸುವಲ್ಲಿ ಈ ಹೋರಾಟ ಯಶಸ್ವಿಯಾಯಿತು.

ಅಂಬೇಡ್ಕರ್‌ರವರ ಮೊದಲ ಹಂತದ ರಾಜಕೀಯ ಜೀವನ 1940 ಕ್ಕೆ ಕೊನೆಗೊಂಡಿತು. ಈ ಹಂತದಲ್ಲಿ ಅವರು ಸಾಮಾನ್ಯವಾಗಿ ಪ್ರಗತಿಪರ ಪ್ರಜಾತಾಂತ್ರಿಕ ಪಾತ್ರವನ್ನು ವಹಿಸಿದರು. ಅವರ ಎರಡನೆಯ ಹಂತದ ರಾಜಕೀಯ ಜೀವನ 1941 ರಿಂದ ಮುಖ್ಯವಾಗಿ 1941 ರ ಜುಲೈ ತಿಂಗಳ ರಾಷ್ಟ್ರೀಯ ರಕ್ಷಣಾ ಆಯೋಗದ ಸದಸ್ಯರಾಗಿ ನೇಮಿಸಲ್ಪಟ್ಟಂದಿನಿಂದ ಪ್ರಾರಂಭವಾಯಿತು. 1941 ರ ಫೆಬ್ರವರಿಯಲ್ಲಿ (ಎರಡನೆಯ ಮಹಾಯುದ್ಧ ನಡೆಯುತ್ತಿದ್ದಾಗ) ವೈಸರಾಯ್‌ನನ್ನು ಸಂಪರ್ಕಿಸಿ ದಲಿತರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡರು. ಅದನ್ನು ಅವರು ಒಪ್ಪಿಕೊಂಡ ನಂತರ ಹಲವಾರು ಊರುಗಳಿಗೆ ಭೇಟಿ ನೀಡಿ ಬ್ರಿಟಿಷ್ ಸೈನ್ಯಕ್ಕೆ ದಲಿತರನ್ನು ಸೇರಿಸಿದರು. ನಂತರ 1942 ರಲ್ಲಿ ವೈಸರಾಯ್ ಸದನದಲ್ಲಿ ಕಾರ್ಮಿಕ ಮಂತ್ರಿಯಾಗಿ ಪದವಿ ಸ್ವೀಕರಿಸಿ ಬ್ರಿಟಿಷ್ ವಸಾಹತುಶಾಹಿಗಳಿಗೆ ಸೇವೆ ಸಲ್ಲಿಸಿದರು. ಅಂಬೇಡ್ಕರ್‌ರವರಿಂದ ಕೆಲವು ಕಾರ್ಮಿಕ ಕಲ್ಯಾಣ ಕಾನೂನುಗಳು ತರಲ್ಪಟ್ಟಿದ್ದರೂ ಅಂದು ಸಾಮ್ರಾಜ್ಯಶಾಹಿಯ ಯುದ್ಧದ ಅಗತ್ಯಗಳಿಗಾಗಿ ಕಾರ್ಮಿಕರನ್ನು ಶೋಷಿಸುವುದೇ ಬ್ರಿಟಿಷರ ನೀತಿಯಾಗಿದ್ದು ಅದಕ್ಕೆ ಅಂಬೇಡ್ಕರ್ ನೆರವಾದರು. ಸ್ವತಂತ್ರ ಕಾರ್ಮಿಕ ಪಕ್ಷವನ್ನು ವಿಸರ್ಜಿಸಿ ಪರಿಶಿಷ್ಟ ಜಾತಿಗಳ ಒಕ್ಕೂಟವನ್ನು ಸ್ಥಾಪಿಸಿ ಬ್ರಿಟಿಷರೊಂದಿಗೆ ಮಾತುಕತೆ ನಡೆಸಿದರು. 1947 ರ ನಂತರ ಭಾರತದ ಆಳುವ ವರ್ಗಗಳಿಗೆ ಅಗತ್ಯವಾದ ಸಂವಿಧಾನವನ್ನು ರಚಿಸಲು ಕರಡು ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಆಳುವ ವರ್ಗಗಳಿಗೆ ಸೇವೆ ಸಲ್ಲಿಸಿದರು. ನೆಹರುರವರ ಸದನದಲ್ಲಿ ಕಾನೂನು ಮಂತ್ರಿಗಳಾಗಿ ಕಾರ್ಯನಿರ್ವಹಿಸಿದರು. ಆ ಕಾಲದಲ್ಲಿ ತೆಲಂಗಾಣದಲ್ಲಿ ನಡೆಯುತ್ತಿದ್ದ ಸಶಸ್ತ್ರ ರೈತ

ಹೋರಾಟವನ್ನು ದಮನಿಸಲು ನೆಹರು ಸರ್ಕಾರ ರಕ್ತದ ಹೊಳೆಯನ್ನೇ ಹರಿಸಿದಾಗ ಮೌನವಾಗಿ ಉಳಿದು ಅದಕ್ಕೆ ಸಹಕರಿಸಿದರು. 1951 ರಲ್ಲಿ ಹಿಂದೂ ಕಾನೂನು ಮಸೂದೆಯನ್ನು ಮುಂದಿಟ್ಟಾಗ ಅದನ್ನು ಹಿಂದು ಕೋಮುವಾದಿ ಶಕ್ತಿಗಳು, ಭೂಮಾಲೀಕ ಜಾತಿ ಅಧಿಪತ್ಯ ಶಕ್ತಿಗಳು ವಿರೋಧಿಸಿದರು. ಅವರೊಂದಿಗೆ ಕೈಗೂಡಿಸಿದ ನೆಹರು, ಮಸೂದೆಯನ್ನು ಬೆಂಬಲಿಸದಿದ್ದರಿಂದ ಬೇಸತ್ತು ಅಂಬೇಡ್ಕರ್‌ರವರು ಮಂತ್ರಿಮಂಡಲಕ್ಕೆ ರಾಜೀನಾಮೆ ನೀಡಿದರು.

ಮೇಲಿನ ಎಲ್ಲ ಘಟನೆಗಳು 1947 ರ ಮೊದಲು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೂ ನಂತರ ಭಾರತದ ದಲ್ಲಾಳಿ ಆಳುವ ವರ್ಗಗಳಿಗೂ ಸೇವೆ ಸಲ್ಲಿಸಿರುವುದನ್ನು ಸೂಚಿಸುತ್ತದೆ. 1942 ಕ್ಕೆ ಮೊದಲಿನ ಕೆಲವು ಸಂದರ್ಭಗಳಲ್ಲಿ ಬ್ರಿಟಿಷ್ ಸರ್ಕಾರದೊಡನೆ ಸಾಮರಸ್ಯವಾಗಿ ನಡೆದುಕೊಂಡಿ ದ್ದರೂ ಕಾಂಗ್ರೆಸ್ಸಿನೊಡನೆ ಕಾರ್ಯತಂತ್ರದ ಐಕ್ಯತೆಯನ್ನು ರಚಿಸಿಕೊಂಡಿದ್ದರೂ ಜನರ ಪರವಾಗಿ ನಿಂತು ಕಾರ್ಯ ನಿರ್ವಹಿಸಿದ ಅಂಬೇಡ್ಕರ್ ಹಾಗೂ ಅವರ ನಾಯಕತ್ವದಲ್ಲಿನ ದಲಿತ ಚಳುವಳಿ 1941 ರ ನಂತರ ಆಳುವ ವರ್ಗಗಳಿಗೆ ಸೇವೆ ಸಲ್ಲಿಸಲು ಕಾರಣವೇನು. ಇದಕ್ಕೆ ಹಲವಾರು ಕಾರಣಗಳನ್ನು ನೀಡಬಹುದಾದರೂ ಪ್ರಧಾನವಾಗಿ ಅಂಬೇಡ್ಕರ್ ಹಾಗೂ ಅವರ ಚಳುವಳಿಯು ಪೆಟ್ಟಿ ಬೂರ್ಜ್ವಾ ವರ್ಗದ ಹಿನ್ನಲೆಯದ್ದಾಗಿತ್ತು ಎನ್ನುವುದೇ ಪ್ರಧಾನ ಕಾರಣವಾಗಿದೆ. ಸಾಮಾನ್ಯವಾಗಿ ಅಂಬೇಡ್ಕರ್ ಚಳುವಳಿಯು 1941 ಕ್ಕೆ ಮೊದಲು ಮತ್ತು ನಂತರದಲ್ಲಿ ದಲಿತ ಜನರ ಎಲ್ಲ ವರ್ಗಗಳನ್ನು ಪ್ರತಿನಿಧಿಸುವ ಕೆಲವು ಬೇಡಿಕೆಗಳನ್ನು ಮುಂದಿಟ್ಟಿದ್ದರೂ (ಉದಾಹರಣೆಗೆ ಅಸ್ಪೃಶ್ಯತೆಯ ವಿನಾಶ, ಮೀಸಲಾತಿ ಮುಂತಾದವುಗಳು) ಪ್ರಧಾನವಾಗಿ ದಲಿತ ಪುಟ್ಟ ಬಂಡವಾಳಶಾಹಿ ವರ್ಗದ ಹಿತಾಸಕ್ತಿಗಳನ್ನು ಅವು ಪ್ರತಿನಿಧಿಸಿದವು. 1941 ಕ್ಕೆ ಮೊದಲು ಜನರನ್ನು ಒಗ್ಗೂಡಿಸಿ ಹೋರಾಡಿದಾಗಲೂ ದಲಿತ ಜನರ ಇನ್ನಿತರ ವರ್ಗಗಳ ಪ್ರಜಾತಾಂತ್ರಿಕ ಬೇಡಿಕೆಗಳನ್ನು ಒಳಗೊಂಡಿದ್ದರೂ 1941 ರ ನಂತರ ಆಳುವ ವರ್ಗಗಳಿಗೆ ಸೇವೆ ಮಾಡಿ ಕೆಲವು ಸವಲತ್ತುಗಳನ್ನು ಪಡೆಯಲು ಸಾಮರಸ್ಯ ಮಾಡಿಕೊಂಡಾಗಲೂ ಪುಟ್ಟ ಬಂಡವಾಳಶಾಹಿ ವರ್ಗ ಹಿತಾಸಕ್ತಿಯೇ ಅದರ ಅಡಿಪಾಯವಾಗಿತ್ತು. 1941 ರ ನಂತರ ಅಂಬೇಡ್ಕರ್‌ರವರ ಕಾರ್ಯ ಚಟುವಟಿಕೆಗಳಲ್ಲಿ ಬದಲಾವಣೆ ಉಂಟಾಗಿದ್ದಕ್ಕೆ ಹಲವಾರು ಪ್ರಕ್ರಿಯೆಗಳ ಪ್ರಭಾವವು ಸಹಕಾರಿಯಾಗಿರಬಹುದು. ನಿರ್ದಿಷ್ಟವಾಗಿ ಬ್ರಾಹ್ಮಣವಾದಿ ಹಿಂದೂವಾದಿ ಬಂಡವಾಳವಾದವನ್ನು ವಿರೋಧಿಸಿ ದಲಿತ ಶೂದ್ರರ ಐಕ್ಯರಂಗವನ್ನು ಸ್ಥಾಪಿಸಲು ಸಾಧ್ಯವಾಗದೇ ಹೋದದ್ದು, ಬ್ರಾಹ್ಮಣವಾದಿ, ಹಿಂದೂ ಕೋಮುವಾದಿ ಶಕ್ತಿಗಳಿಗೆ ರಾಜ್ಯಾಧಿಕಾರ ಪಡೆಯುವ ಕಾಲ ಸಮೀಪಿಸಿದ್ದರಿಂದ ಸಾಧ್ಯವಾದಷ್ಟೂ ಸವಲತ್ತುಗಳನ್ನು ಪಡೆಯಲು ಪ್ರಯತ್ನ, ಕಮ್ಯುನಿಸ್ಟ್ ಚಳುವಳಿಯೊದಿಗೆ ಜಂಟಿ ಕಾರ್ಯ ಚಟುವಟಿಕೆ ಮಾಡಲು ಆಗದೇ ಹೋದದ್ದು, ಹಿಂದೂ ಕೋಮುವಾದಿ ಶಕ್ತಿಗಳ (ಗಾಂಧಿಯೂ ಒಳಗೊಂಡಂತೆ) ಪ್ರಭಾವ ಹೆಚ್ಚಾದದ್ದು, ಬ್ರಾಹ್ಮಣೇತರ ಚಳುವಳಿ ಸ್ಥಗಿತಗೊಂಡಿದ್ದು ಮುಂತಾದವುಗಳನ್ನು ಗುರುತಿಸಬಹುದು. ಅದೇನೆ ಇದ್ದರೂ ಆಳುವ ವರ್ಗಗಳಿಗೆ ಸೇವೆ ಮಾಡಿ ಅದರಿಂದ ಒಂದಷ್ಟು ಸವಲತ್ತು ಪಡೆಯುವುದೆನ್ನುವುದು ಮಧ್ಯಮ ವರ್ಗದ ಕಾರ್ಯಸಾಧುವಾದ ಅವಕಾಶವಾದವೇ ಆಗುತ್ತದೆ.

ಆದುದರಿಂದ ಅಂಬೇಡ್ಕರ್‌ರವರ ಮೊದಲ ಕಾಲಘಟ್ಟದ ಹೋರಾಟದ ಅಂಶಗಳನ್ನು ಜನಪರ ಪ್ರಜಾತಾಂತ್ರಿಕ ಪಾತ್ರವನ್ನು ಎತ್ತಿಹಿಡಿಯಬೇಕು. ಆದರೆ ಎರಡನೆ ಹಂತದಲ್ಲಿ ಅವರ ಕಾರ್ಯ ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ ಅರದಲ್ಲಿರುವ ಆಳುವ ವರ್ಗದ ಪರವಾದ ಪ್ರಜಾತಂತ್ರ ವಿರೋಧಿ ನಿಲುವುಗಳನ್ನು ತಿರಸ್ಕರಿಸಬೇಕು.

ಸೈದ್ಧಾಂತಿಕವಾಗಿ ಅಂಬೇಡ್ಕರ್ ಜಾತಿ ಪದ್ಧತಿಯನ್ನು, ಬ್ರಾಹ್ಮಣವಾದವನ್ನು, ಹಿಂದೂ ಮತವನ್ನು ತೀವ್ರವಾಗಿ ವಿರೋಧಿಸಿದರು. ಜಾತಿಯ ಬಗೆಗಿನ ಅವರ ವಿಚಾರಗಳು ಯಾಂತ್ರಿಕ ದೃಷ್ಟಿಕೋನದಿಂದ ಕೂಡಿದ್ದವಾಗಿದ್ದವು. ಆದರೂ ಜಾತಿಗಳ ಉಗಮದ ಬಗ್ಗೆ, ಸಮಾಜದಲ್ಲಿ ಅದರ ಪಾತ್ರದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿದ ಮುಂಚೂಣಿ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಅವರಲ್ಲಿ ಚಾರಿತ್ರಿಕ ಭೌತಿಕವಾದ, ಮಾರ್ಕ್ಸ್‌ವಾದದ ದೃಷ್ಟಿಕೋನ ಇಲ್ಲದಿರುವುದರಿಂದ ಜಾತಿಯ ಆರ್ಥಿಕ ತಳಪಾಯವನ್ನು ನೋಡಲು ವಿಫಲರಾದರು. ಜಾತಿ ಪದ್ಧತಿಗೆ ಹಿಂದೂಮತವೇ ಆಧಾರ ಎಂದು ಹೇಳುವ ಮೂಲಕ ಜಾತಿಯನ್ನು ಸಾಂಸ್ಕೃತಿಕವಾಗಿ, ಮತೀಯವಾಗಿ ವ್ಯಾಖ್ಯಾನಿಸಲು ಪ್ರಯತ್ನಿಸಿದರು. ಜಾತಿ ವೈರುಧ್ಯಗಳನ್ನು ಸಾಮಾಜಿಕ ಗುಂಪುಗಳ ನಡುವಿನ ವೈರುಧ್ಯಗಳೆಂದು ಹೇಳಿದರು. ಜಾತಿ ದಬ್ಬಾಳಿಕೆಗೆ, ಶೋಷಣೆಗೆ ಸಾಧನವಾಗಿ ಕಾರ್ಯನಿರ್ವಹಿಸು ತ್ತದೆಂದು ಹೇಳಿದರು. ಅದಕ್ಕಿರುವ ಆರ್ಥಿಕ ನೆಲೆಗಳನ್ನು ತಿರಸ್ಕರಿಸಿದ್ದರಿಂದ ಸರಿಯಾದ ನಿಲುವಿಗೆ ಬರಲಾಗದೆ ಕಾಲ್ಪನಿಕವಾದ ನಿಲುವನ್ನು ತಳೆದರು. ಜಾತಿ ಪದ್ಧತಿಗೆ ಬ್ರಾಹ್ಮಣವಾದವೇ ಮುಖ್ಯ ಕಾರಣವೆಂದು ಸರಿಯಾಗಿ ಹೇಳಿದರೂ ಅದನ್ನು ಸಾಮಾಜಿಕ ಸಾಂಸ್ಕೃತಿಕ ವಿಷಯವಾಗಿ ನೋಡಿದ್ದರಿಂದ ಅವರ ಜಾತಿ ಪದ್ಧತಿಗೆ ಅವರ ವಿರೋಧವು ಸೋಲನ್ನೊಪ್ಪಿತು. ಅಂಬೇಡ್ಕರ್‌ರವರು ವಿಚಾರವಾದಿಗಳಾಗಿದ್ದರು. ಹಿಂದೂಮತ, ಮೂಢನಂಬಿಕೆಗಳನ್ನು ಸಕ್ರಮಗೊಳಿಸಿದ ಮತ ಎಂದು ಟೀಕಿಸಿದರು. ಆದರೂ ಸಾಮಾಜಿಕ ನೈತಿಕತೆಯನ್ನು ಸ್ಥಾಪಿಸಲು ಮತ ಅವಶ್ಯವೆಂದು ಭಾವಿಸಿದರು. ಕೊನೆಯಲ್ಲಿ ಭ್ರಮನಿರಸಗೊಂಡ ಅಂಬೇಡ್ಕರರು ಬೌದ್ಧ ಮತವನ್ನು ಸೇರಿ ದಲಿತರೆಲ್ಲರೂ ಬೌದ್ಧ ಮತಕ್ಕೆ ಸೇರಬೇಕೆಂದು ಕರೆ ಕೊಟ್ಟರು.

ಬಂಡವಾಳಶಾಹಿ ಉದಾರವಾದ, ಕಾಲ್ಪನಿಕ ಸಮಾಜವಾದ ಮುಂತಾದ ಪಾಶ್ಚಾತ್ಯ ವಿಚಾರಗಳಿಂದ ಅಂಬೇಡ್ಕರ್ ಪ್ರಭಾವಿತರಾಗಿದ್ದರು. ಕೈಗಾರೀಕರಣವು ದೇಶದ ಪ್ರಗತಿಗೆ ಅಗತ್ಯವೆಂಬುದು ಅವರ ವಿಚಾರವಾಗಿತ್ತು. ಗಾಂಧಿಯ ರಾಮರಾಜ್ಯವು ಪ್ರತಿಗಾಮಿಯಾದುದೆಂದು, ಗಾಂಧಿಯ ಕಾಲ ಕಗ್ಗತ್ತಲ ಯುಗವೆಂದು ಟೀಕಿಸಿದರು. 1947 ರ ಮೊದಲು ಬ್ರಿಟಿಷ್ ಆಡಳಿತದಲ್ಲಿ ಸಾಮ್ರಾಜ್ಯಶಾಹಿ ಪ್ರಧಾನ ಶತ್ರು ಎಂಬ ವಿಚಾರವನ್ನು ಅವರು ಒಪ್ಪಲಿಲ್ಲ. ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ವಿಮೋಚನಾ ಹೋರಾಟವನ್ನು ಅವರು ಒಪ್ಪಿದರೂ ಸ್ವತಂತ್ರ ಭಾರತದಲ್ಲಿ ದಲಿತರಿಗೆ ಒಂದಷ್ಟು ಅಧಿಕಾರ ಸಿಗಬಹುದೆಂದು ಅವರು ಅಂದುಕೊಂಡರೂ ಬ್ರಿಟಿಷ್ ಸಾಮ್ರಾಜ್ಯಶಾಹಿ ಪ್ರಧಾನ ಶತ್ರುವೆಂಬುದನ್ನು ಒಪ್ಪಲಿಲ್ಲ. ಎಲ್ಲಾ ಶತ್ರುಗಳನ್ನು ಏಕಕಾಲದಲ್ಲಿ ವಿರೋಧಿಸಿ ಹೋರಾಡಲು ಸಾಧ್ಯವಿಲ್ಲವೆಂದೂ, ಆದುದರಿಂದ 2000

ವರ್ಷಗಳಿಂದ ಮೇಲ್ಜಾತಿ ಹಿಂದೂಗಳಿಂದ ನಡೆಸಲ್ಪಡುತ್ತಿರುವ ನಿರಂಕುಶತ್ವದ ದಬ್ಬಾಳಿಕೆಯನ್ನು ವಿರೋಧಿಸಿ ಸಮಾನತೆ ಪಡೆಯುವುದೇ ನಮ್ಮ ಮೊದಲ ಕೆಲಸ ಎಂದು ಬಹಿರಂಗವಾಗಿ ಹೇಳಿದರು. ಜಾತಿಯ ವಿರೋಧವನ್ನು, ಸಾಮ್ರಾಜ್ಯಶಾಹಿ ವಿರೋಧವನ್ನು ಪರಸ್ಪರ ವಿರುದ್ಧವಾಗಿ ನಿಲ್ಲಿಸುವ ಯಾಂತ್ರಿಕ ದೃಷ್ಟಿಕೋನ ಇದಾಗಿತ್ತು. ಸಾಮ್ರಾಜ್ಯಶಾಹಿಗಳಿಗೂ ಜಾತಿಯಾಧಿಪತ್ಯ ಹೊಂದಿರುವ ಭೂಮಾಲೀಕ ಶಕ್ತಿಗಳಿಗೂ ನಡುವಿರುವ ಸಂಬಂಧವನ್ನು ನೋಡುವಲ್ಲಿ ಅವರು ವಿಫಲರಾದರು.

ಜಾತಿ ನಿರ್ಮೂಲನೆಯನ್ನು ಅಂಬೇಡ್ಕರ್‌ರವರು ದಲಿತರ ದೃಷ್ಟಿಯಿಂದಲೇ ನೋಡಿದರು. ತಮ್ಮನ್ನು ಎಲ್ಲಾ ದಮನಕ್ಕೊಳಗಾದ ಜಾತಿಗಳ ಪ್ರತಿನಿಧಿಯಾಗಿ ಅವರು ನೋಡಲಿಲ್ಲ. ತಾನು ದಲಿತರ ಪ್ರತಿನಿಧಿ ಮಾತ್ರವೆಂದು ಅವರು ಹೇಳಿಕೊಂಡರು. ಆದ್ದರಿಂದ ದಮನಕ್ಕೊಳಗಾದ ಎಲ್ಲಾ ಜಾತಿಗಳ ಜನರ ವಿಮೋಚನೆಗೆ ಕಾರ್ಯಕ್ರಮವನ್ನವರು ಮುಂದಿಡಲಿಲ್ಲ. ಜಾತಿಯ ಹುಟ್ಟು ಹಾಗೂ ಇರವು ಹಿಂದೂ ಮತದಲ್ಲಿ ಇರುವುದಾಗಿ ಅವರು ಅಂದುಕೊಂಡಿದ್ದರಿಂದ ಹಿಂದೂ ಮತವನ್ನು ತಿರಸ್ಕರಿಸಿ ಜಾತಿಯಿಲ್ಲದ ಮತ್ತೊಂದು ಮತವನ್ನು ಅಪ್ಪಿಕೊಳ್ಳುವ ತೀರ್ಮಾನವನ್ನು ತೆಗೆದುಕೊಂಡರು. ಜಾತಿ ಪದ್ಧತಿಗಿರುವ ಆರ್ಥಿಕ ಆಧಾರವನ್ನು ಅವರು ನೋಡಲಿಲ್ಲವಾದ್ದರಿಂದ ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಾತ್ರ ಪರಿಹಾರಗಳನ್ನು ಮುಂದಿಟ್ಟರು. ಮದುವೆ ಪದ್ಧತಿಯೇ ಜಾತಿ ಪದ್ಧತಿಗೆ ಆಧಾರವೆಂದು ಅವರು ನೋಡಿದ್ದರಿಂದ ಅಂತರ್ಜಾತಿ ಮದುವೆಗಳ ಮೂಲಕ ಜಾತಿಯನ್ನು ನಿರ್ಮೂಲಿಸಬಹುದೆಂಬುದನ್ನು ಪರಿಹಾರವಾಗಿ ಮುಂದಿಟ್ಟರು.

ವರ್ಗ ವೈರುಧ್ಯಗಳನ್ನು, ಅವುಗಳ ನಡುವಿನ ಹೋರಾಟವನ್ನು ಒಪ್ಪಿಕೊಂಡ ಅಂಬೇಡ್ಕರ್, ತಮ್ಮ ಬಂಡವಾಳಶಾಹಿ ಉದಾರವಾದಿ ವಿಚಾರಗಳಿಂದಾಗಿ ಕ್ರಾಂತಿಯ ಬಗೆಗಿನ ಮಾರ್ಕ್ಸ್‌ವಾದಿ ತತ್ವವನ್ನು ಒಪ್ಪಿಕೊಳ್ಳಲಿಲ್ಲ. 1941 ಕ್ಕೆ ಮೊದಲು ಬೃಹತ್ ಸಂಖ್ಯೆಯಲ್ಲಿ ಜನರನ್ನು ಒಗ್ಗೂಡಿಸಿ ಹೋರಾಟಗಳನ್ನು ನಡಿಸಿದ್ದರೂ ಅವೆಲ್ಲವೂ ಕಾನೂನು ಚೌಕಟ್ಟಿನೊಳಗೆ ನಡೆಸಲಾದ ಹೋರಾಟಗಳೇ ಆಗಿದ್ದವು. ಮತ್ತು ಪ್ರಭುತ್ವದ ಬಗ್ಗೆ ಅವರ ದೃಷ್ಟಿಕೋನ ತಪ್ಪಾಗಿತ್ತು. ಪ್ರಭುತ್ವ ಒಂದು ವರ್ಗದ ಸಾಧನವೆಂದು ನೋಡದೆ ಅದು ನಿಷ್ಪಕ್ಷಪಾತವಾದದ್ದೆಂಬ ಅಭಿಪ್ರಾಯ ವನ್ನು ಅವರು ಹೊಂದಿದ್ದರು. ಆದ್ದರಿಂದ ಪ್ರಭುತ್ವವನ್ನು ಬಳಸಿ ಕೆಲವು ಸುಧಾರಣೆಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸಬಹುದೆಂಬುದು ಅವರ ದೃಢವಾದ ನಂಬಿಕೆಯಾಗಿತ್ತು. ಇಂದೂ ಸಹ ಇದರ ಪ್ರಭಾವ ದಲಿತ ಚಳುವಳಿಯ ಮೇಲೆ ಅತಿ ಹೆಚ್ಚಾಗಿದೆ. ದಲಿತ ಚಳುವಳಿಗೆ ಕಾನೂನುವಾದಿ, ಸುಧಾರಣವಾದಿ ಭ್ರಮೆಗಳನ್ನು ಸೃಷ್ಟಿಸಿದ್ದರಲ್ಲಿ ಅಂಬೇಡ್ಕರವರ ಕೊಡುಗೆ ಪ್ರಧಾನವಾದದ್ದು. ಹೋರಾಟಗಳು ಎಷ್ಟೇ ಉಗ್ರ ಸ್ವರೂಪದದ್ದಾದರೂ ಅವುಗಳು ಸಂಸದೀಯ, ನ್ಯಾಯಾಲಯ, ರಾಜಕೀಯ ಸಂವಿಧಾನದಲ್ಲಿ ಸುಧಾರಣೆಗಳನ್ನು ತರುವುದಷ್ಟನ್ನೇ ಗುರಿಯಾಗಿಸಿ ಕೊಂಡಿರುತ್ತದೆ. ಈ ಪ್ರಭುತ್ವ ಯಂತ್ರಾಂಗವನ್ನು, ಸಾಮಾಜಿಕ ವ್ಯವಸ್ಥೆಯನ್ನು ನಿರ್ಮೂಲಿಸುವ ಗುರಿಯನ್ನು ಅಂಬೇಡ್ಕರ್ ಹೊಂದಿರಲಿಲ್ಲ. ಆದ್ದರಿಂದ ಅಂಬೇಡ್ಕರ್ ಸೈದ್ಧಾಂತಿಕವಾಗಿ ಒಬ್ಬ ಬಂಡವಾಳಶಾಹಿ ಉದಾರವಾದಿ ಸುಧಾರಣವಾದಿಯಾಗಿದ್ದರು. ಜಾತಿಯ ನಿರ್ಮೂಲನೆ, ಪ್ರಸ್ತುತ ಬ್ರಾಹ್ಮಣೀಯ ಹಿಂದೂ ಸಮಾಜದೊಳಗೆ ಕೆಲವು ಸುಧಾರಣೆಗಳನ್ನು ತರುವ ಮೂಲಕ ಸಾಧಿಸ ಬಹುದೆಂಬ ಅಭಿಪ್ರಾಯ ಹೊಂದಿರಲಿಲ್ಲ. ಇದು ತಾತ್ವಿಕವಾಗಿ ತದ್ವಿರುದ್ಧವಾದುದಾಗಿತ್ತು ಹಾಗೂ ಉದ್ದೇಶಕ್ಕೂ ಮಾರ್ಗಕ್ಕೂ ನಡುವಿನ ವೈರುಧ್ಯವಾಗಿತ್ತು.

ಅಂಬೇಡ್ಕರ್‌ರವರ ಪಾತ್ರದ ಬಗ್ಗೆ ಇಂದು ಹಲವಾರು ಅಭಿಪ್ರಾಯಗಳಿವೆ. ಮೊದಲಿಗೆ ಆಳುವ ವರ್ಗದ ನಿಲುವು: ಇಂದು ಎಲ್ಲಾ ಆಳುವ ವರ್ಗದ ಪಕ್ಷಗಳು, ಸಂಘಗಳು ರಾಜಕಾರಣಿಗಳು ಅಂಬೇಡ್ಕರ್ ಜಯಂತಿಯನ್ನು ನಡೆಸಿ, ಮೂರ್ತಿಯನ್ನು ಪ್ರತಿಷ್ಠಾಪಿಸಿ ಹಬ್ಬ ಆಚರಿಸಿ ಅಂಬೇಡ್ಕರ್ ರನ್ನು ಆಕಾಶಕ್ಕೇರಿಸಿ ಮಾತನಾಡುತ್ತಾರೆ. ಅಂಬೇಡ್ಕರ್‌ರವರ ಜಾತಿ ವಿರೋದಿ ಹೋರಾಟಗಳನ್ನು ಹಿಂದೂ ಮತದ ವಿರೋಧಿ ಬ್ರಾಹ್ಮಣವಾದ ವಿರೋಧಿ ವಿಚಾರಗಳನ್ನು ಅಂಬೇಡ್ಕರ್ ಬದುಕಿರುವಾಗಲೂ, ಈಗಲೂ ವಿರೋಧಿಸುತ್ತಿರುವ ಮೇಲ್ಜಾತಿ ಆಧಿಪತ್ಯ ಶಕ್ತಿಗಳು ಅವರ ಪ್ರಗತಿಪರ ಅಂಶಗಳನ್ನು ಹೊರತು ಪಡಿಸಿ ಆಳುವ ವರ್ಗಗಳಿಗೆ ಅನುಕೂಲವಾಗುವ ಅಂಶಗಳನ್ನು ಮಾತ್ರ ಎತ್ತಿಹಿಡಿಯುತ್ತಾರೆ. ಇದನ್ನು ಕೂಡ ಇವರು ಮುಂದಿಟ್ಟಿರುವುದು ಕಾರಣ ಜನಸಂಖ್ಯೆ ಯಲ್ಲಿ ಶೇ. 12 ರಷ್ಟಿರುವ ದಲಿತರ ಮತಗಳನ್ನು ಗಳಿಸಲು, ಹಾಗೂ ದಲಿತರಲ್ಲಿ ಹೆಚ್ಚುತ್ತಿರುವ ಜಾಗೃತಿಯ ದಿಕ್ಕು ತಪ್ಪಿಸಿ ಆಳುವ ವರ್ಗದ ರಾಜಕೀಯಕ್ಕೆ ಬಳಸಿಕೊಳ್ಳಲಷ್ಟೇ ಆಗಿದೆ.

ಬಹುಜನ ಸಮಾಜ ಪಕ್ಷದಂಥ ದಲಿತ ದಲ್ಲಾಳಿ ಅಧಿಕಾರಶಾಹಿ ವರ್ಗದವರನ್ನು ಪ್ರತಿಷ್ಠಿತ ದಲಿತರನ್ನು ಪ್ರತಿನಿಧಿಸುವ ಪಕ್ಷಗಳು ಅಂಬೇಡ್ಕರರನ್ನು ಬಳಸಿ ಆಡಳಿತದ ಗದ್ದುಗೆಗೇರಲು ಪ್ರಯತ್ನಿಸುತ್ತಿದ್ದಾರೆ. ಎಲ್ಲಾ ಆಳುವ ವರ್ಗ ಪಕ್ಷಗಳ ಈ ಕುತಂತ್ರವನ್ನು ಬಯಲುಗೊಳಿಸುವುದು ಅತ್ಯಗತ್ಯವಾಗಿದೆ.

ಎರಡನೆಯದಾಗಿ ಅಂಬೇಡ್ಕರರ ಬಗ್ಗೆ ದಲಿತ ಸಂಘಟನೆಗಳ ನಿಲುವು. ಇವುಗಳು ಸಾಮಾನ್ಯವಾಗಿ ಅಂಬೇಡ್ಕರರನ್ನು ಎತ್ತಿ ಹಿಡಿದರೂ ಅವುಗಳ ನಿಲುವು ಬಗೆಬಗೆಯಾಗಿವೆ. ಕೆಲವು ಅಂಬೇಡ್ಕರರ ಹೆಸರನ್ನು ಹೇಳಿ ದಂಧೆ ನಡೆಸುವ ಸಂಘಟನೆಗಳಾಗಿವೆ. ಮೀಸಲಾತಿ ನೀತಿಯಿಂದ ಪ್ರಯೋಜನ ಪಡೆದ ಎಸ್‌ಸಿ/ಎಸ್‌ಟಿ ನೌಕರರ ಸಂಘಗಳು ಮೀಸಲಾತಿಯನ್ನು ದಕ್ಕಿಸಿಕೊಳ್ಳುವು ದಷ್ಟನ್ನೇ ಉದ್ದೇಶವಾಗಿಟ್ಟುಕೊಂಡಿದ್ದಾರೆ. ಕ್ರಾಂತಿಕಾರಿ ಚಳುವಳಿಗಳು ಬಲಗೊಳ್ಳುತ್ತಿರುವ ಆಂಧ್ರ ಮುಂತಾದ ರಾಜ್ಯಗಳಲ್ಲಿ ಕೆಲವು ಸಂಘಗಳು ದಲಿತ ಜನರನ್ನು ಸಂಘಟಿಸುವುದಾಗಿ ಹೇಳುತ್ತಾ ಅವರನ್ನು ಕ್ರಾಂತಿಕಾರಿ ಚಳುವಳಿಯಲ್ಲಿ ಸೇರದಂತೆ ತಡೆಯುವ ಕೆಲಸವನ್ನು ಮಾಡುತ್ತಿವೆ. ಅಷ್ಟೇ ಅಲ್ಲದೆ ಕ್ರಾಂತಿಕಾರಿ ಸಂಘಗಳ ಮೇಲೆ ಅಪಪ್ರಚಾರ ನಡೆಸುತ್ತಾ ಆಳುವ ವರ್ಗಗಳ ಸಾಕು ನಾಯಿಗಳಾಗಿ ಕೆಲಸ ಮಾಡುತ್ತಿವೆ. ಇನ್ನು ಕೆಲವು ಸಂಘಗಳು ಜಾತಿ ಪದ್ಧತಿಯನ್ನು ವಿರೋಧಿಸಿ ಹೋರಾಡುತ್ತಿದ್ದು ದಲಿತ ಜನಾಂಗಕ್ಕೆ ಕೆಲವು ಸುಧಾರಣೆಗಳನ್ನು ಮಾಡಬೇಕೆಂಬ ದೃಷ್ಟಿಯಿಂದ ಕಾರ್ಯನಿರ್ವಹಿಸುತ್ತಿವೆ. ಈ ಸಂಘಗಳು ಕಾನೂನು ಚೌಕಟ್ಟಿನೊಳಗೆ ನಿಂತು ಕಾರ್ಯ ನಿರ್ವಹಿಸು ತ್ತಿವೆ. ಕಳೆದ ಒಂದು ವರ್ಷದಿಂದ ಮತ್ತೊಂದು ಬೆಳವಣಿಗೆ ಉಂಟಾಗಿದೆ. ಅದೆಂದರೆ ಮೇಲ್ಜಾತಿ ಜಾತೀವಾದಿ ಶಕ್ತಿಗಳ ದಾಳಿಗಳನ್ನು ಮಿಲಿಟೆಂಟ್ ಹಾಗೂ ನೇರ ಅಕ್ರಮಣದ ಮೂಲಕ ಪ್ರತಿದಾಳಿ ಮಾಡುವ ಧೋರಣೆ ಬೆಳೆಯುತ್ತಿದೆ. ಹಾಗೂ ಇವು ದಲಿತ ರಾಜಕಾರಣಿಗಳ ಸಾಂಪ್ರದಾಯಿಕ ನಾಯಕತ್ವವನ್ನು ನಿರಾಕರಿಸಿ ಹೊಸ ಹೋರಾಟದ ಹಾದಿಯಲ್ಲಿ ಮುನ್ನಾಗುತ್ತಿವೆ. ಸಾಮಾನ್ಯವಾಗಿ ಇವೆಲ್ಲವೂ ಅಂಬೇಡ್ಕರ್ ವಾದವನ್ನು ತಮ್ಮ ಸಿದ್ಧಾಂತವನ್ನಾಗಿ ಮಾಡಿಕೊಂಡಿವೆ. ಈ ಸಂಘಗಳು ಅಂಬೇಡ್ಕರರ ಬಗ್ಗೆ ವಿಮರ್ಶಾತ್ಮಕ ದೃಷ್ಟಿಕೋನವನ್ನು ಹೊಂದಿಲ್ಲ. ಅಂಬೇಡ್ಕರ್ ವಾದವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ವ್ಯಾಖ್ಯಾನಿಸಿ,

ತಿರುಚಿ, ಬದಲಾಯಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಈ ಸಂಘಗಳ ದೃಷ್ಟಿಕೋನವನ್ನು, ಕಾರ್ಯ ಚಟುವಟಿಕೆಗಳನ್ನು ಅಧ್ಯಯನ ಮಾಡಿ ಅದಕ್ಕೆ ತಕ್ಕಂತೆ ಅವುಗಳ ಜೊತೆ ಸಂಬಂಧಗಳನ್ನು ಇಟ್ಟುಕೊಳ್ಳುವುದು ಅಗತ್ಯವಾಗಿದೆ.

ಬಹುಸಂಖ್ಯಾತ ದಲಿತರು ಮೇಲ್ಕಂಡ ಎರಡು ಬಗೆಯ ಸಂಘಗಳ ಪ್ರಭಾವಕ್ಕೊಳಗಾಗಿದ್ದಾರೆ. ಕ್ರಾಂತಿಕಾರಿ ಚಳುವಳಿಯ ಪ್ರಭಾವದಡಿ ಸಾಪೇಕ್ಷವಾಗಿ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಸಾಮಾನ್ಯವಾಗಿ ದಲಿತರೆಲ್ಲರೂ ಅಂಬೇಡ್ಕರರ ಬಗ್ಗೆ ಹೆಚ್ಚಿನ ಗೌರವವನ್ನು ಹೊಂದಿದ್ದಾರೆ. ಸ್ವಾಭಿಮಾನದ ಸಂಕೇತವಾಗಿ ಅಂಬೇಡ್ಕರರನ್ನು ಪರಿಗಣಿಸಿದ್ದಾರೆ. ಇನ್ನು ಕೆಲವು ಪ್ರದೇಶಗಳಲ್ಲಿ ಅಂಧಾಭಿಮಾನ ದಿಂದ ಅಂಬೇಡ್ಕರರನ್ನು ದೇವರಂತೆ ಪೂಜಿಸುವುದೂ ನಡೆದಿದೆ. ಅಂಬೇಡ್ಕರರ ಬಗ್ಗೆ ಯಾವ ಭಿನ್ನಾಭಿಪ್ರಾಯ ವ್ಯಕ್ತವಾದರೂ ತಮ್ಮ ಹಕ್ಕುಗಳ ಮೇಲಾದ ದಾಳಿಯೆಂದು ಪರಿಗಣಿಸುತ್ತಾರೆ. ಆಳುವ ವರ್ಗಗಳ ಕುತಂತ್ರ, ಅಂಬೇಡ್ಕರರ ಬಗ್ಗೆ ಅಂಧ ವಿಶ್ವಾಸ ಬೆಳೆಯಲು ಸಹಕರಿಸಿದರೆ ಮತ್ತೊಂದೆಡೆ ಮೇಲ್ಜಾತಿ ಉನ್ಮಾದದ ಮೂಲಕ ದಲಿತರ ಮೇಲೆ, ಅವರ ಹಕ್ಕುಗಳ ಮೇಲೆ, ಸ್ವಾಭಿಮಾನದ ಸಂಕೇತಗಳ ಮೇಲೆ ದಾಳಿ ನಡೆಸಲು ಪ್ರಚೋದಿಸಿ ಶ್ರಮಜೀವಿಗಳ ನಡುವೆ ಜಾತಿ ವಿಂಗಡಣೆ ಮಾಡಿ ಒಡೆದಾಳುವ ಕುತಂತ್ರವನ್ನು ಜಾರಿಗೊಳಿಸುತ್ತಿದ್ದಾರೆ. ಆದುದರಿಂದ ಅಂಬೇಡ್ಕರರ ಬಗ್ಗೆ ನಿಲುವನ್ನು ತಳೆಯುವಾಗ ಹೆಚ್ಚು ಎಚ್ಚರ ವಹಿಸಬೇಕಿರುವುದು ಅತ್ಯಗತ್ಯ. ದಲಿತ ಜನಾಂಗದ ಸ್ವಾಭಿಮಾನವಾಗಿಯೂ, ಅವರ ಹಕ್ಕುಗಳಿಗಾಗಿಯೂ ಮೇಲ್ಜಾತಿ ಅಧಿಪತ್ಯ ಶಕ್ತಿಗಳ ದಾಳಿಗಳಿಗೆ ವಿರುದ್ಧವಾಗಿ, ಅವರ ವಿಮೋಚನೆಗಾಗಿ, ದೃಢವಾಗಿ ಹೋರಾಡುವ ಮೂಲಕ ದಲಿತ ಜನರ ನಂಬಿಕೆಯನ್ನು ಪಡೆಯಬೇಕು. ಅದೇ ಸಂದರ್ಭದಲ್ಲಿ ಅಂಬೇಡ್ಕರರ, ಅಂಬೇಡ್ಕರ್‌ವಾದದ ಕೊರತೆಗಳನ್ನು, ಮಿತಿಗಳನ್ನು ಬಿಡಿಸಿ ಹೇಳಿ ಅವನ್ನು ಮೀರಬೇಕಿರುವ ಅವಶ್ಯಕತೆಯನ್ನು ವಿವರಿಸಬೇಕು. ಅಂಬೇಡ್ಕರ್ ವಾದದಲ್ಲಿ ಆಳುವ ವರ್ಗಗಳಿಗೆ ಪೂರಕವಾದ ಅಂಶಗಳನ್ನು ಹೇಳಿ ಅದು ಹೇಗೆ ದಲಿತ ವಿಮೋಚನೆಗೆ ಬಾಧಕವಾದುದೆಂಬುದನ್ನು ಅವರಿಗೆ ಅರ್ಥಮಾಡಿಸಬೇಕು. ಆಳುವ ವರ್ಗಗಳನ್ನು ಹಾಗೂ ಸ್ವಾರ್ಥ ದಲಿತ ನಾಯಕರುಗಳನ್ನು ಬಯಲುಗೊಳಿಸಿ ಅವರ ಪ್ರಭಾವದಿಂದ ದಲಿತರು ಹೊರಬರುವಂತೆ ಮಾಡಬೇಕು. ದಲಿತ ಜನಾಂಗದ ವಿಮೋಚನಾ ಹೋರಾಟದಲ್ಲಿ ಪ್ರಜ್ಞಾಪೂರ್ವಕವಾಗಿ ಪಾಲ್ಗೊಳ್ಳುವ ಮೂಲಕವೇ ಇದನ್ನು ನೆರವೇರಿಸಲು ಸಾಧ್ಯ.

## ಉ. ಕರ್ನಾಟಕದಲ್ಲಿ ದಲಿತ ಚಳುವಳಿ

1920 ರ ದಶಕದಲ್ಲಿ ಭಾರತದ ಎಲ್ಲೆಡೆ ನಡೆದಂತೆ ದಲಿತ ಆಂದೋಲನ ಕರ್ನಾಟಕದಲ್ಲಿಯೂ ಪ್ರಾರಂಭವಾಯಿತು. ಇದಕ್ಕೂ ಮೊದಲು 1904-1909 ರಲ್ಲಿ ಶಾಲೆಗಳಲ್ಲಿ ದಲಿತ ಮಕ್ಕಳನ್ನು ಸೇರಿಸಿಕೊಳ್ಳಬೇಕೆನ್ನುವ ಬೇಡಿಕೆಯನ್ನು ಸರ್ಕಾರದ ಮುಂದೆ ಇಡಲಾಗಿತ್ತು. ಆಗ ಇದಕ್ಕೆ ಮೇಲ್ಜಾತಿಯವರು ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು. ಉದಾಹರಣೆಗೆ ಶೃಂಗೇರಿ ಜಹಾಗೀರಿನ ವ್ಯಾಪ್ತಿಗೆ ಬರುವ ಶಾಲೆಯೊಂದರಲ್ಲಿ ದಲಿತ ಮಕ್ಕಳನ್ನು ಸೇರಿಸಿಕೊಳ್ಳಬೇಕೆಂದು ಸರ್ಕಾರ ಆದೇಶಿಸಿದಾಗ ಅಲ್ಲಿಯ ಹಿಂದೂಗಳು, ಮುಸ್ಲಿಮರು ಆ ಶಾಲೆಯಿಂದ ತಮ್ಮ ಮಕ್ಕಳನ್ನು ಬಿಡಿಸಿದರು. ಆ ಸಮಯದಲ್ಲಿ ಮೈಸೂರು ಸರ್ಕಾರದ ಶಾಲಾ ಆಡಳಿತಾಧಿಕಾರಿಯಾಗಿದ್ದ ಸಿ.ಆರ್. ರೆಡ್ಡಿಯವರು ಮಹಾರಾಜ ಒಡೆಯರ್‌ರೊಂದಿಗೆ ಮಾತನಾಡಿ ಎಲ್ಲರಿಗೂ ಶಿಕ್ಷಣ ದೊರೆಯಬೇಕಿರುವ ಅಗತ್ಯವನ್ನು ವಿವರಿಸಿದರು. ನಂತರ 1919 ರಲ್ಲಿ ಮೈಸೂರು ಸಂಸ್ಥಾನದ ಎಲ್ಲಾ ಶಾಲೆಗಳಲ್ಲಿ ಪಂಚಮರನ್ನು ಸೇರಿಸಿಕೊಳ್ಳಬೇಕೆಂಬ ಆದೇಶವನ್ನು ಹೊರಡಿಸಲಾಯಿತು. ನಂತರ 1920 ರಲ್ಲಿ ದಲಿತರ ಶಿಕ್ಷಿತ ಗುಂಪೊಂದು ಬೆಳೆದು ಸರ್ಕಾರಿ ನೌಕರಿಯಲ್ಲಿ ಸೇರ್ಪಡೆಯಾದರು.

1920 ರಲ್ಲಿ ದಲಿತ ಸಮುದಾಯದಲ್ಲಿ ಆದಿ ಜಾಂಬವ ಸಂಘ ಹಾಗೂ ಆದಿ ದ್ರಾವಿಡರ ಅಭಿವೃದ್ಧಿ ಸಂಘವೆಂಬ ಎರಡು ಸಂಸ್ಥೆಗಳು ಬೆಂಗಳೂರು, ಮೈಸೂರು, ಕೋಲಾರದಲ್ಲಿ ಪ್ರಾರಂಭ ಗೊಂಡವು. ಆದಿ ಜಾಂಬವ ಸಂಘದ ನಾಯಕತ್ವವನ್ನು ಕನ್ನಡಿಗರಾದ ಚಿಕ್ಕ ಹನುಮಂತಯ್ಯ, ಚೆನ್ನಿಗರಾಮಯ್ಯ ಮುಂತಾದವರು ವಹಿಸಿದ್ದರು. ಆದಿ ದ್ರಾವಿಡರ ಅಭಿವೃದ್ಧಿ ಸಂಘವು ಬೆಂಗಳೂರು, ಮೈಸೂರು, ಕೆಜಿಎಫ್‌ನಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ತಮಿಳು ದಲಿತರಿಂದ ಪ್ರಾರಂಭಿಸಲ್ಪಟ್ಟಿತು. ಇದಕ್ಕೆ ದಲಿತೇತರರಾದ ಮುರುಗೇಶನ್ ಪಿಳ್ಳೆ ಮತ್ತು ಗೋಪಾಲ ಸ್ವಾಮಿ ಅಯ್ಯರ್ ಮುಂತಾದ ಮೇಲ್ಜಾತಿ ನಾಯಕರು ನಾಯಕತ್ವ ನೀಡಿದರು. ಈ ಸಂಘ 1920 ರಲ್ಲಿ "ಪಂಚಮ ರಾಜಕೀಯ ಸಮ್ಮೇಳನ" ವನ್ನು ನಡೆಸಿ ಅದರಲ್ಲಿ ಬಾಗವಹಿಸಲು ಅಂಬೇಡ್ಕರ್‌ರನ್ನು ಆಮಂತ್ರಿಸಿತು. ಆಗಿನ ಸರ್ಕಾರ ಅಂಬೇಡ್ಕರರು ಮೈಸೂರು ರಾಜ್ಯದಲ್ಲಿ ಪ್ರವೇಶಿಸಬಾರದೆಂದು ಆದೇಶವಿತ್ತಿದ್ದರಿಂದ ಅವರು ಆ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲ. ಈ ಸಮ್ಮೇಳನದಲ್ಲಿ ದಲಿತರನ್ನು "ಹರಿಜನ"ರೆಂದು ಕರೆಯಬಾರದು ಬದಲಿಗೆ ಆದಿ ಕರ್ನಾಟಕ, ಆದಿ ದ್ರಾವಿಡರು ಎಂದು ಕರೆಯಬೇಕೆಂಬ ತೀರ್ಮಾನ ಕೈಗೊಂಡರು. 1920 ರಲ್ಲಿ ಗೋಪಾಲ ಸ್ವಾಮಿ ಅಯ್ಯರ್ ನಾಯಕತ್ವದಡಿಯಲ್ಲಿ ಆದಿ ಕರ್ನಾಟಕ ಸಂಘ (ಎಕೆಎಸ್) ಸ್ಥಾಪನೆಯಾಯಿತು. ಇದು ಶಾಲೆಗಳಲ್ಲಿ ದಲಿತ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ, ಕೆರೆಗಳಲ್ಲಿ ಕುಡಿಯುವ ನೀರನ್ನು ಬಳಸುವ ಹಕ್ಕು, ದೇವಾಲಯಗಳಲ್ಲಿ ಪ್ರವೇಶ ಮುಂತಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿತು. ಸಾಮಾನ್ಯವಾಗಿ ಮೇಲ್ಕಂಡ ಸಂಘಗಳು ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸುವ ರಾಜಕೀಯಕ್ಕಷ್ಟೇ ಸೀಮಿತಗೊಂಡವು. 1920 ರ ಕೊನೆಯಲ್ಲಿ ಅಸ್ಪೃಶ್ಯತೆಯನ್ನು ಪ್ರತಿಭಟಿಸಿ ಕೆಲವು ಬ್ರಾಹ್ಮಣರು, ಕೆಲವು ಹಿಂದೂಗಳು ಸೇರಿ ಹರಿಜನ ಸೇವಕ ಸಂಘ ಎಂಬ ಸಂಸ್ಥೆಯೊಂದಿಗೆ ಮೈಸೂರು ಅಸ್ಪೃಶ್ಯತಾ ಲೀಗ್ ಅನ್ನು ತಗಡೂರು ರಾಮಚಂದ್ರರಾವ್ ಅವರ ನೇತೃತ್ವದಲ್ಲಿ ಪ್ರಾರಂಭಿಸಿರು. ದಲಿತರಿಗೆ ಸಾರ್ವಜನಿಕ ಸ್ಥಳಗಳನ್ನು ಉಪಯೋಗಿಸಿಕೊಳ್ಳುವ ಹಕ್ಕು, ದೇವಾಲಯಗಳಲ್ಲಿ ಪ್ರವೇಶ, ಸರ್ಕಾರಿ ಭೂಮಿಯ ಹಂಚಿಕೆ ಮುಂತಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು. ಜೊತೆಗೆ ದಲಿತರು ಮಾಂಸವನ್ನು ತಿನ್ನಬಾರದು ಎಂಬ ಬ್ರಾಹ್ಮಣೀಯ ವಿಚಾರಗಳನ್ನು ಪ್ರಚಾರ ಮಾಡಿದರು.

ಮೈಸೂರು ಸರ್ಕಾರವೂ ದಲಿತರನ್ನು ಹಿಂದೂಗಳ ಸನಾತನ ಧರ್ಮದೊಳಗೆ ವಿಲೀನಗೊಳಿಸಲು ಪ್ರಯತ್ನಿಸಿತು. 1920 ರಲ್ಲಿ ಭಾರತದ ಎಲ್ಲೆಡೆಯಲ್ಲಿ ಅನೇಕ ರೀತಿಯ ವೀರೋಚಿತ ಹೋರಾಟಗಳು ನಡೆಯುತ್ತಿದ್ದವು. ಆ ಹೋರಾಟಗಳಿಂದ ಮೈಸೂರಿನ ದಲಿತರನ್ನು ದೂರವಿಡಲು ಹಾಗೂ ಮತ್ತೊಂದೆಡೆ ದಲಿತರ ಮತ್ತು ಹಿಂದುಳಿದ ಜಾತಿಯವರ ಐಕ್ಯ ಹೋರಾಟ ನಡೆಯದಂತೆ ನೋಡಿಕೊಳ್ಳುವ ಉದ್ದೇಶ ಇದರ ಹಿಂದಿತ್ತು.

ಹೀಗಿದ್ದಾಗ್ಯೂ ಹಿಂದೂ ಧರ್ಮದಲ್ಲಿ ಸೇರಿಸಿಕೊಳ್ಳುವ ಧೋರಣೆಯನ್ನು ವಿರೋಧಿಸಿ ದಲಿತರ ಪ್ರತಿರೋಧ ಹೆಚ್ಚಿತು. ಗ್ರಾಮಗಳಲ್ಲಿ ಕುಲ ಕಸುಬನ್ನು ಬಹಿಷ್ಕರಿಸಿದರು. ಬಿಟ್ಟಿ ಚಾಕರಿಯನ್ನು ವಿರೋಧಿಸಿ ಹೋರಾಟಗಳು ಹೆಚ್ಚಾದವು. ಸರ್ಕಾರಿ ಭೂಮಿಗಳನ್ನು ಹಂಚಬೇಕೆಂಬ ಬೇಡಿಕೆ ತೀವ್ರಗೊಂಡಿತು. ಹೊಸದಾಗಿ ನಿರ್ಮಿಸಿದ ನೀರಾವರಿ ಪ್ರದೇಶವಾದ ಇರ್ವಿನ್ ಕಾಲುವೆ ಪ್ರದೇಶದಲ್ಲಿನ ಭೂಮಿಯನ್ನು ಕಡಿಮೆ ಬೆಲೆಗೆ ದಲಿತರಿಗೆ ನೀಡಬೇಕೆಂಬ ಬೇಡಿಕೆಯನ್ನು ಮುಂದಿಡ ಲಾಯಿತು. ಆದರೆ ಸರ್ಕಾರ ಇದನ್ನು ನಿರಾಕರಿಸಿತು. ದಲಿತರ ಹಕ್ಕಿಗಾಗಿ ಪ್ರಾಂಭವಾದ ಹೋರಾಟಗಳು ಹಳ್ಳಿಗಳಲ್ಲಿ ಘರ್ಷಣೆಗಳನ್ನು ಹುಟ್ಟುಹಾಕಿದವು. ಬಹುಪಾಲು ದಲಿತರು ವೀರೋಚಿತ ಹೋರಾಟಕ್ಕೆ ಸಿದ್ಧವಾಗಿದ್ದರು. ಆದರೆ ಅದಕ್ಕೆ ಸರಿಯಾದ ನಾಯಕತ್ವ ಇರಲಿಲ್ಲ.

1920 ರಿಂದ 1970 ರವರೆಗೂ ಅಂದರೆ ದಲಿತ ಸಂಘರ್ಷ ಸಮಿತಿ ಹುಟ್ಟುವವರೆಗೂ ದಲಿತ ಚಳುವಳಿ ಗಾಂಧಿವಾದದ ಪ್ರಭಾವದಡಿಯಲ್ಲಿಯೇ ಇತ್ತು. 1927 ರಲ್ಲಿ ಪೂನಾ ಒಪ್ಪಂದದ ನಂತರ (ದಲಿತರಿಗೆ ಶಾಸಕ ಹುದ್ದೆಯಲ್ಲಿನ ಮೀಸಲಾತಿ ವ್ಯವಸ್ಥೆ) ಗಾಂಧಿವಾದಿಗಳ ಹರಿಜನ ಸೇವೆ ಪ್ರಾರಂಭವಾಯಿತು. ಹರಿಜನ ಸೇವಾ ಸಂಘ, ಅಖಿಲ ಭಾರತೀಯ ದಲಿತ ಜಾತಿ ಸಂಘ ಮುಂತಾದ ಸಂಸ್ಥೆಗಳನ್ನು ಸ್ಥಾಪಿಸಿ, ಅಂಬೇಡ್ಕರರ ವಿರುದ್ಧವಾಗಿ ಜಗಜೀವನ ರಾಮರನ್ನು ಮುಂದೆ ತಂದರು. ಕರ್ನಾಟಕದಲ್ಲಿ ಹರಿಜನ ಸೇವಾ ಸಂಘದ ಶಾಖೆಗಳು ಚಟುವಟಿಕೆಯನ್ನು ಪ್ರಾರಂಭಿಸಿದವು. ಹುಬ್ಬಳ್ಳಿಯನ್ನು ತನ್ನ ಕೇಂದ್ರಸ್ಥಾನವನ್ನಾಗಿಸಿಕೊಂಡು ಬಿಜಾಪುರ, ಬೆಳಗಾಂ, ಕಾರವಾರ, ಮಂಗಳೂರು, ಕೊಡಗು, ಚಿತ್ರದುರ್ಗ, ಬಳ್ಳಾರಿ ಮುಂತಾದ ಜಿಲ್ಲೆಗಳಿಗೆ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದರು. 1928 ರಲ್ಲಿ ಗಾಂಧಿ ಹರಿಜನ ಯಾತ್ರೆಯ ಭಾಗವಾಗಿ ಇಲ್ಲಿಗೆ ಬಂದು ಹೋದರು. ಗೋಪಾಲಸ್ವಾಮಿ ಅಯ್ಯರ್, ತಗಡೂರು ರಾಮಚಂದ್ರರು ಮುಂತಾದವರ ನಾಯಕತ್ವ ಇದಕ್ಕಿತ್ತು. ಶಾಲೆಗಳನ್ನು ಪ್ರಾರಂಭಿಸಿ ಪಾಠ ಮಾಡುವುದು, ದಲಿತರ ಗುಡಿಸಲುಗಳನ್ನು ನಿರ್ಮಿಸಿ ವಸತಿ ಸೌಲಭ್ಯ ಕಲ್ಪಿಸುವುದು, ಆರೋಗ್ಯ ತಪಾಸಣೆ ಶಿಬಿರ ನಡೆಸು ವುದು ಬಸವಿಯ ಹೆಸರಿನಲ್ಲಿ ನಡೆಯುವ ವೇಶ್ಯಾವೃತ್ತಿಯನ್ನು ತಡೆಯುವುದಕ್ಕಾಗಿ ಪ್ರಚಾರ ಕೈಗೊಳ್ಳುವುದು, ದೇವಾಲಯದ ಪ್ರವೇಶಕ್ಕೆ ಸರ್ಕಾರದ ಅನುಮತಿಯನ್ನು ಕೋರುವುದು ಮುಂತಾದ ಕಾರ್ಯಕ್ರಮಗಳನ್ನು ಹರಿಜನ ಸೇವಾ ಸಂಘಗಳು ಹಮ್ಮಿಕೊಂಡವು. 1938 ರಲ್ಲಿ ಮೈಸೂರು ಸರ್ಕಾರ ಶ್ರಾವಣಬೆಳಗೊಳದ ಜೈನ್ ದೇವಾಲಯದಲ್ಲಿ ದಲಿತರು ಪ್ರವೇಶಿಸಬಹುದೆಂಬ ಆದೇಶ ನೀಡಿತು. ಆದರೆ ಜೈನರು ಇದನ್ನು ವಿರೋಧಿಸಿದ್ದರಿಂದ ಅದನ್ನು ಹಿಂತೆಗೆದುಕೊಂಡಿತು. 1940 ರಲ್ಲಿ ಮೈಸೂರು ಸರ್ಕಾರ ಕಾಯ್ದೆ ಅನುಮೋದನೆಯ ಸಮಯದಲ್ಲಿ 200 ಶಾಸನಸಭೆಯ ಸ್ಥಾನಗಳಲ್ಲಿ 20 ಸ್ಥಾನಗಳನ್ನು ದಲಿತರಿಗೆ ಮೀಸಲಿಟ್ಟಿತು. ಈ ಸಮಯದಲ್ಲಿನ ದಲಿತ ಚಳುವಳಿ ಮೂಲತಃವಾಗಿ ಕಾಂಗ್ರೆಸ್ (ಬ್ರಾಹ್ಮಣರ) ನಾಯಕತ್ವದಲ್ಲಿದ್ದು ಅದು ಸರ್ಕಾರದ ಮೆಚ್ಚುಗೆ ಹಾಗೂ ಬೆಂಬಲವನ್ನು ಪಡೆದುಕೊಳ್ಳಲು ಯತ್ನಿಸುತ್ತಿತ್ತು. ಗಾಂಧಿಯ ತತ್ವವೇ ಇದರ ಸಿದ್ಧಾಂತ ಹಾಗೂ ಮಾರ್ಗದರ್ಶನವಾಗಿದ್ದ ಕಾರಣ ಜಾತಿ ಪದ್ಧತಿ ಅಥವಾ ಅಸ್ಪೃಶ್ಯತೆಯ ವಿಷಯದಲ್ಲಿ ಯಾವುದೇ ಮೂಲಭೂತ ಬದಲಾವಣೆಯನ್ನೂ ತರಲಿಲ್ಲ. ಬದಲಿಗೆ ಜಾತಿ ವ್ಯವಸ್ಥೆಯೊಳಗೆ ಹಾಗೂ ಧರ್ಮದೊಳಗೆ ದಲಿತ ಸಮುದಾಯಕ್ಕೆ ಕೆಲವು ಸವಲತ್ತುಗಳನ್ನು, ಕೆಲವು ಸುಧಾರಣೆಗಳನ್ನು ಒದಗಿಸುವ ಗುರಿಯನ್ನು ಮಾತ್ರ ಹೊಂದಿತ್ತು. ದಲಿತವರ್ಗಕ್ಕೆ ಬ್ರಾಹ್ಮಣ ನಾಯಕತ್ವವೆ ಪ್ರಮುಖವಾಗಿದ್ದು ಇದು ದಲಿತರಲ್ಲಿ ಹೋರಾಟದ ಮನೋಭಾವನೆಯನ್ನು ಬೆಳಸದೆ ಕೇವಲ ಸುಧಾರಣೆಗಳನ್ನು ತರುವ ಉದ್ದೇಶವನ್ನು ಹೊಂದಿತ್ತು.

ಒಟ್ಟಾರೆ 1900 ರಿಂದ 1970 ರವರೆಗೂ ದಲಿತ ಚಳುವಳಿ ದಲಿತರನ್ನಾದರಿಸಿ ದಲಿತರಿಗಾಗಿ ನಡೆದ ಚಳುವಳಿಯಾಗಿರಲಿಲ್ಲ. ಗ್ರಾಮಾಂತರ ಹಾಗೂ ನಗರಗಳಲ್ಲಿನ ದಲಿತರು, ಮೂಲಭೂತ ವರ್ಗಗಳ ಜನರು ವೀರೋಚಿತ ಹೋರಾಟಕ್ಕೆ ಸಿದ್ಧರಾಗಿದ್ದರೂ ಸಹ ಅವರನ್ನು ಸಂಘಟಿಸಿ ಹೋರಾಟದ ದಾರಿಗೆ ಕೊಂಡೆಯ್ಯಲು ದಲಿತ ಸಮಾಜದ ನಾಯಕತ್ವವಾಗಲೀ ಅಥವಾ ಕ್ರಾಂತಿಕಾರಿ ನಾಯಕತ್ವವಾಗಲೀ ಇರಲಿಲ್ಲ. ದಲಿತ ಸಮಾಜದ ಒಳಗೆ ಒಂದು ಶಿಕ್ಷಿತ ನೌಕರರು ಹಾಗೂ ಬೇರೆ ಬೇರೆ ಕಚೇರಿಗಳಲ್ಲಿ ಕೆಲಸ ಮಾಡುತ್ತಿದ್ದ ಸಣ್ಣ ಪ್ರಮಾಣದ ಪುಟ್ಟ ಬಂಡವಾಳಶಾಹಿ ವರ್ಗ ಇದ್ದರೂ ಸಹ ಅದು ನಾಯಕತ್ವ ವಹಿಸಲಿಲ್ಲ. ಇದೇ ಮೈಸೂರು ದಲಿತ ಚಳುವಳಿಯ ದೊಡ್ಡ ಬಲಹೀನತೆಯಾಗಿತ್ತು. ಅದರೊಂದಿಗೆ ಗ್ರಾಮಾಂತರ ದಲಿತ ಚಳುವಳಿಯಲ್ಲಿ ಪ್ರಧಾನವಾಗಿ ಕನ್ನಡಿಗರಾಗಿದ್ದು ನಗರ ಪ್ರದೇಶಗಳಲ್ಲಿ ಅಂದರೆ ಬೆಂಗಳೂರು, ಕೆಜಿಎಫ್ ಪ್ರದೇಶಗಳ ದಲಿತರು ಚಳುವಳಿಯಲ್ಲಿ ತಮಿಳರಿದ್ದು ಇವರ ನಡುವೆ ಇದ್ದ ಅಂತರ ಹೋಗಿರಲಿಲ್ಲ. ಹಾಗೂ ಹಿಂದುಳಿದ ಜಾತಿಯವರು ಜಾತಿ ವಿರೋಧಿ ಹೋರಾಟ ಅವರ ಮಿಸಲಾತಿಯ ರಾಜಕೀಯದ ಗಡಿಗಳನ್ನು ದಾಟುವ ಮಟ್ಟಕ್ಕೆ ಮಾತ್ರ ಸೀಮಿತವಾಗಿತ್ತು. ಹಾಗೂ ಇವರು ದಲಿತರೊಂದಿಗೆ ಜಂಟಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ದಿದ್ದುದು ಅಂತಿಮವಾಗಿ ಕ್ರಾಂತಿಕಾರಿ ಚಳುವಳಿ ಕೂಡ ಇಲ್ಲದಿದ್ದುದು ಕರ್ನಾಟಕದಲ್ಲಿ ದಲಿತ ಚಳುವಳಿ ಬಲಹೀನಗೊಳ್ಳಲು ಕಾರಣವಾದವು.

1970 ರ ಕಾಲಘಟ್ಟದಲ್ಲಿ ಈ ಬಲಹೀನತೆಯನ್ನು ಹೋಗಲಾಡಿಸಿ ಒಂದು ದೊಡ್ಡ ಚಳುವಳಿ ಯಾದ ದಲಿತ ಹೋರಾಟ ಹುಟ್ಟಿ ಬಂದಿತು. ನಿರ್ದಿಷ್ಟವಾಗಿ ದಲಿತ ಸಂಘರ್ಷ ಸಮಿತಿಯ ನಾಯಕತ್ವದಲ್ಲಿನ ಚಳುವಳಿ ಜನಪರ ಚಳುವಳಿಯಾಗಿ ಸ್ಫೋಟಗೊಂಡಿತು. ಡಿಎಸ್‌ಎಸ್ ಚಳುವಳಿ ರೂಪುಗೊಳ್ಳುವುದಕ್ಕೆ ಮುಂಚೆ 1968 ರಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಗುಲ್ಬರ್ಗವನ್ನು ಕೇಂದ್ರಸ್ಥಳವಾಗಿಟ್ಟುಕೊಂಡು ಶ್ಯಾಮಸುಂದರ್ ನಾಯಕತ್ವದಲ್ಲಿ ಭೀಮಸೇನಾ ಸ್ಥಾಪನೆಗೊಂಡಿತು. ಇದು ಬಹುಪಾಲು ನಗರದ ಯುವಕರನ್ನು ಒಳಗೊಂಡಿತ್ತು. ಇದು ಹಿಂದೂ ದೇವರುಗಳ ಚಿತ್ರಗಳಿಗೆ ಬೆಂಕಿ ಹಚ್ಚುವುದು, ಮನುಸ್ಮೃತಿಯನ್ನು ಸುಡುವಂಥ ಚಟುವಟಿಕೆಗಳನ್ನು ನಡೆಸಿತು. ಇದು

ಅಂಬೇಡ್ಕರ್‌ವಾದವನ್ನು ಆಧಾರವಾಗಿಟ್ಟುಕೊಂಡು ಸುಮಾರು 7 ವರ್ಷಗಳ ಕಾಲ ಕೆಲಸ ಮಾಡಿದ ನಂತರ ಅದರಲ್ಲಿದ್ದ ಬಹುಪಾಲು ನಾಯಕರು ಆಳುವ ವರ್ಗದ ಘಟಕಗಳಲ್ಲಿ ಸೇರಿಕೊಂಡರು. ನಂತರ 1973 ರ ಅಂತ್ಯದಲ್ಲಿ ದಲಿತ ಸಚಿವ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಕರೆದಿದ್ದರಿಂದ ದೊಡ್ಡ ಗಲಭೆಯುಂಟಾಯಿತು. ಬಸವಲಿಂಗಪ್ಪನವರ ಹೇಳಿಕೆಯನ್ನು ವಿರೋಧಿಸಿ ಮೇಲ್ಜಾತಿ ಹಿಂದೂಗಳು ಮಠಾಧೀಶರು, ಮೇಲ್ಜಾತಿ ವಿದ್ಯಾರ್ಥಿಗಳೆಲ್ಲ ಸೇರಿ ಅವರನ್ನು ಶಾಸನ ಸಭೆಯಿಂದ ಹೊರಹಾಕಬೇಕೆಂದು ಒತ್ತಾಯಿಸಿ ಹೋರಾಟಕ್ಕಿಳಿದರು. ಮೇಲ್ಜಾತಿ ಹಿಂದೂಗಳ ನಿರ್ಬಂಧಕ್ಕೆ ಮಣಿದು ಮುಖ್ಯಮಂತ್ರಿ ದೇವರಾಜ ಅರಸರು ಬಸವಲಿಂಗಪ್ಪ ನವರ ರಾಜೀನಾಮೆ ಪಡೆದುಕೊಂಡರು. ಇದನ್ನು ವಿರೋಧಿಸಿ ದಲಿತ ವಿದ್ಯಾರ್ಥಿಗಳು ಹೋರಾಟ ಕ್ಕಿಳಿದರು. ಎರಡೂ ಕಡೆ ದಲಿತ ಮತ್ತು ಮೇಲ್ಜಾತಿವತಿಯಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಹೋರಾಟದಲ್ಲಿ ಭಾಗವಹಿಸಿದರು. ಕೆಲವು ಕಡೆ ಹೊಡೆದಾಟಗಳು ಕೂಡ ನಡೆದವು. ಅದುವರೆಗೂ ಜಾತಿಯ ದೌರ್ಜನ್ಯಕ್ಕೆ ಒಳಗಾಗಿದ್ದ ದಲಿತ ಮಧ್ಯಮ ವರ್ಗದ ಆಕ್ರೋಶ ಈ ಹೋರಾಟದ ಮೂಲಕ ಸ್ಫೋಟಗೊಂಡಿತ್ತು. ಆಳುವ ವರ್ಗಕ್ಕೆ ಸೇರಿದ ಕೆಲವು ದಲಿತ ರಾಜಕೀಯ ವ್ಯಕ್ತಿಗಳು ಹಾಗೂ ದಲಿತರಲ್ಲಿನ ಪ್ರತಿಷ್ಠಿತರು ಈ ಹೋರಾಟವನ್ನು ಬಳಸಿ ಕೊಂಡರು. ಈ ಹೋರಾಟದ ಮುಂದುವರಿಕೆಯಾಗಿ 1970 ರ ದಶಕದ ಕೊನೆಯಲ್ಲಿ ದಲಿತ ಸಂಘರ್ಷ ಸಮಿತಿ ಹುಟ್ಟಿಕೊಂಡಿತು.

ದಲಿತ ಸಂಘರ್ಷ ಸಮಿತಿಯ ಹುಟ್ಟಿನ ಹಿನ್ನಲೆಯಾಗಿ ಕೆಲ ಮುಖ್ಯ ಬೆಳವಣಿಗೆಯನ್ನು ನೋಡಬಹುದು. ಭಾರತದ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟು ಹೆಚ್ಚಾಗಿ ಆಳುವ ವರ್ಗಗಳ ನಡುವಿನ ಘರ್ಷಣೆ ತೀವ್ರಗೊಂಡು ತುರ್ತು ಪರಿಸ್ಥಿತಿಯನ್ನು ಜಾರಿಗೊಳಿಸಲಾಗಿತ್ತು. ತುರ್ತು ಪರಿಸ್ಥಿತಿಯನ್ನು ತೆಗೆದ ನಂತರ ಜನರಲ್ಲಿ ಹೋರಾಟದ ಅಲೆಗಳು ಎದ್ದವು. ಪಕ್ಕದ ರಾಜ್ಯವಾದ ಆಂಧ್ರದಲ್ಲಿ ನಕ್ಸಲ್ಬರಿ ಹಾದಿಯಲ್ಲಿ ಬೆಳೆದ ಕ್ರಾಂತಿಕಾರಿ ಚಳುವಳಿಯ ಪ್ರಭಾವ, ಕಲೆ ಮತ್ತು ಸಾಹಿತ್ಯದ ಬೆಳವಣಿಗೆಗೆ, ಕರ್ನಾಟಕದ ಬರಹಗಾರರ ಬೆಳವಣಿಗೆಗೆ ಮತ್ತು ದಲಿತ ಚಳುವಳಿಗೆ ನಾಯಕತ್ವ ನೀಡಬಲ್ಲ ಗುಂಪಿನ ರಚನೆಗೆ ತಳಹದಿಯನ್ನು ನಿರ್ಮಿಸಿತು. ದಲಿತ ಚಳುವಳಿಯ ಇತಿಹಾಸದಲ್ಲಿ ಮಿಲಿಟೆಂಟ್ ಹೋರಾಟವಾದ ದಲಿತ ಪ್ಯಾಂಥರ್ ಚಳುವಳಿಯ ಪ್ರಭಾವ ಮುಂತಾದ ಹಲವಾರು ಅಂಶಗಳು ದಲಿತ ಚಳುವಳಿಯ ಬೆಳವಣಿಗೆಗೆ ಪೂರಕವಾಗಿದ್ದವು. ಡಿಎಸ್‌ಎಸ್‌ನ ಹೋರಾಟ ಪ್ರಾರಂಭದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳಿಂದ ಶುರುವಾಗಿ ನಂತರ ದಲಿತ ಚಳುವಳಿಯಾಗಿ ಬೆಳವಣಿಗೆ ಪಡೆಯಿತು. ಬಹುಪಾಲು ವಿದ್ಯಾರ್ಥಿಗಳು ಗ್ರಾಮಾಂತರ ಹಿನ್ನಲೆಯಿಂದ ಬಂದಿದ್ದ ಕಾರಣ ಈ ಚಳುವಳಿಯನ್ನು ಹಳ್ಳಿಗಳಿಗೆ ಕೊಂಡೊಯ್ಯುವುದು ಸುಲಭವಾಗಿತ್ತು. ಈ ರೀತಿಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶದ ಮಧ್ಯೆ ಜೀವಂತವಾದ ಸಂಬಂಧ ಏರ್ಪಟ್ಟಿತು. ಕೆಲ ಸೌಲಭ್ಯಗಳಿಗಾಗಿ ಮಾತ್ರವಲ್ಲದೆ ಹೋರಾಟವು ಜಾತಿ ದೌರ್ಜನ್ಯವನ್ನು ವಿರೋಧಿಸುವ, ಭೂಮಾಲೀಕರ ಶೋಷಣೆಯನ್ನು ವಿರೋಧಿಸುವ, ಜೀತಪದ್ಧತಿ ನಾಶವಾಗಬೇಕೆಂಬ, ಹಾಗೂ ಸರ್ಕಾರಿ ಭೂಮಿಯನ್ನು ಹಂಚಬೇಕೆನ್ನುವ ಮಟ್ಟಕ್ಕೆ ಬೆಳೆಯಿತು. ಬ್ರಾಹ್ಮಣವಾದ, ಹಿಂದೂಧರ್ಮ, ಊಳಿಗಮಾನ್ಯತೆಯನ್ನು ವಿರೋಧಿಸಿ ಸೈದ್ಧಾಂತಿಕ ಹೋರಾಟಗಳು ನಡೆದವು. ಗಾಂಧಿವಾದದ ಹರಿಜನ ಸೇವೆಯನ್ನು ಈ ಚಳುವಳಿ ಟೀಕಿಸಿತು. ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ದಲಿತ ಸಾಹಿತ್ಯ ಎಂದ ಪ್ರತ್ಯೇಕ ಪಂಥ ಬೆಳವಣಿಗೆಯಾಗುವ ಮಟ್ಟಕ್ಕೆ ಈ ಹೋರಾಟದ ಪ್ರಭಾವವಿತ್ತು. ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ದಲಿತ ಸಮುದಾಯದಲ್ಲಿ ಜಾಗೃತಿ ಮೂಡಿ ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿ (ಕರಾವಳಿಯನ್ನು ಹೊರತುಪಡಿಸಿ) ಸಾವಿರಾರು ಸಂಖ್ಯೆಯಲ್ಲಿ ಹೋರಾಟಗಳಲ್ಲಿ ಭಾಗವಹಿಸಿದರು. ಈ ಚಳುವಳಿಯನ್ನು ಹಲವು ದಲಿತೇತರ ಪ್ರಜಾತಾಂತ್ರಿಕ ಶಕ್ತಿಗಳು ಬೆಂಬಲಿಸಿದವು. ಈ ಚಳುವಳಿಯಲ್ಲಿ ಸೇರಿದರು. ಕರ್ನಾಟಕದ ದಲಿತ ಚಳುವಳಿಯಲ್ಲಿ ಮಾತ್ರವಲ್ಲದೆ ಪ್ರಗತಿಪರ ಪ್ರಜಾತಾಂತ್ರಿಕ ಚಳುವಳಿಯಲ್ಲಿಯೂ ಇದು ನಿರ್ದಿಷ್ಟ ಪಾತ್ರವನ್ನು ವಹಿಸಿತು.

1970 ರ ಕೊನೆಯ ಭಾಗದಿಂದ 1980 ರ ಮಧ್ಯಭಾಗದವರೆಗಿನ ಸುಮಾರು 10 ವರ್ಷಗಳ ಕಾಲ ಕರ್ನಾಟಕದಲ್ಲಿ ದೊಡ್ಡ ಪ್ರವಾಹದಂತೆ ಪ್ರವಹಿಸಿದ ಚಳುವಳಿ ನಂತರ ನಿಧಾನವಾಗಿ ಸ್ಥಗಿತಗೊಂಡು ಅಧಃಪತನಕ್ಕೊಳಗಾಯಿತು. ನಂತರ ಡಿಎಸ್‌ಎಸ್ ಚಳುವಳಿ ಸಾಮಾನ್ಯವಾಗಿ ನಗರದ ಪುಟ್ಟ ಬಂಡವಾಳಶಾಹಿ ನಾಯಕತ್ವದಡಿಯಲ್ಲಿ ಹಲವು ದಲಿತ ಉನ್ನತ ಅಧಿಕಾರಿಗಳ ಬೆಂಬಲದೊಂದಿಗೆ ಮುನ್ನಡೆಯಿತು. ಸೈದ್ಧಾಂತಿಕವಾಗಿ ಅಂಬೇಡ್ಕರ್‌ವಾದವೇ ಇದ್ದರೂ ಮಾರ್ಕ್ಸ್‌ವಾದಿ ವಿಚಾರಗಳು, ನಿರ್ದಿಷ್ಟವಾಗಿ ಮಾವೋವಾದಿ ವಿಚಾರಗಳ ಪ್ರಭಾವ ಮತ್ತು ಲೋಹಿಯಾವಾದದಲ್ಲಿ ಕಾಣುವ ಎಲ್ಲಾ ಬಲಹೀನತೆಗಳು ಮಿತಿಗಳು ಈ ಚಳುವಳಿಯಲ್ಲಿ ಕಾಣಿಸಿಕೊಂಡವು. ಸೈದ್ಧಾಂತಿಕವಾಗಿ ಜಾತಿ ವ್ಯವಸ್ಥೆಯನ್ನು ನಾಶಮಾಬೇಕು, ಸಮಾಜದ ವ್ಯವಸ್ಥೆಯ್ನು ಬದಲಾಯಿಸಬೇಕೆಂದು ಹೇಳಿದರೂ ಸಹ ಅಚರಣೆಯಲ್ಲಿ ಈ ಚಳುವಳಿ ಕಾನೂನಿನ ಚೌಕಟ್ಟನ್ನು ದಾಟಲಿಲ್ಲ. ಹೋರಾಟಗಳು ಸರ್ಕಾರದ ಕಚೇರಿಗಳ ಮುಂದೆ ಸರ್ಕಾರದಿಂದ ಕೆಲವು ಸೌಲಭ್ಯಗಳನ್ನು ಪಡೆಯುವ ಹೋರಾಟಗಳಾಗಿ ಉಳಿದವು. ಜನರನ್ನು ಸಂಘಟಿಸಿ ಹೋರಾಟದ ಹಾದಿಯಲ್ಲಿ ಮುನ್ನಡೆಸದ ಕಾರಣ ಪೈರವಿ ಕೆಲಸಗಳನ್ನು ಮಾಡುವ ಒಂದು ಗುಂಪಾಗಿ ಬದಲಾವಣೆಯಾಗಿ ಅದರ ನಾಯಕತ್ವ ಪ್ರಭುತ್ವ ಮತ್ತು ಜನರ ನಡುವಿನ ದಲ್ಲಾಳಿಯಾಗಿ ಅಧಃಪತನಕ್ಕಿಳಿಯಿತು. ಅದರ ಮುಂಚೂಣಿ ನಾಯಕರು ಆಳುವ ವರ್ಗಗಳ ಗುಂಪಿಗೆ ಸೇರಿಕೊಂಡರು. ದಲಿತ ಸಮುದಾಯದಲ್ಲಿ ಭರವಸೆಯನ್ನು ಮೂಡಿಸಿದ ಚಳುವಳಿ ಅಂತಿಮವಾಗಿ ಆಳುವ ವರ್ಗದ ರಾಜಕೀಯದಲ್ಲಿ ಆಶ್ರಯ ಪಡೆಯಿತು. 1985 ರ ನಂತರ ದಲಿತ ಸಂಘರ್ಷ ಸಮಿತಿಯ ಹಲವಾರು ಗುಂಪುಗಳಾಗಿ ವಿಭಜಿತಗೊಂಡಿತು. ಈ ವಿಭಜನೆಯು ದಲಿತ ಸಮುದಾಯದೊಳಗೆ ಇರುವ ಹೊಲೆಯ, ಮಾದಿಗ ಜಾತಿ ಆಧಾರದ ಮೇಲೆ, ದಲಿತ ನಾಯಕರ ಸ್ವಾರ್ಥ ರಾಜಕಾರಣದ ಕಾರಣದಿಂದಲೂ ಮತ್ತು ಯಾವ ಬೂರ್ಜ್ವಾ ಪಕ್ಷಕ್ಕೆ ಬೆಂಬಲ ನೀಡುವುದು ಎಂಬ ಆಧಾರದ ಮೇಲೆ ನಡೆಯಿತು.

# IV . ಜಾತಿ ವಿರೋಧಿ ಹೋರಾಟಗಳಲ್ಲಿರುವ ತಪ್ಪು ಧೋರಣೆಗಳು

## ಅ. ಸಿಪಿಐ, ಸಿಪಿಎಂ ದೃಷ್ಟಿಕೋನ

ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ಅತೀ ದೊಡ್ಡ ತಪ್ಪಗಳಲ್ಲಿ ಜಾತಿ ಪದ್ಧತಿ ಮತ್ತು ಅದನ್ನು ನಾಶಗೊಳಿಸುವಲ್ಲಿನ ಅದರ ದೃಷ್ಟಿಕೋನವೂ ಒಂದು. ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಹುಟ್ಟಿದ 75 ವರ್ಷಗಳ ನಂತರವೂ ಸಿಪಿಐ ಮತ್ತು ಸಿಪಿಎ ಪಕ್ಷಗಳು ಜಾತಿಯ ನಾಶದ ಬಗ್ಗೆ ಸೈದ್ಧಾಂತಿಕವಾಗಿ, ಆಚರಣಾತ್ಮಕವಾಗಿ ತಪ್ಪುಗಳನ್ನು ಮಾಡುತ್ತಲೆ ಬಂದಿರುವುದಲ್ಲದೆ ಅದನ್ನು ನಿರ್ಲಕ್ಷಿಸಿವೆ. ಜಾತಿಯು, ಭಾರತ ಸಮಾಜಕ್ಕೆ ಅಂಟಿಕೊಂಡಿರುವ ಪೀಡೆ ಎನ್ನುವುದನ್ನು ಅದು ಅರ್ಥಮಾಡಿಕೊಂಡಿಲ್ಲ. ಕಣ್ಣಿಗೆ ರಾಚುವಂತೆ ಕಾಣುವ ಅಸ್ಪೃಶ್ಯತೆ, ಜಾತಿ ದೌರ್ಜನ್ಯ, ಜಾತಿ ತಾರತಮ್ಯಗಳಿಗೆ ಕಾರಣವಾಗಿರುವ ಬ್ರಾಹ್ಮಣೀಯ ವರ್ಣಾಶ್ರಮ ಸಿದ್ದಾಂತವನ್ನು ವಿರೋಧಿಸಲು ಯಾವುದೇ ವಿಶೇಷ ಹೋರಾಟವನ್ನು ಅದು ನಡೆಸಿಲ್ಲ. ಕನಿಷ್ಟ ಜಾತಿ ವಿರೋಧಿ ಹೋರಾಟಗಳು ಹಾಗೂ ದಲಿತ ಚಳುವಳಿಯೊಂದಿಗೆ ಸೇರಿಕೊಂಡು ಜಾತಿಯನ್ನು ವಿರೋಧಿಸುವ ಜಂಟಿ ಚಟುವಟಿಕೆ ಗಳನ್ನೂ ಅವರು ನಡೆಸಿಲ್ಲ. ಬದಲಿಗೆ ಇಂತಹ ಚಳುವಳಿಗಳು ಭಾರತದ ಜನರ ಐಕ್ಯತೆಗೆ ಭಂಗತರುವಂತದ್ದೆಂದು, ವರ್ಗ ಹೋರಾಟಕ್ಕೆ ವಿರುದ್ಧವಾದದ್ದೆಂದು ಪರಿಗಣಿಸಿದೆ. 1920 ರದಶಕದಲ್ಲಿ ದಲಿತ ಚಳುವಳಿ ಹುಟ್ಟಿಕೊಂಡ ಸಮಯದಲ್ಲೇ ಭಾರತೀಯ ಕಮ್ಯುನಿಸ್ಟ್ ಚಳುವಳಿ ಕೂಡ ಹುಟ್ಟಿಕೊಂಡಿತು. 1930 ರ ದಶಕದಲ್ಲಿ ಜಾತಿ ವಿರೋಧಿ, ದಲಿತ ಚಳುವಳಿಗಳ ಹೋರಾಟಗಳು ತೀವ್ರವಾಗಿ ನಡೆಯುತ್ತಿದ್ದಾಗ ಭಾರತೀಯ ಕಮ್ಯುನಿಸ್ಟ್ ಪಕ್ಷ ಕಾಂಗ್ರೆಸ್ಸಿನೊಂದಿಗೆ ಐಕ್ಯರಂಗವನ್ನು ರಚಿಸಿಕೊಂಡು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳಲ್ಲಿ ಭಾಗವಹಿಸಿತು. ಆದರೆ ಜಾತಿ ವಿರೋಧಿ, ಅಸ್ಪೃಶ್ಯತೆಯ ವಿರೋಧಿ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಲಿಲ್ಲ. ಕಾಂಗ್ರೆಸ್ ಪಕ್ಷ ಮತ್ತು ಗಾಂಧಿ ಹರಿಜನರಿಗಾಗಿ ಪ್ರತ್ಯೇಕ ಸಂಘಟನೆಯನ್ನು ಸ್ಥಾಪಿಸಿ ದಲಿತರು ಎಚ್ಚೆತ್ತುಕೊಳ್ಳಬಾರದೆಂದು ಕೆಲಸ ಮಾಡಿದ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷವು ಅದರ ಬಗ್ಗೆ ಗಮನಹರಿಸದೆ ಮುಖ ತಿರುಗಿಸಿಕೊಂಡಿತು.

ಅಂಬೇಡ್ಕರ್ ನಾಯಕತ್ವದಲ್ಲಿದ್ದ ದಲಿತ ಚಳುವಳಿಯನ್ನು ವಿಚ್ಛಿದ್ರಕಾರಿ, ಅವಕಾಶವಾದಿ, ಬ್ರಿಟಿಷ್ ದಲ್ಲಾಳಿ ಎಂದು ಹೇಳುತ್ತಾ ಆ ಚಳುವಳಿಯನ್ನು ಬಿಟ್ಟು ಹೊರಬಂದು ಸಮಾಜದ ಹಿಂದುಳಿದ ದುಡಿವ ಜನರೊಂದಿಗೆ ಸೇರಿ ಹೋರಾಡಬೇಕೆಂದು ದಲಿತರಿಗೆ ಸಿಪಿಐ ಕರೆಕೊಟ್ಟಿತು. ಸಿಪಿಐ ನಾಯಕತ್ವದಲ್ಲಿ ನ ರೈತಕೂಲಿ ಸಂಘದಲ್ಲಿ ಬಹುಪಾಲು ಜನರು ದಲಿತ ಸಮುದಾಯಕ್ಕೆ ಸೇರಿದವರಾಗಿದ್ದರು. ಅವರ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಟ ನಡೆಸಲಾಯಿತು. ಆದರೆ ಜಾತಿ ದೌರ್ಜನ್ಯದ ವಿರುದ್ಧ ಯೋಜನಾಬದ್ಧ ಹೋರಾಟಗಳನ್ನು ನಡೆಸಲಿಲ್ಲ. ಆದರೆ ಅವರ ಪಕ್ಷದಲ್ಲಿದ್ದ ಕೆಳ ಮಟ್ಟದ ಕಾರ್ಯಕರ್ತರು ಅಸ್ಪಶ್ಯತಾ ವಿರೋಧಿ ಹೋರಾಟಗಳಲ್ಲಿ ಭಾಗವಹಿಸಿದರು. ಆದರೆ ಅದು ಪಕ್ಷದ ಕಾರ್ಯಕ್ರಮದ ಭಾಗವಾಗಿರದೆ ಸ್ವಪ್ರೇರಿತವಾಗಿ ನಡೆದು ದಾಗಿತ್ತು.

ಇದಕ್ಕೆ ಹಲವು ಕಾರಣಗಳಿವೆ. ಭಾರತದ ಕ್ರಾಂತಿಯ ಬಗ್ಗೆ ಸಿಪಿಐ ಹೊಂದಿದ್ದ ಯಾಂತ್ರಿಕ ತಿಳುವಳಿಕೆ, ವರ್ಗಗಳ ಬಗ್ಗೆ ಮೊಂಡುವಾದಿ ದೃಷ್ಟಿಕೋನ, ಭಾರತದಲ್ಲಿ ಜಾತಿ ಮತ್ತು ವರ್ಗಗಳೆರಡರ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳದಿರುವುದು, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಭೂಮಾಲೀಕ ವಿರೋಧಿ ಹೋರಾಟದೊಂದಿಗೆ ಬೆಸೆಯುವಲ್ಲಿನ ತಪ್ಪು ಧೋರಣೆ, ಭಾರತದ ಸಮಾಜದ ಬಗ್ಗೆ ನಿರ್ದಿಷ್ಟವಾದ ವರ್ಗ ವಿಶ್ಲೇಷಣೆ ನಡೆಸದೆ ಇದ್ದುದು, ಪ್ರಾರಂಭದಿಂದಲೇ ನಾಯಕತ್ವದಲ್ಲಿರುವ ಬಲ ಅವಕಾಶವಾದಿ ಧೋರಣೆ, ಮೇಲಾತಿ ಮೇಲ್ವರ್ಗ ದವರೇ ಬಹುಪಾಲು ನಾಯಕತ್ವದಲ್ಲಿ ಇದ್ದುದು ಇದಕ್ಕೆ ಕಾರಣವಾಗಿದ್ದವು. ಆದರೆ ರಾಜಕೀಯ ವಾಗಿ ಅವಕಾಶವಾದ, ಸೈದ್ಧಾಂತಿಕವಾಗಿ ಯಾಂತ್ರಿಕ ದೃಷ್ಟಿಕೋನವೇ ಮೂಲಭೂತವಾಗಿದ್ದವು. ನಾಯಕತ್ವದಲ್ಲಿ ಮೇಲ್ಜಾತಿ, ಮೇಲ್ವರ್ಗಗಳ ತಳಪಾಯವಿದ್ದದು ಇಂತಹ ಬೆಳವಣಿಗೆಗೆ ಪುಷ್ಠಿ ನೀಡಿತು.

ಇದರ ಪರಿಣಾಮವಾಗಿ ಜಾತಿ ವಿರೋಧಿ ಹೋರಾಟವಷ್ಟೇ ಅಲ್ಲದೆ ಅದಕ್ಕೆ ಮೂಲಭೂತವಾಗಿರುವ ಊಳಿಗಮಾನ್ಯ ವಿರೋಧಿ ಹೋರಾಟವನ್ನೂ ನಡೆಸಲಿಲ್ಲ. ಮೂಲಭೂತ ವರ್ಗಗಳಾಗದ ಬಡ ರೈತ ಕೂಲಿಗಳನ್ನು ಸಂಘಟಿಸಿ ಉಳುವವನಿಗೇ ಭೂಮಿ ಎಂಬ ಘೋಷಣೆ ಯನ್ನು, ರಾಜಕೀಯ ಅಧಿಕಾರವನ್ನು ವಶಪಡಿಸಿಕೊಳ್ಳುವ ಹೋರಾಟದೊಂದಿಗೆ ಜೋಡಿಸಿ ಚಳುವಳಿ ಯನ್ನು ಮುಂದಕ್ಕೆ ಕೊಂಡೊಯ್ಯಲಿಲ್ಲ. ಒಟ್ಟಾರೆ ಜಾತಿ ವಿನಾಶದ ಪ್ರಶ್ನೆ ಕುರಿತು ಭಾರತೀಯ ಕಮ್ಯುನಿಸ್ಟ್ ಪಕ್ಷವು ಬಲ ಅವಕಾಶವಾದಿ ಸುಧಾರಣಾವಾದಿ ನಿಲುವನ್ನು ಹೊಂದಿತ್ತು. ಇಂದೂ ಕೂಡ ಅದೇ ಪರಿಸ್ಥಿತಿ ಮುಂದುವರೆದಿದೆ. ಸಿಪಿಎಂ ಸ್ಥಿತಿಯೂ ಇದೇ ಬಗೆಯದ್ದಾಗಿದೆ. ಇದರಲ್ಲಿ ಯಾವ ಬದಲಾವಣೆಗಳೂ ಇಲ್ಲ.

## ಆ. ಜಾತಿ ಸಂಘಟನೆಗಳಲ್ಲಿರುವ ತಪ್ಪು ಧೋರಣೆಗಳು

ಹಿಂದುಳಿದ ಜಾತಿಗಳ ಸಂಘಟನೆಗಳು ಮೀಸಲಾತಿ ಹೋರಾಟಕ್ಕೆ ಮಾತ್ರವೇ ತಮ್ಮನ್ನು ಸೀಮಿತ ಗೊಳಿಸಿಕೊಂಡಿವೆ. ಕುರುಬರ ಸಂಘ, ಒಕ್ಕಲಿಗರ ಸಂಘ, ಕೋಲಿ ಸಮಾಜ ಮಂತಾದ ಜಾತಿ ಸಂಘಟನೆಗಳು ತಮ್ಮ ತಮ್ಮ ಜಾತಿಯ ಸಂಕುಚಿತ ಹಿತಾಸಕ್ತಿಗಳಿಗೆ ಮಾತ್ರ ಹೋರಾಡಬಯಸುತ್ತಾ ಜಾತಿ ವಿನಾಶದ ಬಗ್ಗೆ ಮಾತನಾಡುತ್ತಲೇ ಇಲ್ಲ.

ಬಹುಪಾಲು ದಲಿತ ಸಂಘಟನೆಗಳು ಮೀಸಲಾತಿಯನ್ನು ಕೇಂದ್ರವಾಗಿಟ್ಟಕೊಂಡಿದ್ದರೂ ಕೆಲವು ಸಂಘಟನೆಗಳು ಅಸ್ಪೃಶ್ಯತೆಯ ನಾಶ, ಜಾತಿ ನಾಶ ಮುಂತಾದವುಗಳನ್ನೂ ತಮ್ಮ ಗುರಿಯಾಗಿ ಹೊಂದಿದ್ದವು. ಇವುಗಳಲ್ಲಿ ದಲಿತರಿಗೆ ರಾಜಕೀಯ ಅಧಿಕಾರ, ದಲಿತಸ್ತಾನ್ ಮುಂತಾದ ಧೋರಣೆಗಳೂ ಇವೆ. ನಿರ್ದಿಷ್ಟವಾಗಿ ದಲಿತರಿಗೆ ರಾಜಕೀಯ ಅಧಿಕಾರ ಎಂಬ ವಿಷಯವನ್ನು ನೋಡೋಣ.

ದಲಿತರಿಗೆ ರಾಜಕೀಯ ಅಧಿಕಾರ ಎಂಬ ವಾದದ ಸಾರಾಂಶವೇನೆಂದರೆ ದಲಿತರು ಎಲ್ಲಾ ಜಾತಿಯ ಜನರಿಂದ ಶೋಷಣೆಗೆ ಒಳಗಾಗಿರುವುದರಿಂದ, ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಬೇರೆ ಎಲ್ಲಾ ಜಾತಿಯ ಜನರಿಗಿಂತ ಹೆಚ್ಚಾಗಿ ಶೋಷಣೆಗೆ

ಒಳಗಾಗಿರುವುದರಿಂದ ಬೇರೆ ಎಲ್ಲಾ ಜಾತಿಗಳಿಗಿಂತ ಕ್ರಾಂತಿಕಾರಿ ಮನೋಭಾವನೆಯನ್ನು ಹೊಂದಿರುತ್ತಾರೆ. ಬೇರೆ ಜಾತಿಯವರು ಯಾವುದೋ ಒಂದು ರೀತಿಯಲ್ಲಿ ಒಂದು ಮಟ್ಟದವರೆಗೆ ದಲಿತರನ್ನು ಶೋಷಿಸುತ್ತಾರೆ. ಆದ್ದರಿಂದ ಅವರು ಆ ಮಟ್ಟಿಗೆ ಶೋಷಣಾ ಮನೋಭಾವವನ್ನು ಹೊಂದಿದ್ದಾರೆ. ಆದ್ದರಿಂದ ಹೆಚ್ಚು ಕ್ರಾಂತಿಕಾರಿ ಜಾತಿಯಾದ ದಲಿತರಿಗೆ ರಾಜಕೀಯ ಅಧಿಕಾರ ಸಿಗಬೇಕೆಂದು ಅವರು ಹೇಳುತ್ತಾರೆ. ಅದರೊದಿಗೆ ಶೇ. 95 ರಷ್ಟು ದಲಿತರು ಬಡವರಾಗಿ, ಭೂಹೀನರಾಗಿ, ರೈತಕೂಲಿಗಳಾಗಿ, ಕಾರ್ಮಿಕರಾಗಿ, ಕೂಲಿಕೆಲಸ ಮಾಡುತ್ತಿರುವುದರಿಂದ ಇವರೇ ಕಾರ್ಮಿಕ ವರ್ಗದವರಾಗಿದ್ದಾರೆ, ಹೀಗಾಗಿ ಇವರಿಗೆ ರಾಜಕೀಯ ಅಧಿಕಾರ ಸಿಗಬೇಕೆಂಬುದು ಇವರ ವಾದವಾಗಿದೆ.

ಇಂತಹ ವಾದವು ಮೂಲಭೂತವಾಗಿ ಜಾತಿ ಮತ್ತು ವರ್ಗಗಳ ನಡುವಿನ ಸಂಬಂಧವೇನು, ಜಾತಿಯ ದೌರ್ಜನ್ಯಕ್ಕೆ ಕಾರಣಗಳೇನು, ಜಾತಿ ನಿರ್ಮೂಲನೆಯ ಹಾದಿ ಯಾವುದು ಎಂಬ ವಿಷಯಗಳಿಗೆ ಸಂಬಂಧಿಸಿದೆ. ಮೊದಲನೆಯದಾಗಿ ಜಾತಿ ಮತ್ತು ವರ್ಗಗಳ ನಡುವಿನ ಸಂಬಂಧವನ್ನು ನೋಡೋಣ. ಭಾರತದಲ್ಲಿ ಇಂದಿಗೂ ಜಾತಿ ಮತ್ತು ವರ್ಗಕ್ಕೆ ಹತ್ತಿರದ ಸಂಬಂಧವಿದೆ. ಆದರೆ ಜಾತಿ ಮತ್ತು ವರ್ಗ ಒಂದೇ ಅಲ್ಲ. ಶೇ. ೯೦ ರಷ್ಟು ದಲಿತರು ಮೂಲಭೂತ ವರ್ಗವಾಗಿದ್ದಾರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅದರೆ ಇಂದಿನ ಉತ್ಪಾದಾನದ ವಿಧಾನದಲ್ಲಿ ಬೆಳವಣಿಗೆ ಹೊಂದಿರುವ ಕಾರಣ ಎಲ್ಲಾ ಜಾತಿಗಳಲ್ಲಿ ವರ್ಗ ವಿಭಿನ್ನತೆಗಳು ಇವೆ. ಆಳುವ ವರ್ಗದಿಂದ ಹಿಡಿದು ಮೂಲಭೂತ ವರ್ಗದವರೆಗಿನ ಎಲ್ಲಾ ಜಾತಿಗಳೊಳಗೂ ವರ್ಗಗಳು ಹುಟ್ಟಿಕೊಂಡಿವೆ. ಇನ್ನೂ ಹೇಳಬೇಕೆಂದರೆ ತೀರಾ ಹಿಂದುಳಿದ ಬುಡಕಟ್ಟು ಸಮಾಜದಲ್ಲಿ ಕೂಡ ವರ್ಗ ತಾರತಮ್ಯಗಳು ಇವೆ. ದಲಿತ ಹಿನ್ನಲೆಯಿಂದ ಬಂದು ಕೇಂದ್ರ ಮತ್ತು ರಾಜ್ಯ ಸಚಿವರುಗಳಾಗಿರುವವರು ಮತ್ತು ಉನ್ನತ ಅಧಿಕಾರಿಗಳಾಗಿ ಇರುವವರು ಹಾಗೂ ಹಳ್ಳಿಗಳಲ್ಲಿ ಕೂಲಿ ಕೆಲಸ ಮಾಡುವ ದಲಿತ ಜನಾಂಗವು ಒಂದೇ ಅಲ್ಲ. ಅದೇ ರೀತಿಯಲ್ಲಿ ದೊಡ್ಡ ಭೂಮಾಲೀಕ, ಬಂಡವಾಳಶಾಹಿ ಮಂತ್ರಿಗಳು ಮತ್ತು ಉನ್ನತ ಅಧಿಕಾರಿಗಳಾಗಿ ಇರುವ ಹಿಂದುಳಿದ ಮತ್ತು ಮೇಲ್ಜಾತಿಗೆ ಸೇರಿದ ಈ ವರ್ಗವು ಭೂಮಿಯಲ್ಲಿ, ಕಾರ್ಖಾನೆಯಲ್ಲಿ ಶ್ರವಜೀವಿಗಳಾಗಿ ಜೀವನ ಮಾಡುವ ಹಿಂದುಳಿದ ಮೇಲ್ಜಾತಿ ವರ್ಗವೂ ಒಂದೇ ಅಲ್ಲ. ಇದರ ಅರ್ಥ ಜಾತಿ ಮತ್ತು ವರ್ಗಕ್ಕೆ ಯಾವು ಸಂಬಂಧವೂ ಇಲ್ಲ ಎಂದಲ್ಲ. ಅಂತಹ ದೃಷ್ಟಿಕೋನವು ಯಾಂತ್ರಿಕವಾದುದು. ಪ್ರತಿಯೊಂದು ಜಾತಿಯ ಒಳಗೆ ವರ್ಗ ತಾರತಮ್ಯಗಳನ್ನು ಗಮನಿಸಿ ಎಲ್ಲಾ ಜಾತಿಗಳಲ್ಲಿ ಇರುವ ಆಳುವ ವರ್ಗಗಳ ಶಕ್ತಿಗಳನ್ನು ಗುರುತಿಸಿ ಅವರನ್ನು ಪ್ರತ್ಯೇಕಿಸಿ ಎಲ್ಲಾ ಬಡವರ್ಗದ ಜನರನ್ನು ಶ್ರಮಿಕ ವರ್ಗದೊಂದಿಗೆ ಒಂದಾಗಿ ಸೇರಿಸುವುದು ಅತಿಮುಖ್ಯ. ಈ ತರಹ ಒಂದಾಗಿಸುವ ವೇಳೆಯಲ್ಲೇ ಜಾತಿ ತಾರತಮ್ಯ, ಅಸ್ಪೃಶ್ಯ ದೌರ್ಜನ್ಯಗಳು ಜಾತಿಯಯ ಪೂರ್ವಾಗ್ರಹಗಳು ಮುಂತಾದವನ್ನು ವಿರೋಧಿಸಿ ಹೋರಾಡಬೇಕು. ನಿರ್ದಿಷ್ಟವಾಗಿ ಮೇಲ್ಜಾತಿ ದುರಭಿಮಾನವನ್ನು (ಅಂದರೆ ಮೇಲ್ಜಾತಿ ಹಾಗೂ ಹಿಂದುಳಿದ ಜಾತಿಗಳಲ್ಲಿರುವ ದುರಭಿಮಾನವನ್ನು) ವಿರೋಧಿಸಿ ಸತತವಾಗಿ ಹೋರಾಟ ಮಾಡಿ ವರ್ಗ ಐಕ್ಯತೆಯನ್ನು ಸ್ಥಾಪಿಸಬೇಕು. ಜಾತಿಯ ಅಂಶಗಳನ್ನು ಗಮನಿಸದೆ ಬರಿ ವರ್ಗ ಹೋರಾಟ ಎಂಬುದು ಆಚರಣೆಯಲ್ಲಿ ಜಾತಿ ದೌರ್ಜನ್ಯಕ್ಕೆ ಸಹಾಯಕವಾಗುತ್ತದೆ. ಅದೇ ರೀತಿಯಲ್ಲಿ ವರ್ಗ ವಿಭಿನ್ನತೆಗಳನ್ನು ಗಮನಿಸದೆ ಬರಿ ಜಾತಿಯ ಹೋರಾಟ ಎಂಬುದು ಆ ಜಾತಿಗಳಲ್ಲಿನ ಆಳುವ ವರ್ಗದ ಶಕ್ತಿಗಳಿಗೆ ಅನುಕೂಲ ಮಾಡಿಕೊಡುತ್ತದೆ. ಇದುವರೆಗಿನ ನಮ್ಮ ಅನುಭವಗಳು ನಮಗೆ ಇದನ್ನು ತೋರಿಸಿಕೊಟ್ಟಿವೆ.

ಎರಡನೆಯದಾಗಿ ಜಾತಿ ಪದ್ಧತಿ ಇನ್ನೂ ಮುಂದುವರಿಯಲು ಕಾರಣವೇನೆಂಬುದನ್ನು ನೋಡೋಣ.

ವರ್ಗ ಸಮಾಜದ ಹುಟ್ಟಿನೊಂದಿಗೆ ಜಾತಿ ಪದ್ಧತಿ ಕೂಡ ಹುಟ್ಟಿಕೊಂಡಿದೆಯಾದರೂ ಇದು ಸಾಮಾಜಿಕ ವ್ಯವಸ್ಥೆಯಾಗಿ ಊಳಿಗಮಾನ್ಯ ಸಮಾಜದಲ್ಲಿ ರೂಪುಗೊಂಡಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಇಂದಿಗೂ ಊಳಿಗಮಾನ್ಯ ವ್ಯವಸ್ಥೆಯು ಮುಂದುವರಿಕೆಯಾಗಿ ಅರೆ ಊಳಿಗಮಾನ್ಯ ಉತ್ಪಾದನಾ ವಿಧಾನ ಮುಂದುವರಿದಿರುವ ಕಾರಣ ಜಾತಿ ಕೂಡ ಮುಂದುವರಿದಿದೆ. ಊಳಿಗಮಾನ್ಯ ವ್ಯವಸ್ಥೆ ನಾಶವಾಗದೆ ಇರುವುದರಿಂದ ಅಸ್ಪೃಶ್ಯತೆ, ಬ್ರಾಹ್ಮಣವಾದ, ವರ್ಣಾಶ್ರಮ ಶ್ರೇಣೀಕೃತ ಪದ್ಧತಿ ಮುಂತಾದ ಸಾಮಾಜಿಕ ಸಾಂಸ್ಥಿಕ ರೂಪಗಳು ಇನ್ನು ಕೂಡ ಮುಂದುವರಿದಿವೆ. ಸಾವಿರಾರು ವರ್ಷಗಳಿಂದ ದೃಢವಾಗಿ ನಿಂತಿರುವ ಈ ಸಾಂಸ್ಥಿಕ ಅಂಶಗಳು ಶ್ರಮಿಕರನ್ನೂ ಒಳಗೊಂಡಂತೆ ಎಲ್ಲಾ ಜನಗಳ ಮೇಲೂ ಆಳವಾದ ಪ್ರಭಾವವನ್ನು ಬೀರಿವೆ. ಇದನ್ನು ತೊಲಗಿಸಬೇಕಾದರೆ ರಾಜಕೀಯ, ಸಾಮಾಜಿಕ, ಆರ್ಥಿಕ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಇದನ್ನು ವಿರೋಧಿಸಿ ತೀವ್ರ ಹೋರಾಟ ನಡೆಸಬೇಕು. ಜಾತಿ ಎಂಬುದು ಅಡಿಪಾಯ ಹಾಗೂ ಮೇಲ್ರಚನೆಗಳೆರಡರಲ್ಲೂ ಇದೆಯೆಂಬುದನ್ನು ನಾವೀಗಾಗಲೇ ನೋಡಿದ್ದೇವೆ. ಜಾತೀಯತೆಯ ಮೂಲವಾಗಿರುವ ಊಳಿಗಮಾನ್ಯ ವ್ಯವಸ್ಥೆಯನ್ನು ಬೇರುಸಹಿತ ಕಿತ್ತೊಗೆಯದೆ ಜಾತಿಯನ್ನು ನಿರ್ಮೂಲಸುವುದು ಸಾಧ್ಯವಿಲ್ಲ. ಅಂದರೆ ಈ ಸಮಾಜ ವ್ಯವಸ್ಥೆಯನ್ನು ಕ್ರಾಂತಿಯ ಮೂಲಕ ಬದಲಾಯಿಸದೇ ಜಾತಿಯನ್ನು ನಿರ್ಮೂಲಿಸಲು ಸಾಧ್ಯವಿಲ್ಲ. ಇದರರ್ಥ ಕ್ರಾಂತಿ ನಡೆಯುವವರೆಗೂ ಜಾತಿ ದೌರ್ಜನ್ಯಗಳು ಹಾಗೇ ಮುಂದುವರಿಯಬೇಕು ಎಂದೋ ಅಥವಾ ಅದನ್ನು ವಿರೋಧಿಸಿ ಹೋರಾಟ ಮಾಡಬಾರದು ಎಂದೊ ಅರ್ಥವಲ್ಲ. ಬದಲಿಗೆ ಈ ಸಾಮಾಜಿಕ ವ್ಯವಸ್ಥೆಯ ಒಳಗೆ ಜಾತಿ ನಿರ್ಮೂಲನೆ ಸಾಧ್ಯವಿಲ್ಲ ಎನ್ನುವುದೇ ಇದರ ಮುಖ್ಯ ಅಂಶ. ಸಮಾಜ ವ್ಯವಸ್ಥೆಯನ್ನು ಬದಲಾಯಿಸದೆ ಅದರೊಳಗೇ ಹೋರಾಟವನ್ನು ಎಷ್ಟೇ ತೀವ್ರವಾಗಿ ನಡೆಸಿದರೂ ಅದು ಸುಧಾರಣಾವಾದಿ ಅಥವಾ ಕೆರಿರಿಸ್ಟ್ ರಾಜಕೀಯವಾಗುತ್ತದೆ.

ಈ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಲು ನಡೆಯುವ ಹೋರಾಟದ ಭಾಗವಾಗಿ ಜಾತಿಯ ವಿರುದ್ಧ, ಅದರ ಕ್ರೂರ ರೂಪವಾದ ಅಸ್ಪೃಶ್ಯತೆಯ ವಿರುದ್ದ, ಅದರ ಸಿದ್ಧಾಂತ ರೂಪವಾದ ಬ್ರಾಹ್ಮಣೀಯ ಹಿಂದೂಧರ್ಮದ ವಿರುದ್ಧ ಸೈದ್ಧಾಂತಿಕವಾಗಿ, ಆಚರಣಾತ್ಮಕವಾಗಿ ಹೋರಾಡಬೇಕಿರುವುದು ಅತ್ಯಗತ್ಯ. ಮೂರನೆಯದಾಗಿ ರಾಜಕೀಯ ಅಧಿಕಾರವನ್ನು ವಶಪಡಿಸಿಕೊಳ್ಳುವ ಹಾದಿಯ ಬಗ್ಗೆ ದಲಿತ ಸಂಘಟನೆಗಳು ಸ್ಪಷ್ಟವಾಗಿ ಏನೂ ಹೇಳಿಲ್ಲ. ಆದರೆ ಇದುವರೆಗೂ ಇಂತಹ ಸಂಘಟನೆಗಳ ಆಚರಣೆಯನ್ನು ನೋಡಿದಾಗ ಕಾನೂನುವಾದಿ ಚುನಾವಣಾ ಹಾದಿಯ ಮೂಲಕವೇ ರಾಜಕೀಯ ಅಧಿಕಾರವನ್ನು ಪಡೆಯುವುದು ಇವರ ಮಾರ್ಗವಾಗಿದೆ. ಈಗಾಗಲೇ 'ಶಾಂತಿ'ಯುತ ರೀತಿಯಲ್ಲಿ ಅಧಿಕಾರವನ್ನು ಪಡೆಯುತ್ತೇವೆ ಎಂದು ಹೇಳಿದ ಬಹುಜನ ಪಕ್ಷವು 'ಮನುವಾದಿ' ಪಕ್ಷವಾದ ಬಿಜೆಪಿಯೊಂದಿಗೆ ಕೈಜೋಡಿಸಿರುವುದನ್ನು ನೋಡಿದ್ದೇವೆ. ಅದರಂತೆಯೇ 'ಹಿಂದುಳಿದವರಿಗೆ ಅಧಿಕಾರ' ಎಂದು ಘೋಷಿಸಿದ 'ಸಾಮಾಜಿಕ ನ್ಯಾಯ' ಪಕ್ಷಗಳು ಕಾಂಗ್ರೆಸ್‌ನೊಂದಿಗೆ ಸೇರಿ ಸಂಯುಕ್ತ ಅಧಿಕಾರ ಹಿಡಿಯಲು ಒದ್ದಾಡುತ್ತಿದ್ದಾರೆ. ಆದ್ದರಿಂದ ಸಂಸತ್ತಿನ ಮೂಲಕ ತುಳಿತಕ್ಕೊಳಗಾದ ಜಾತಿಗಳಿಗೆ

ಅಧಿಕಾರ ಎಂಬುದು ವಾಸ್ತವವಾಗಿ ಆ ಜಾತಿಯಲ್ಲಿರುವ ಆಳುವ ವರ್ಗಗಳ ಶಕ್ತಿಗಳಿಗೆ ಅಧಿಕಾರ ಎಂದೇ ಅರ್ಥ. ಈ ರೀತಿಯಲ್ಲಿ ಅಧಿಕಾರಕ್ಕೆ ಬರುವವರು ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಿ, ಜಾತಿ ದೌರ್ಜನ್ಯವನ್ನು ಸಂಪೂರ್ಣವಾಗಿ ತೊಲಗಿಸುವ ಬದಲು ತಮ್ಮ ಓಟು ಬ್ಯಾಂಕುಗಳನ್ನು ಕಾಪಾಡುವ ಸಲುವಾಗಿ ಜಾತಿ ಗಲಭೆಗಳನ್ನು ಪ್ರಚೋದಿಸಿ, ಜಾತಿ ವರ್ಗೀಕರಣವನ್ನು ಮತ್ತಷ್ಟು ತೀವ್ರಗೊಳಿಸಿ ಶ್ರಮಿಕ ಜನರ ನಡುವೆ ಇರುವ ಐಕ್ಯತೆಯನ್ನು ನಾಶಮಾಡಿ ತಮ್ಮ ಸಂಕುಚಿತ ಹಿತಾಸಕ್ತಿಗಳಿಗಾಗಿ ಪ್ರತಿಯೊಂದು ಜಾತಿಯನ್ನು ಬೇರ್ಪಡಿಸಿ ಅವುಗಳನ್ನು ಸದೃಢೀಕರಿಸುತ್ತಿದ್ದಾರೆ. ದಲಿತ ಸಮುದಾಯಕ್ಕೆ ಪ್ರತ್ಯೇಕ ಮತ ಕ್ಷೇತ್ರ ಎಂಬ ಬೇಡಿಕೆಯೂ ಇದೇ ರೀತಿಯದಾದದ್ದು. ಆಯಾ ಜಾತಿಗಳಿಗೆ ಸೇರಿದ ಆಳುವ ವರ್ಗದ ರಾಜಕಾರಣಿಗಳು ತಮ್ಮ ಜನರನ್ನು ಮತ್ತಷ್ಟು ಗುಲಾಮರನ್ನಾಗಿಸಲು ಇದು ಸಹಾಯಕವಾಗುತ್ತದೆ. ಜಾತಿ ದೌರ್ಜನ್ಯವನ್ನು ವಿರೋಧಿಸಿ ಅವರ ಹಕ್ಕುಗಳಿಗೋಸ್ಕರ ಹೋರಾಡಲು ಜಾತಿ ಸಂಘಟನೆಗಳನ್ನು ಮಾಡುವುದು ಒಂದು ರೀತಿಯಲ್ಲಿ ಜಾತಿಯ ಆಧಾರದಲ್ಲಿ ಜನರನ್ನು ಇಬ್ಭಾಗಗೊಳಿಸಿದಂತಾಗುತ್ತದೆ. ಇಂತಹ ಸಂಸದೀಯ ವ್ಯವಸ್ಥೆಯನ್ನು ಛಿದ್ರಗೊಳಿಸಿ, ಜಾತಿ ವರ್ಗ ಶೋಷಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಾಶಮಾಡಿ ಹೊಸ ಸಮಾಜ ವ್ಯವಸ್ಥೆಯನ್ನು ನಿರ್ಮಿಸುವ ಮೂಲಕವೇ ತುಳಿತಕ್ಕೊಳಗಾದ ಹಿಂದುಳಿದ, ದಲಿತ ಜಾತಿಗೆ ಸೇರಿದ ಶ್ರಮಿಕ ವರ್ಗಕ್ಕೆ ನಿಜವಾದ ರಾಜಕೀಯ ಅಧಿಕಾರ ದೊರಕುವುದು ಸಾಧ್ಯ.

## V. ವರ್ಗ ಹೋರಾಟ ಮತ್ತು ಜಾತಿ ವಿರೋಧಿ ಹೋರಾಟಕ್ಕಿರುವ ಸಂಬಂಧ

ಈ ಶತಮಾನದ ಪ್ರಾರಂಭದಿಂದ ವರ್ಗ ಹೋರಾಟ ಹಾಗೂ ಜಾತಿ ವಿರೋಧಿ ಹೋರಾಟವು ಪ್ರಜ್ಞಾಪೂರ್ವಕವಾಗಿ ಬೇರೆ ಬೇರೆಯಾಗಿ ನಡೆಸಲ್ಪಟ್ಟಿದೆ. ವರ್ಗ ಹೋರಾಟ ನಡೆಸಿದರೆ ಅದು ಜಾತಿ ವಿರೋಧಿ ಹೋರಾಟವೂ ಆಗಿರುತ್ತದೆ. ಅಥವಾ ವರ್ಗ ಹೋರಾಟ ನಡೆಸಿ ವಿಮೋಚನೆ ಪಡೆದಲ್ಲಿ ಜಾತಿಗಳು ತಮ್ಮಷ್ಟಕ್ಕೆ ತಾವೇ ನಾಶವಾಗುತ್ತವೆ ಎಂಬ ತಪ್ಪು ಧೋರಣೆಯೂ; ಅದೇ ರೀತಿ ಜಾತಿ ದೌರ್ಜನ್ಯವನ್ನು ವಿರೋಧಿಸಿ ನಡೆಸುವ ಹೋರಾಟವೇ ಪ್ರಮುಖವಾದುದು, ವರ್ಗ ಹೋರಾಟ ನಂತರ ನಡೆಸಬೇಕಿರುವಂತದ್ದು ಎಂಬ ಸಂಕುಚಿತ ದೃಷ್ಟಿಕೋನಗಳು ಇದುವರೆಗೆ ಮೇಲುಗೈ ಪಡೆದಿವೆ. ಒಂದಕ್ಕೆ ತದ್ವಿರುದ್ಧವಾಗಿ ಮತ್ತೊಂದನ್ನು ನಿಲ್ಲಿಸುವ ಕ್ರಮ ಇದಾಗಿದೆ. ಯಾವುದೇ ಹೋರಾಟ ನಡೆಸಿದರೂ ಯಥಾರ್ಥದಲ್ಲಿ ಎರಡೂ ಅಂಶಗಳನ್ನು ಒಳಗೊಂಡಿದೆ. ಈಗಿರುವ ವರ್ಗ ವ್ಯವಸ್ಥೆಯನ್ನು, ಜಾತಿ ವ್ಯವಸ್ಥೆಯನ್ನು ಭೂಮಾಲೀಕ ದಲ್ಲಾಳಿ ಬಂಡವಾಳಶಾಹಿ ಸಾಮ್ರಾಜ್ಯಶಾಹಿ ವರ್ಗಗಳು ಕಾಪಾಡುತ್ತಿವೆ. ಇವರನ್ನು ವಿರೋಧಿಸಿ ನಡೆಯುವ ಹೋರಾಟಗಳು ಯಥಾರ್ಥದಲ್ಲಿ ಸಾಮಾಜಿಕ ವ್ಯವಸ್ಥೆಯ ಮೇಲೆ ನಡೆಸುವ ದಾಳಿಯಾಗಿರುತ್ತದೆ. ಆದರೆ ಕ್ರಾಂತಿಕಾರಿ ಹೋರಾಟವನ್ನು ಮುನ್ನಡೆಸಬೇಕಿದ್ದಲ್ಲಿ ಪ್ರತಿಯೊಂದು ಪ್ರಮುಖ ಅಂಶವನ್ನು ಪ್ರಜ್ಞಾಪೂರ್ವಕವಾಗಿ ಯೋಜಿತ ರೀತಿಯಲ್ಲಿ ನಡೆಸಬೇಕಿದೆ. ಊಳಿಗಮಾನ್ಯ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದೊಂದಿಗೆ ಜಾತಿ ವಿರೋಧಿ ಹೋರಾಟವನ್ನು ಬೆಸೆದು ಪ್ರಜ್ಞಾಪೂರ್ವಕವಾಗಿ ಹೋರಾಟ ನಡೆಸಬೇಕು. ವರ್ಗ ಶೋಷಣೆ ಮತ್ತು ವರ್ಗ ದಮನವನ್ನು ವಿರೋಧಿಸಿ ಹಲವು ಬಗೆಯ ಹೋರಾಟ ನಡೆಸುವಂತೆ ಜಾತಿ ದಮನ ಮತ್ತು ಜಾತಿ ಶೋಷಣೆಯ ರೂಪಗಳನ್ನು ವಿರೋಧಿಸಿ ಹೋರಾಡುವುದೂ ಅತ್ಯಗತ್ಯವಾಗಿದೆ.